ಎಂ. ಬಿ. ಪಾಟೀಲ

M.B. Patil

ಬಿ. ಎಸ್. ವೆಂಕಟಲಕ್ಷ್ಮೀ

B. S. Venkatalakshmi



ಕರ್ನಾಟಕ ಲಲಿತಕಲಾ ಅಕಾಡೆಮಿ

KARNATAKA LALITHAKALA ACADEMY

ಎಂ. ಬಿ. ಪಾಟೀಲ

M. B. Patil

ಬಿ.ಎಸ್. ವೆಂಕಟಲಕ್ಷ್ಮಿ

B. S. Venkatalakshmi

ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ೨ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

Karnataka Lalithakala Academy

Kannada Bhavana, 2nd Floor, J.C. Road, Bangalore - 560 002

M. B. PATIL, *a Biography* *by* ***B.S. Venkatalakshmi***
Published by **H. Shankrappa,** Registrar, **Karnataka Lalithakala Academy**
Kannada Bhavana, J.C. Road, Bangalore -560 002

Pages:

First Impression : 2000

Price : Rs. 35/-

ಪ್ರಧಾನ ಸಂಪಾದಕರು
ಪ್ರೊ. ಅಂದಾನಿ ಎ.ಜಿ.

ಪ್ರಕಟಣಾ ಸಮಿತಿ
ಶ್ರೀ ಚಿ. ಸು. ಕೃಷ್ಣಸೆಟ್ಟಿ
ಶ್ರೀ ಆರ್.ಜಿ.ರಾಯ್ಕರ್
ಶ್ರೀ ರಾಜೇಂದ್ರ ಅಷ್ಟಗಿ
ಶ್ರೀ ಅಶೋಕ ಟಿ. ಅಕ್ಕಿ
ಶ್ರೀಮತಿ ಬಾನುಮುನಾಫ್

ಪ್ರಕಾಶಕರು
ಶ್ರೀ ಎಚ್. ಶಂಕರಪ್ಪ
ರಿಜಿಸ್ಟ್ರಾರ್

Translated by
Smt. B.S. Venkatalakshmi

Printed by
Sathyasri Printers Pvt. Ltd.,
Chamarajapet, Bangalore -560 018. Tele: 6525736

ಅಧ್ಯಕ್ಷರ ಮಾತು

ಕರ್ನಾಟಕ ಲಲಿತ ಕಲಾ ಅಕಾಡೆಮಿಯು ಕಲೆ ಮತ್ತು ಕಲಾವಿದರ ಸರ್ವತೋಮುಖ ಪ್ರಗತಿಗೆ ಹಲವಾರು ಪ್ರಮುಖ ಯೋಜನೆಗಳನ್ನು ರೂಪಿಸಿದೆ. ಇವುಗಳಲ್ಲಿ ಪುಸ್ತಕ ಪ್ರಕಟಣೆಯೂ ಒಂದು ಗಮನಾರ್ಹ ಕಾರ್ಯಕ್ರಮ. ಅಕಾಡೆಮಿಯು ಈವರೆಗೆ ಅನೇಕ ಹಿರಿಯ ಹಾಗೂ ಸಮಕಾಲೀನ ಕಲಾವಿದರ ಬಗ್ಗೆ ಪುಸ್ತಕಗಳನ್ನು ಹೊರತಂದಿದೆ. ಈ ಪುಸ್ತಕಗಳು ಕಲಾವಿದರ ಮತ್ತು ಅವರ ಕಲೆಯ ಪರಿಚಯ ಮಾಡಿಸುವುದರ ಜೊತೆಗೆ ಕಲಾಕ್ಷೇತ್ರದ ಬೆಳವಣಿಗೆಯ ಬಗೆಗೂ ತಿಳಿಯಲು ಸಹಾಯ ಮಾಡಬಲ್ಲವು.


ಸಮಕಾಲೀನ ಕಲಾವಿದರ ಮಾಲೆಯಲ್ಲಿ ಈಗ ಶ್ರೀ ಎಂ.ಬಿ. ಪಾಟೀಲ ಅವರ ಬಗೆಗಿನ ಈ ಪುಸ್ತಕವನ್ನು ಹೊರತರಲು ನನಗೆ ಅತೀವ ಸಂತಸ ಮತ್ತು ಹೆಮ್ಮೆ ಎನಿಸುತ್ತದೆ. ಇವರ ಬಗೆಗಿನ ಈ ಕೃತಿ ನನ್ನ ಅಧ್ಯಕ್ಷತೆಯ ಅವಧಿಯಲ್ಲೇ ಪ್ರಕಟಗೊಳ್ಳುತ್ತಿರುವುದು ನನ್ನ ಸೌಭಾಗ್ಯವೆಂದೇ ಭಾವಿಸುತ್ತೇನೆ.

ಶ್ರೀ ಪಾಟೀಲರು ತಮ್ಮ ಸರ್ಕಾರಿ ಸೇವೆಯ ನಿರ್ವಹಣೆಯ ನಡುವೆಯೂ ನಿರಂತರ ಕ್ರಿಯಾಶೀಲರಾಗಿ ಕಲಾಸಾಧನೆಯನ್ನು ಮುನ್ನಡೆಸಿಕೊಂಡು ಬಂದು, ಇಂದು ಸಮಕಾಲೀನ ಪ್ರಮುಖ ಕಲಾವಿದರಲ್ಲೊಬ್ಬರಾಗಿ ಗುರುತಿಸಿಕೊಂಡಿದ್ದಾರೆ.

ಶ್ರೀಮತಿ ಬಿ.ಎಸ್. ವೆಂಕಟಲಕ್ಷ್ಮಿ ಅವರು ಕಲಾವಿದರ ಜೀವನ, ಚಿಂತನೆ, ಅವರ ಬದುಕಿನ ಮೌಲ್ಯಗಳನ್ನೆಲ್ಲಾ ಸೂಕ್ಷ್ಮವಾಗಿ ಅರಿತುಕೊಂಡು, ಆಳವಾಗಿ ಕಲಾವಿದರ ಜೊತೆಗೆ ಚರ್ಚಿಸಿ ಈ ಕೃತಿಯನ್ನು ಬರೆದುಕೊಟ್ಟಿರುವರು. ಜೊತೆಗೆ ಆಂಗ್ಲ ಭಾಷೆಗೂ ಭಾಷಾಂತರಿಸಿದ್ದಾರೆ. ಅವರಿಗೆ ನಾನು ಅಕಾಡೆಮಿಯ ಪರವಾಗಿ ವಂದಿಸುತ್ತೇನೆ. ಅಕಾಡೆಮಿಯ ಸದಸ್ಯರಾದ ಡಾ।। ಹೆಚ್. ಚಂದ್ರಶೇಖರ ಮುದ್ರಣದ ಕರಡಚ್ಚನ್ನು ತಿದ್ದಿರುವದಲ್ಲದೆ ಮುದ್ರಣದ ಮೇಲ್ವಿಚಾರಣೆಯನ್ನು ನೋಡಿಕೊಂಡಿದ್ದಾರೆ. ಶ್ರೀ ಪಾಟೀಲರ ವ್ಯಕ್ತಿತ್ವವನ್ನು ಬಿಂಬಿಸುವ ಛಾಯಾಚಿತ್ರವನ್ನು ನೀಡಿದ್ದಾರೆ. ಡಾ।। ಚಂದ್ರಶೇಖರ ಅವರಿಗೆ ಅಕಾಡೆಮಿಯ ಪರವಾಗಿ ಕೃತಜ್ಞತೆಗಳು.

ಎಂದಿನಂತೆ ಕಲಾರಸಿಕರು ಈ ಪುಸ್ತಕವನ್ನು ತಮ್ಮದಾಗಿಸಿಕೊಳ್ಳುತ್ತೀರೆಂದು ಆಶಿಸುವೆ.

ಪ್ರೊ. ಅಂದಾನಿ ವಿ.ಜಿ.
ಅಧ್ಯಕ್ಷರು



ಎಂ. ಬಿ. ಪಾಟೀಲ

M. B. PATIL

ಎಂ.ಬಿ. ಪಾಟೀಲ:
ವಿಜಾಪುರದ ಕರಿಮಣ್ಣಿನಲ್ಲಿ ಅರಳಿದ ಕಲಾಪ್ರತಿಭೆ

ವಿಜಾಪುರ ಜಿಲ್ಲೆಯ ತಿಕೋಟಾದಲ್ಲಿ ವಿಜೃಂಭಣೆಯಿಂದ ನಡೆಯುವ ಕಾರ್ ಹುಣ್ಣಿಮೆಯಂದು ಮದುವಣಗಿತ್ತಿಯಂತೆ ಸಿಂಗಾರಗೊಂಡು ಎಲ್ಲೆಡೆ ಸಂಭ್ರಮ ಉಲ್ಲಾಸಗಳು ನಲಿದಾಡುತ್ತಿದ್ದಾಗ ಪುಟ್ಟ ಬಾಲಕ ಮಲ್ಲಿಕಾರ್ಜುನ ಆ ಸಂದರ್ಭಕ್ಕೆಂದೇ ಅಲ್ಲಿನ ಲಕ್ಷ್ಮಣಕುಂಬಾರ ಹಾಗೂ ಆತನ ಮನೆತನದವರು ತಯಾರಿಸುತ್ತಿದ್ದ ಮಣ್ಣಿನ ಎತ್ತುಗಳನ್ನು ಬೆರಗುಗಣ್ಣಿನಿಂದ ದಿಟ್ಟಿಸುತ್ತಾ ನಿಂತಿರುತ್ತಿದ್ದ. ಕಾರ್ ಹುಣ್ಣಿಮೆ ವಿಜಾಪುರದ ಜಾನಪದ ಸೊಗಡನ್ನೆಲ್ಲ ಮೈಗೂಡಿಸಿಕೊಂಡ ಒಂದು ಉತ್ಸವ ಮಾತ್ರವಲ್ಲ; ಗ್ರಾಮದ ಜನರಿಗೆ ತಮ್ಮ ಕುಂಬಾರಿಕೆಯ ಕೈಚಳಕವನ್ನು ಅಭಿವ್ಯಕ್ತಗೊಳಿಸಲು ಅನುವು ಮಾಡಿಕೊಡುವಂಥ ಒಂದು ಸುಂದರ ಸಂದರ್ಭ.

ಸೊಬಗಿನ ಎತ್ತುಗಳನ್ನು ಮಣ್ಣಿನಿಂದ ಸೃಷ್ಟಿಸುವ ಈ ಕಾಯಕದ ಹಿಂದೆ ಆರೋಗ್ಯಕರವಾದ ಸ್ಪರ್ಧಾತ್ಮಕ ಮನೋಭಾವ. ಮಲ್ಲಿಕಾರ್ಜುನ ತನ್ನ ಬಾಲ್ಯದಿಂದಲೂ ಕಂಡಿದ್ದ ಈ ವೈಭವ ಅವನ ಕಲಾತ್ಮಕ ಮನಸ್ಸನ್ನು ಆತನಿಗೆ ಅರಿವಿಲ್ಲದಂತೆಯೇ ಮಾಟಗೊಳಿಸುತ್ತಲಿತ್ತು. ಗಣೇಶ ಚತುರ್ಥಿಯಂದು ಗೆಳೆಯ ತಮ್ಮಣ್ಣನ ತಂದೆ ಎರೆಮಣ್ಣಿನಿಂದ ಗಣಪನನ್ನು ತಯಾರಿಸಿ ಕಲ್ಲಿನ ಮೇಲೆ ತಿಕ್ಕಿದ ಬಳಪದ ಕುಡಿಕೆಗೆ ಬಣ್ಣವನ್ನು ಬೆರೆಸಿ ಮೂರ್ತಿಯನ್ನು ಥಳಥಳಗೊಳಿಸಿದಾಗ ಅದನ್ನು ಕಾಣಲೆಂದೇ ಆಗಮಿಸುತ್ತಿದ್ದ ಊರಿನ ಹಿರಿಯ ಶಿವಪ್ಪಗೌಡರು ಕಟ್ಟೆಯ ಮೇಲೆ ಕೂತಾಗ, ಮಲ್ಲಿಕಾರ್ಜುನನೂ ಕಟ್ಟೆಯ ತುದಿಯಲ್ಲಿ ಕೂತು ಕಲಾವಿದರಿಗೆ ದೊರೆತ ಮೆಚ್ಚಿಗೆಯನ್ನು ಕಂಡು ತಾನೂ ಹಿರಿಹಿರಿ ಹಿಗ್ಗುತ್ತಿದ್ದ. ಕಾರ್ ಹುಣ್ಣಿಮೆ, ಗಣೇಶ ಉತ್ಸವಗಳಂದು ಮೂರ್ತಿಯನ್ನು ಪೂಜಿಸುತ್ತಿದ್ದವರ ಮನೆಗಳಿಗೆಲ್ಲ ಮಲ್ಲಿಕಾರ್ಜುನನ ಭೇಟಿ. ಅವುಗಳ ವಿನ್ಯಾಸಗಳನ್ನು ಅರ್ಥಮಾಡಿಕೊಳ್ಳುವ ಹವಣಿಕೆ. ಮಣ್ಣಿನ ಎತ್ತುಗಳನ್ನೇ ಆಟಿಗೆಗಳನ್ನಾಗಿಸಿಕೊಳ್ಳುತ್ತಿದ್ದ ಮಲ್ಲಿಕಾರ್ಜುನ ಹಾಗೂ ಆತನ ಗೆಳೆಯರು ಅವಕ್ಕೆ ದಾರಕಟ್ಟಿ ರಸ್ತೆಯಲ್ಲೆಲ್ಲ ಅವುಗಳ ಮೆರವಣಿಗೆಯನ್ನು ಕೊಂಡೊಯ್ಯುತ್ತಿದ್ದರು. ಗೆಳೆಯರ ಗುಂಪು ಚದುರಿದ ನಂತರ ತಾನೊಬ್ಬನೇ ತೋಟಕ್ಕೆ ಹೊರಟ ಮಲ್ಲಿಕಾರ್ಜುನ ಗಿಡದ ಬುಡದಲ್ಲಿ ಜೇಡಿ ಮಣ್ಣನ್ನು ಸುರುವಿಕೊಂಡು ಹಳ್ಳದಲ್ಲಿ ಹರಿಯುತ್ತಿದ್ದ ನೀರನ್ನು ಆ ಜೇಡಿ ಮಣ್ಣಿಗೆ ಬೆರೆಸಿ ಏಕಾಂತದಲ್ಲಿ ಕೂತು ತಾನೇ ಮೂರ್ತಿಗಳನ್ನು ತಯಾರಿಸುವ ಪ್ರಯತ್ನದಲ್ಲಿ ಮುಳುಗಿರುತ್ತಿದ್ದ.

ಕರ್ನಾಟಕದ ಚಿತ್ರಕಲೆಯ ವಲಯದಲ್ಲಿ, ಚಿತ್ರಕಲಾ ರಸಿಕರ ಬಳಗದಲ್ಲಿ ಎಂ.ಬಿ. ಪಾಟೀಲ ಎಂದೇ ಜನಪ್ರಿಯರಾಗಿರುವ ಮಲ್ಲಿಕಾರ್ಜುನ ಭೀಮನಗೌಡ ಪಾಟೀಲ ಎಳೆತನದಲ್ಲೇ ತಮ್ಮ ಪರಿಸರದಲ್ಲಿ ಕಂಡದ್ದು ಇಂಥ ಸೃಜನಾತ್ಮಕ ವಾತಾವರಣವನ್ನು. ಎಂ.ಬಿ. ಪಾಟೀಲರಿಗೆ ಗೌಡರಿಗಿರಬಹುದಾದ ಗತ್ತೂ ಇಲ್ಲ,

ಪಟೇಲರಿಗೆ ಇರಬಹುದಾದ ದರ್ಪವೂ ಇಲ್ಲ. ಆದರೆ ಸುಮಾರು ಆರು ಅಡಿ ಎತ್ತರದ ನಿಲುವಿನ ತೀರಾ ಸಾಮಾನ್ಯ ಉಡುಗೆ ತೊಡುಗೆಯ ಮೃದುಮಾತಿನ ಸರಳ ಸ್ವಭಾವದ ಪಾಟೀಲರು ಯಾವುದೇ ಸ್ಥಾನಮಾನಕ್ಕೆ ಅಂಟಿಕೊಳ್ಳದೆಯೇ ಚಿತ್ರಕಲೆಯ ಅಯಾಮದಲ್ಲಿ ತಮ್ಮ ವ್ಯಕ್ತಿತ್ವದಿಂದಾಗಿಯೇ ಮೆರೆದವರು. ಬದುಕಿನ ಪ್ರತಿಯೊಂದು ಕ್ಷಣವನ್ನು ಚಿತ್ರಕಲೆಯ ಕಲಿಕೆಗಾಗಿ, ತಾವು ಕಲಿತದ್ದನ್ನು ಊರ್ಜಿತಗೊಳಿಸಿಕೊಳ್ಳುವುದಕ್ಕಾಗಿ, ತಮ್ಮ ಅನುಭವದ ಪರಧಿಯನ್ನು ವಿಸ್ತರಿಸಿಕೊಳ್ಳುವುದಕ್ಕಾಗಿ, ತಮ್ಮ ಸುತ್ತಮುತ್ತಲಿನಲ್ಲಿ ಚಿತ್ರಕಲೆಯನ್ನು ಸಾಧ್ಯವಾದಷ್ಟು ಜನಜನಿತಗೊಳಿಸುವುದಕ್ಕಾಗಿ ಬಳಸಿಕೊಂಡವರು. ಅರವತ್ತನೇ ವಯಸ್ಸಿನ ಅಂಚನ್ನು ಇದೀಗ ತಲುಪಲಿರುವ ಎಂ.ಬಿ. ಪಾಟೀಲರು ಇಂದು ಕರ್ನಾಟಕದ ಶ್ರೇಷ್ಠ ಚಿತ್ರಕಲಾವಿದರ ಸಾಲಿನಲ್ಲಿ ಇರುವುದಕ್ಕೆ ಕಾರಣ ಅವರ ಎಡೆಬಿಡದ ಕಾಯಕ. ನಾನಾ ಅಡೆತಡೆಗಳನ್ನು ಎದುರಿಸಿಯೂ ಗುರಿಯತ್ತ ನೆಟ್ಟ ತಮ್ಮ ದೃಷ್ಟಿಯನ್ನು ವಿಚಲಿತಗೊಳಿಸಿಕೊಳ್ಳದೆಯೇ ಅದರತ್ತಲೇ ನಡೆಯುವಲ್ಲಿ ತೋರಿದ ಛಲ; ಎಲ್ಲಕ್ಕಿಂತಲೂ ಹೆಚ್ಚಾಗಿ ನಿರುತ್ಸಾಹ, ನಿರುತ್ತೇಜನಗಳೇ ಬಳುವಳಿಯಾಗಿ ದೊರೆತಾಗಲೂ ಅವನ್ನೆಲ್ಲ ಮೆಟ್ಟಿ ನಿಲ್ಲುವಲ್ಲಿ ಇವರು ತೋರಿದ ಎದೆಗಾರಿಕೆ.

ದನ ಕಾಯುವ ಬಾಲಕ ಬೆಳೆದು ಬಂದ ಬಗೆ

ಮಲ್ಲಿಕಾರ್ಜುನ ಭೀಮನ ಗೌಡ ಪಾಟೀಲ ಅಥವಾ ಎಂ.ಬಿ. ಪಾಟೀಲ ತುಂಬು ಸಂಸಾರದಲ್ಲಿ ಬೆಳೆದವರು. ಹುಟ್ಟಿದ್ದು ವಿಜಾಪುರ ಜಿಲ್ಲೆಯ ತಿಕೋಟಾದಲ್ಲಿ, ೧೦.೧೨.೧೯೪೫ರಂದು. ತಂದೆ ಭೀಮನಗೌಡ ಪಾಟೀಲ, ತಾಯಿ ಭಾಗೀರಥಿ. ಪಾಟೀಲರು ಜನಿಸುವುದಕ್ಕೆ ಮುಂಚೆಯೇ ಇವರ ಮೂವರು ಅಕ್ಕಂದಿರು ತೀರಿಕೊಂಡಿದ್ದರಂತೆ. ಇವರ ಜನನದ ನಂತರ ಹುಟ್ಟಿದ ಒಬ್ಬ ತಮ್ಮನೂ ಸ್ವಲ್ಪ ವರ್ಷಗಳಲ್ಲೇ ಕಣ್ಮರೆಯಾದ. ಹೀಗಾಗಿ ಉಳಿದವರೆಂದರೆ ಪಾಟೀಲರ ಇಬ್ಬರು ಹಿರಿಯಣ್ಣಂದಿರು, ಇವರು ಹಾಗೂ ಒಬ್ಬಳು ತಂಗಿ ಮತ್ತು ಒಬ್ಬ ತಮ್ಮ. ದೊಡ್ಡ ಸಂಸಾರದ ಹೊರೆಹೊತ್ತ ಅಪ್ಪ ಭೀಮನ ಗೌಡರು ಬಟ್ಟೆ ಅಂಗಡಿಯೊಂದರಲ್ಲಿ ಲೆಕ್ಕಪತ್ರ ಬರೆಯುವ ಉದ್ಯೋಗದಲ್ಲಿದ್ದರು. ಯಾವುದೋ ಕಾರಣಕ್ಕಾಗಿ ಆ ಅಂಗಡಿಯ ಮಾಲಿಕರಾಗಿದ್ದ ಇಬ್ಬರು ಸೋದರರು ವ್ಯಾಪಾರದ ವಹಿವಾಟನ್ನು ಬಿಟ್ಟುಕೊಟ್ಟು ಅಂಗಡಿಯನ್ನು ಪಾಲು ಮಾಡಿಕೊಳ್ಳಬೇಕಾದಾಗ ದಕ್ಷತೆಯಿಂದ ಪ್ರಾಮಾಣಿಕವಾಗಿ ತಮಗಾಗಿ ದುಡಿದಿದ್ದ ಭೀಮನಗೌಡರನ್ನು ಬಿಟ್ಟುಕೊಡುವುದು ಹೇಗೆಂಬ ಚಿಂತೆ ಅವರಿಗೆ ಶುರುವಾಯಿತಂತೆ. ಆ ಸೋದರರು ತಮ್ಮ ಅಂಗಡಿಯನ್ನೇ ಭೀಮನಗೌಡರಿಗೆ ಬಿಟ್ಟುಕೊಟ್ಟು ತಾವೇ ದೂರ ಸರಿದಿದ್ದರು. ಎಂ.ಬಿ. ಪಾಟೀಲರ ಜನನಕ್ಕೆ ಮುಂಚೆಯೇ ಸಂಭವಿಸಿದ್ದ ಈ ಘಟನೆಯನ್ನು ಮನೆಯಲ್ಲಿ ಆಗಾಗ್ಗೆ ಪ್ರಸ್ತಾಪಿಸುತ್ತಿದ್ದುದುಂಟು. ಪಾಟೀಲರಿಗೆ ತಂದೆಯೊಂದಿಗೆ ಅಷ್ಟೇನೂ ಸಲಿಗೆಯಿರದಿದ್ದರೂ ತಾಯಿಯ ಬಳಿ ಮುದ್ದುಗರೆಯುವ ಅವಕಾಶವಿತ್ತು. ಹಿರಿಯಣ್ಣನೊಂದಿಗೆ ತನ್ನೆಲ್ಲ ಆಸೆಗಳನ್ನು ಹೇಳಿಕೊಳ್ಳುವ ಹಂಬಲವಿತ್ತು.

ಪಾಟೀಲರಿಗೆ ಬುದ್ಧಿ ತಿಳಿಯುತ್ತಿದ್ದಂತೆಯೇ ಅವರಲ್ಲಿ ಮೊಳೆದ ಆಸಕ್ತಿ ತಾವೂ ತನ್ನಣ್ಣಂದಿರಂತೆಯೇ ಶಾಲೆಗೆ ಹೋಗಬೇಕೆನ್ನುವುದು. ಇವರನ್ನು ನೆಪಮಾತ್ರಕ್ಕೆ ಶಾಲೆಗೆ ಸೇರಿಸಿದರೂ ಇವರ ತಂದೆಗೆ ಇವರನ್ನು ಓದಿಸುವ ಮನಸ್ಸಿರಲಿಲ್ಲ. ಹಿರಿಮಕ್ಕಳು ವಿದ್ಯೆ ಕಲಿತರೆ ಸಾಕು, ಈ ಸಣ್ಣವನು ತಮಗೆ ಮನೆಗೆಲಸದಲ್ಲಿ ನೆರವಾಗಿ ಎಮ್ಮೆಗಳನ್ನು ಮೇಯಿಸಿಕೊಂಡು ಕೊಟ್ಟಿಗೆಯ ಕೆಲಸದಲ್ಲಿ ಕಾಲ ಹಾಕಿದರೆ ಸಾಕು ಎಂಬ ಧೋರಣೆ. ಪುಟ್ಟ ಪಾಟೀಲರಿಗೆ ತಂದೆಯ ಎದುರು ನಿಂತು ವಾದಿಸುವಷ್ಟು ಧೈರ್ಯವಿರದಿದ್ದರೂ ಶಾಲೆಗೆ ಹೋಗಬೇಕಾಗಿದ್ದ ತಾನು ಎಮ್ಮೆ ಕಾಯುತ್ತ ಕೂಡಬೇಕಾದಾಗ ಅವರ ಮನಸ್ಸು ನೋವಿನಿಂದ ನಲುಗುತ್ತಿತ್ತು.

ಮನೆಯಿಂದ ಬುತ್ತಿ ಕಟ್ಟಿಕೊಂಡು ಬಂದು ಮರಗಿಡಗಳ ಮಧ್ಯೆ ಕೂತು ಎಮ್ಮೆಗಳ ಮೇಲೆ ನಿಗಾ ಇಡುತ್ತಲೇ ಪಾಟೀಲರು ಸುತ್ತಲಿನ ಆಕಾಶ, ಬೆಟ್ಟಗುಡ್ಡಗಳನ್ನು ಕಣ್ಣಲ್ಲಿ ತುಂಬಿಕೊಳ್ಳುತ್ತ, ಪ್ರಕೃತಿಯ ರಮ್ಯತೆಯನ್ನು, ಸೃಷ್ಟಿಯ ಸೋಜಿಗವನ್ನು ಕಂಡು ದಂಗಾಗುತ್ತಿದ್ದರು. ಪಾಟೀಲರ ಬಾಲ್ಯದ ಮೊದಲ ಕೆಲವು ವರ್ಷಗಳು ಹೀಗೆ ಎಮ್ಮೆ ಕಾಯುವಲ್ಲೇ ಸವೆದು ಹೋದವು.

ಭೀಮನಗೌಡರಿಗೆ ತಿಕೋಟಾದ ಸಮೀಪದಲ್ಲೇ ಇದ್ದ ದನರ್ಗಿಯಲ್ಲಿ (ದಂದರ್ಗಿ) ಅಲ್ಪಸ್ವಲ್ಪ ಆಸ್ತಿಯಿತ್ತು. ಅಲ್ಲಿ ಅವರ ದತ್ತಕ ತಾಯಿ, ಅಂದರೆ, ಪಾಟೀಲರ ಅಜ್ಜಿ ವಾಸವಾಗಿದ್ದರು. ಭೀಮನಗೌಡರು ಕೆಲಕಾಲದ ನಂತರ ಪಾಟೀಲರನ್ನು ತಮ್ಮ ತಾಯಿಗೆ ನೆರವಾಗಲೆಂದು ದನರ್ಗಿಗೆ ಕಳಿಸಿದಾಗ ಎಮ್ಮೆ ಕಾಯುವ ಕೆಲಸದಿಂದ ಮುಕ್ತಗೊಂಡ ಪಾಟೀಲರಿಗೆ ಕಾಡಿನಲ್ಲಿ ಕಟ್ಟಿಗೆ ಕಡಿದು, ಹೊರೆಯನ್ನು ತಲೆಯ ಮೇಲೆ ಹೊತ್ತು ಮನೆಗೆ ತರುವ ಕೆಲಸ ಅಂಟಿಕೊಂಡಿತು. ಅಜ್ಜಿ ಮಹಾ ಕಟ್ಟುನಿಟ್ಟಿನ ಹೆಂಗಸು; ಕಟ್ಟಿಗೆ ಹೊರೆಯನ್ನು ತರಲಾಗದಿದ್ದ ದಿನ ಪಾಟೀಲರಿಗೆ ಊಟಕ್ಕೆ ಸೊನ್ನೆ. ಪುಟ್ಟ ಹುಡುಗ ಪಡಬಾರದ ಕಷ್ಟ ಪಡುತ್ತಿದ್ದುದನ್ನು ಹಳ್ಳಿಯವರೆಲ್ಲ ಕಂಡಿದ್ದಂತೆಯೇ ಭೀಮನಗೌಡರ ಸರೀಕರೆಲ್ಲರೂ ಅದನ್ನು ಗಮನಿಸಿದ್ದರು. "ಭೀಮನಗೌಡರಿಗೆ ಅದೇಕೆ ಈ ಹುಡುಗನನ್ನು ಈ ರೀತಿ ದಂಡಿಸುವ ಮನಸ್ಸು? ಶಾಲೆಯಲ್ಲಿ ಕಲಿಯಬೇಕಾದ ಹುಡುಗ ಇಂಥ ಪಾಡನ್ನೇಕೆ ಪಡುತ್ತಿದ್ದಾನೆ?" ಎನ್ನುವುದು ಅವರ ಚರ್ಚೆಯ ವಿಷಯ. ಒಮ್ಮೆ ಭೀಮನಗೌಡರ ಪರಿಚಯದ ಹಿರಿಯರೆಲ್ಲ ಪಂಚಾಯಿತಿ ಕಟ್ಟೆಯ ಮೇಲೆ ಅದ್ಯಾವುದೋ ಮಾತುಕತೆಗಾಗಿ ಕೂತಿದ್ದಾರೆ. ಕಟ್ಟಿಗೆ ಹೊರೆಯನ್ನು ತಲೆಯ ಮೇಲೆ ಹೊತ್ತು ಅಜ್ಜಿಯ ಮನೆಯತ್ತ ಪಾಟೀಲರು ನಡೆದಿದ್ದಾರೆ. ಅಂದು ಅವರಿಗೇಕೋ ತೀರಾ ರೋಸಿ ಹೋಯಿತು. ಕುಪಿತಗೊಂಡು "ಏಯ್, ಬಾರೋ ಇಲ್ಲಿ...." ಎಂದು ಒಮ್ಮೆಲೇ ಗಟ್ಟಿಯಾಗಿ ಕೂಗು ಹಾಕಿ "ನೀನು ಕಟ್ಟಿಗೆ ಹೊರಲು ಹುಟ್ಟಿದವನೇನೋ; ಶಾಲೆ ಕಲಿತು ಮುಂದೆ ಬರಬೇಕಾದವ್ನು. ಇನ್ನು ಮುಂದಾದರೂ ನೀನು ಕಟ್ಟಿಗೆ ಹೊತ್ತದ್ದನ್ನು ನಾವ್ಯಾರಾದರೂ ಕಂಡೆವೋ ನೆಟ್ಟಗಾಗಲಿಕ್ಕಿಲ್ಲ ನೋಡು" ಎಂದವರೇ ಅಜ್ಜಿಯನ್ನು ಕರೆಸಿ ಆಕೆಗೆ "ಅಜ್ಜಿ, ನಿಂಗೆ ಕೂಲಿಯಾಳು ಬೇಕೇಬೇಕೆಂದರೆ ಆ ಕೆಲಸಕ್ಕೆಂದೇ ನಾವು ಮತ್ಯಾರನ್ನಾದ್ರೂ ಕಳಿಸ್ತೀವಿ, ಇವನನ್ನು ಇಂಥ ದುಡಿತಕ್ಕೆ ಹಚ್ಚಬೇಡ" ಎಂದು ಉಪದೇಶಿಸಿಯೇ ಬಿಟ್ಟರು. ಅಪ್ಪನ ಗೆಳೆಯರ ಈ ಬೆದರಿಕೆಯ ಹಿಂದೆ ಪಾಟೀಲರನ್ನು ಕುರಿತು ಆಸಕ್ತಿಯಿತ್ತು. ಭೀಮಗೌಡರಿಗೂ ಈ ಸುದ್ದಿ ತಲುಪಿತು. ಮಗನನ್ನು ಊರಿಗೆ ಕರೆಸಿಕೊಂಡು ಅವರು ಪಾಟೀಲರನ್ನು ಮತ್ತೆ ತಿಕೋಟಾದ ಪ್ರಾಥಮಿಕ ಶಾಲೆಗೆ ಸೇರಿಸಿದರು.

ಅಜ್ಜಿಯ ಮನೆಯಿಂದ ಹಿಂತಿರುಗಿದ ಪಾಟೀಲರು ಮತ್ತೆ ತಿಕೋಟಾದ ಸರ್ಕಾರಿ ಕನ್ನಡ ಶಾಲೆ ಸೇರುವ ಹೊತ್ತಿಗಾಗಲೇ ಅವರ ಮುಂದಿನ ಗೆಳೆಯರಲ್ಲಿ ಮೇಲಿನ ಇಯತ್ತೆಗೆ ಹೋಗಿದ್ದರು. ಪಾಟೀಲರಿಗೆ ಒಂದು ಬಗೆಯ ಮಾನಸಿಕ ಹಿಂಸೆ, ಕಳವಳ. ಶಾಲೆಯ ಮಾಸ್ತರರಾದರೋ ಮಕ್ಕಳನ್ನು ಹಿಂಸಿಸಲೆಂದೇ ನೇಮಕಗೊಂಡವರಂತೆ ವರ್ತಿಸುತ್ತಿದ್ದರು. ಹುಡುಗನೊಬ್ಬನನ್ನು ಮೇಲೆತ್ತಿ ಮತ್ತೊಬ್ಬನ ಮೇಲೆ ಬಿಸಾಡೋದು, ಪುಟ್ಟ ಹುಡುಗರ ಕಾಲನ್ನು ಬೂಟುಕಾಲಿನಿಂದ ಹೊಡೆಯೋದು-ಇಂಥ ಹಿಂಸೆಗಳು ಮಾಸ್ತರರಿಂದ. ಪಾಟೀಲರ ನಿಕಟಗೆಳೆಯ ಬಸಪ್ಪ ಬಡತಿ, ಅಷ್ಟು ಹೊತ್ತಿಗಾಗಲೇ ಅವನು ಮುಂದಿನ ಕ್ಲಾಸಿಗೆ ಹೋಗಿದ್ದ. ಎಮ್ಮೆ ಕಾಯುವ ಹಾಗೂ ಕಟ್ಟಿಗೆ ಹೊರುವ ಕಾಯಕದಲ್ಲೇ ಅನಿವಾರ್ಯವಾಗಿ ಮುಳುಗಿ ಹೋಗಿದ್ದ ಪಾಟೀಲರಿಗೆ ಸರಿಯಾದ ಅಕ್ಷರಜ್ಞಾನವೂ ಇರಲಿಲ್ಲ. ತಮ್ಮ ಹೆಸರನ್ನು ಬರೆಯಲೂ ಸಹ ಬರುತ್ತಿರಲಿಲ್ಲ. ಆಗ ಪಾಟೀಲರು ಮೊರೆ ಹೋದದ್ದು ಬಸಪ್ಪ ಬಡತಿಗೆ. ಬಡತಿ ಪಾಟೀಲರಿಗೆ ಕಾಗುಣಿತದಿಂದ ಅಕ್ಷರಾಭ್ಯಾಸ ಪ್ರಾರಂಭಿಸಿದಾಗ

ಇವರೆಷ್ಟು ಪುಳಕಿತರಾದರೆಂದರೆ ಪಾಠಗಳನ್ನು ಮನಸ್ಸಿಟ್ಟು ಅಭ್ಯಾಸ ಮಾಡಿ ನಾಲ್ಕನೇ ಕ್ಲಾಸಿನ ಪರೀಕ್ಷೆಯಲ್ಲಿ ಮೊದಲ ದರ್ಜೆಯಲ್ಲಿ ಮೊದಲ ಸ್ಥಾನ ಪಡೆದರು! ಸುತ್ತಲಿನವರ ಪ್ರಶಂಸೆಯ ಜತೆಗೆ ೩೬ ರೂಪಾಯಿ ವ್ಯಾಸಂಗ ವೇತನ ಬೇರೆ. ಪಾಟೀಲರಿಗೆ ನೀಡಲಾಗಿದ್ದ ವ್ಯಾಸಂಗ ವೇತನವನ್ನು ನಿಯಮದಂತೆ ಪಾಲಕರೇ ಪಡೆದುಕೊಳ್ಳಬೇಕಾದಾಗ ಶಾಲೆಯ ಮುಖ್ಯೋಪಾಧ್ಯಾಯರು ಭೀಮನಗೌಡರಿಗೆ ಹೇಳಿಕಳಿಸಿದರು. ಅವರಿಗೋ ಮಗನ ಸಾಮರ್ಥ್ಯದ ಅರಿವೇ ಇಲ್ಲ. ಸುದ್ದಿ ಬಂದಾಗ ಮೂಗು ಮುರಿದು "ಇವನ ಮಾಸ್ತರರು ಪ್ರಾಯಶಃ ನನ್ನ ಅಂಗಡಿಯಿಂದ ಸಾಲದ ಮೇಲೆ ಬಟ್ಟೆಕೊಂಡು ಹೋಗಿದ್ದರೇನೋ ಅದಕ್ಕೇ ಇವನಿಗೆ ಮಾರ್ಕು ತುಂಬ್ಯಾರೆ" ಎಂದು ವ್ಯಂಗ್ಯವಾಡಿದರು. ತಮ್ಮ ಮಗ ವಿದ್ಯೆ ಕಲಿಯಲು ವಹಿಸಿದ್ದ ಶ್ರಮವನ್ನೇ ಅರ್ಥ ಮಾಡಿಕೊಳ್ಳದಿದ್ದ ತಂದೆ, ಅವರಿಗೆ ಮಗ ನಿಜವಾಗಿಯೂ ತನ್ನ ಪ್ರಯತ್ನದಿಂದಲೇ ವ್ಯಾಸಂಗ ವೇತನ ಗಳಿಸಿದ್ದಾನೆ ಎಂದು ತಿಳಿದದ್ದು ಸ್ವತಃ ಮುಖ್ಯೋಪಾಧ್ಯಾಯರೇ ಪಾಟೀಲರ ಗುಣಗಾನ ಮಾಡಿದಾಗಲೇ. ಮಗನ ವ್ಯಾಸಂಗ ವೇತನವನ್ನು ಪಡೆದುಕೊಂಡ ಭೀಮನಗೌಡರು ಆತನ ಬಗ್ಗೆ ತಮ್ಮಲ್ಲಿ ಮೂಡಿದ ಹೊಸ ಮೆಚ್ಚುಗೆಯ ಸಂಕೇತವೆಂಬಂತೆ ಪಾಟೀಲರ ಕೈಗೆ ಒಂದು ರೂಪಾಯನ್ನು ಇತ್ತಾಗ ಇವರು ಗೆಳೆಯರನ್ನೆಲ್ಲ ಗುಂಪುಗೂಡಿಸಿಕೊಂಡು ಮೊಟ್ಟಮೊದಲ ಬಾರಿಗೆ ತಿಕೋಟಾದಲ್ಲಿದ್ದ ಏಕೈಕ ಹೊಟೇಲನ್ನು ಪ್ರವೇಶಿಸಿ ಗೆಳೆಯರೊಂದಿಗೆ ತಿನಿಸನ್ನು ಹಂಚಿಕೊಂಡಿದ್ದರು. ಅಲ್ಲಿಯವರೆಗೂ ಕಿರಾಣಿ ಅಂಗಡಿಯಲ್ಲಿ ಒಂದೋ ಎರಡೋ ಪೈಸೆಗೆ ಚುರುಮುರಿ ತಿನ್ನುವುದರಲ್ಲೇ ಖುಷಿಪಡುತ್ತಿದ್ದ ಪಾಟೀಲರು ತಾನೇ ಗಳಿಸಿದ್ದ ಹಣದಲ್ಲಿ ಹೊಟ್ಟೆ ತುಂಬಿಸಿಕೊಂಡಂಥ ಆ ಘಳಿಗೆ ಒಂದು ಅಮೃತ ಘಳಿಗೆ! ಪಾಟೀಲರಿಗೆ ಚಿಕ್ಕ ವಯಸ್ಸಿನಿಂದಲೂ ಅಗಾಧವಾದ ಸ್ಮರಣಶಕ್ತಿ. ಪೂಜಾರ ಮಾಸ್ತರರೊಬ್ಬರು ಶಾಲೆಯ ವೇಳೆಯ ನಂತರವೂ ತಮ್ಮ ಮನೆಯಲ್ಲಿ ಚಿಮಣಿ ಬೆಳಕಿನಲ್ಲಿ ಹೇಳಿಕೊಡುತ್ತಿದ್ದ ಪಾಠ ಪ್ರವಚನಗಳನ್ನು ಮನದಟ್ಟು ಮಾಡಿಕೊಳ್ಳುತ್ತಿದ್ದರು. ಪೂಜಾರ್ ಹಾಗೂ ಭೀಮಣ್ಣ ಮಾದರ್ ಚಮ್ಮಾರ್ರ ಮನೆತನಕ್ಕೆ ಸೇರಿದವರಾದ್ದರಿಂದ ಅವರಲ್ಲಿ ಪಾಟೀಲರು ಪಾಠ ಕಲಿಯುವುದರ ಬಗ್ಗೆ ಮನೆಯಲ್ಲಿ ತೀವ್ರ ವಿರೋಧವಿತ್ತು. ಕಂಡವರಿತ್ತ ಕಾಯಿಪಲ್ಲೆ, ಕಾಳುಕಡಿಯನ್ನೂ ಸಹ ಮುಟ್ಟದಿದ್ದ ಈ ಮಾಸ್ತರರು ನಿಸ್ವಾರ್ಥವಾಗಿ ಮಕ್ಕಳಿಗೆ ಪಾಠವನ್ನು ಭೋಧಿಸುತ್ತಿದ್ದ ರೀತಿ ಪಾಟೀಲರ ಮನಸ್ಸಿನಲ್ಲಿ ಅಳಿಸಲಾಗದಂಥ ಮುದ್ರೆಯನ್ನೊತ್ತಿತ್ತು.

ಪಾಟೀಲರಿಗೆ ತಮ್ಮ ಗುರುಗಳಾಗಿದ್ದ ಹೆಡ್‌ಮಾಸ್ಟರ್ ರಾಮಮಾಸ್ತರು, ಜೋಶಿ, ತಾಣೆ ಇವರೆಲ್ಲರ ಬಗ್ಗೆ ಆದರವಿದ್ದರೂ ವಿಶೇಷ ಆಕರ್ಷಣೆಯಿದ್ದುದು ಎ.ಎಸ್. ಬುರುಡ ಮಾಸ್ತರ ಬಗ್ಗೆ. ಈ ಮಾಸ್ತರು ಬುಟ್ಟಿ ಹೆಣೆಯೋ ಕಸುಬಿನ ಜಾತಿಗೆ ಸೇರಿದವರು. ಅದಕ್ಕಿಂತಲೂ ಹೆಚ್ಚಾಗಿ ಅವರು ಸ್ವತಃ ಚಿತ್ರ ಕಲಾವಿದರು. ಡ್ರಾಯಿಂಗ್‌ನಲ್ಲಿ ತರಬೇತಿ ಪಡೆದಿದ್ದರು. ಚಿತ್ರ ಬರೆಯುವವರನ್ನು ಕಂಡರೆ ಇವರಿಗೆ ವಿಶೇಷ ಆಕರ್ಷಣೆ. ಬಾಲ್ಯದಲ್ಲಿ ಅನೇಕ ವರ್ಷಗಳವರೆಗೂ ಪಾಟೀಲರು ಕ್ಯಾಲೆಂಡರ್ ಚಿತ್ರಗಳನ್ನು ಬಿಟ್ಟು ಬೇರ್ಯಾವ ಕೃತಿಗಳನ್ನೂ ಕಂಡೇ ಇರಲಿಲ್ಲ. ಕ್ಯಾಲೆಂಡರ್‌ನಲ್ಲಿ ಚಿತ್ರಿಸಿದ್ದ ರಾಮಾಯಣದ ದೃಶ್ಯಗಳು, ಶ್ರೀರಾಮನ ಉಡುಗೆತೊಡುಗೆ, ಆಭರಣ, ಧನಸ್ಸು ಇವನ್ನೆಲ್ಲ ಕಂಡಾಗ ಪಾಟೀಲರು ವಿಸ್ಮಿತರಾಗುತ್ತಿದ್ದರು. ಮಾಸ್ತರರು ಬುಟ್ಟಿ ಹೆಣೆಯುತ್ತಿದ್ದಾಗ ಅವರ ಕೈಚಳಕವನ್ನು ಕಂಡು ಅಚ್ಚರಿಗೊಳ್ಳುತ್ತಿದ್ದರು. ಪಾಟೀಲರು ೭ನೇ ಇಯತ್ತೆಯವರೆಗೂ ಮೊದಲ ದರ್ಜೆಯಲ್ಲೇ ಉತ್ತೀರ್ಣರಾಗುವಷ್ಟು ಬುದ್ಧಿವಂತ ಹುಡುಗನಾಗಿದ್ದಂತೆಯೇ ಕಲೆ, ಕಲೆಗಾರಿಕೆಯ ಬಗ್ಗೆ ತಮ್ಮದೇ ಆದ ದೃಷ್ಟಿಕೋನವೊಂದನ್ನು ಪಡೆದುಕೊಳ್ಳುತ್ತಿದ್ದರು. ಪಾಟೀಲರ ಪಾಲಿಗೆ ಹೊರ ಜಗತ್ತು ಕ್ರಮೇಣ ತೆರೆದುಕೊಳ್ಳುತ್ತಿತ್ತು. ಕುರಂದವಾಡ ಸಂಸ್ಥಾನಕ್ಕೆ ಸೇರಿದ್ದ ತಿಕೋಟಾ ಆಗಿನ ಮುಂಬೈ ರಾಜ್ಯದ ಸರಹದ್ದಿನಲ್ಲಿ ಇದ್ದುದರಿಂದ ಮೊರಾರ್ಜಿ ದೇಸಾಯಿ, ಬಿ.ಡಿ. ಜತ್ತಿ ಮುಂತಾದ

ರಾಜಕಾರಣಿಗಳು ಅಲ್ಲಿಗೆ ಬಂದು ಮಾಡುತ್ತಿದ್ದ ಭಾಷಣಗಳು ಕಿವಿಗೆ ಬೀಳುತ್ತಿದ್ದವು. ಮಹಾತ್ಮಾ ಗಾಂಧಿಯವರ ಪ್ರಭಾವದಿಂದಾಗಿ ಆ ಸ್ಥಳದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯಪೂರ್ವ ಚಳವಳಿಗಳನ್ನು ಪಾಟೀಲರ ಎಳೆಕಣ್ಣುಗಳು ಗಮನಿಸುತ್ತಿದ್ದವು. ಊರಿನಲ್ಲಿ ಜಾನಪದ ಹಾಡುಗಾರರು, ಕುದುರೆ ಸವಾರರು ಸುತ್ತಾಡುತ್ತಿದ್ದಾಗ ಪಾಟೀಲರು ಚಕಿತಗೊಳ್ಳುತ್ತಿದ್ದರು.

ಸ್ವಾತಂತ್ರ್ಯ ಚಳವಳಿಯ ದಿನಗಳವು. ಸುಭಾಷ್‌ಚಂದ್ರ ಬೋಸ್, ಕಿತ್ತೂರು ಚೆನ್ನಮ್ಮ, ಮಹಾತ್ಮಾ ಗಾಂಧಿ ಇವರನ್ನು ಕುರಿತ ಲಾವಣಿಗಳು ಬಾಯಿಪಾಠವಾಗಿದ್ದವು. ಹಾಡುಗಾರರು ಹಾಡುವುದರೊಂದಿಗೇ ಬೇಹುಗಾರರ ಕೆಲಸವನ್ನೂ ನಿರ್ವಹಿಸುತ್ತಿದ್ದರು. ಚಳವಳಿಗಾರರಿಗೆ ಸಂದೇಶಗಳನ್ನು ರವಾನಿಸುತ್ತ ಪೋಲೀಸರ ಬೂಟಿನ ಸಪ್ಪಳ ಕೇಳಿದೊಡನೆಯೇ ಮನೆಗಳನ್ನು ಹೊಕ್ಕಾಗ ಪಾಟೀಲರಿಗೆ ರೋಮಾಂಚನವಾಗುತ್ತಿತ್ತು. ಊರಿನ ಸಿಂದಿ ಬನ ಪಾಟೀಲರ ಪಾಲಿಗೊಂದು ನಿಗೂಢ ಸ್ಥಳ. ಒಂದು ಕಾಲಕ್ಕೆ ಅದೊಂದು ಸಮೃದ್ಧ ತೋಟ. ಬರಗಾಲದಲ್ಲೂ ಸಹ ಜನ ಅಲ್ಲಿ ಬೆಳೆಯುತ್ತಿದ್ದ ಕೊಬ್ಬರಿಯನ್ನು ತಿಂದು ಬದುಕುತ್ತಿದ್ದುದುಂಟು. ಚಳವಳಿಗಾರರ ಚಟುವಟಿಕೆಗಳೆಲ್ಲವೂ ಸಿಂದಿ ಬನದಲ್ಲಿ. ಪಾಟೀಲರು ವಾಸವಾಗಿದ್ದ ಸ್ಥಳದ ಆಸುಪಾಸಿನಲ್ಲೇ ಇಂಥ ಘಟನೆಗಳೆಲ್ಲವೂ ಪಾಟೀಲರ ಪಾಲಿಗೆ ಯಾವುದೋ ಹೊಸ ಬಗೆಯ ಅನುಭವಗಳನ್ನು ತಂದುಕೊಡುತ್ತಿದ್ದವು. ಪಾಟೀಲರು ಸನ್ನಿವೇಶಗಳಿಗೆ ಒಡ್ಡಿ ಕೊಳ್ಳುತ್ತಲೇ ಹೊಸ ವ್ಯಕ್ತಿಯಾಗಿ ಬೆಳೆಯುತ್ತಿದ್ದರು.

ಅಭಿನಯದ ಬಗೆಗಿನ ಒಲವು

ಎಂ.ಬಿ. ಪಾಟೀಲರು ಶಾಲೆಯಲ್ಲಿದ್ದಾಗಲೇ ವಿಜಾಪುರಕ್ಕೆ ಒಂದು ನಾಟಕ ತಂಡ ಬಂತು. ಮಾತಿನಲ್ಲಿ, ಹಾಸ್ಯದಲ್ಲಿ ಪಾಟೀಲರು ಸದಾ ಮುಂದಿದ್ದು ನಾಟಕ ತಂಡ ಊರಿನಲ್ಲಿ ಮೊಕ್ಕಾಂ ಮಾಡಿದಾಗ ಅದೇನೋ ಖುಷಿ. ಯಾವುದರ ಬಗ್ಗೆಯಾಗಲಿ ಕಲಾತ್ಮಕವಾಗಿ ವಿಚಾರ ಮಾಡುವಂಥ ಮನೋಭಾವವನ್ನು ಅಷ್ಟು ಹೊತ್ತಿಗಾಗಲೇ ಬೆಳೆಸಿಕೊಂಡಿದ್ದ ಪಾಟೀಲರಿಗೆ ಹೊಸ ಶಬ್ದಗಳನ್ನು ಸಂಗ್ರಹಿಸುವಲ್ಲಿ ವಿಶೇಷ ಕಾಳಜಿ. ಪ್ರಸಿದ್ಧ ಪೌರಾಣಿಕ ನಾಟಕಕಾರ ಕಂದಗಲ್ ಹನುಮಂತರಾಯರು ಬರೆದಿದ್ದ "ಮಾತಂಗ ಕನ್ಯ", "ಬಡತನದ ಭೂತ" ಇವನ್ನು ಹವ್ಯಾಸಿ ತಂಡಗಳು ತಿಕೋಟಾದಲ್ಲಿ ಅಭಿನಯಿಸಿದಾಗ ಪಾಟೀಲರಿಗೂ ಪಾತ್ರಗಳು ಸಿಕ್ಕಿ ಇವರು ತಂದೆಯಿಂದ ಮರೆಮಾಡಿ ಕಳ್ಳತನದಿಂದ ರಿಹರ್ಸಲ್‌ಗಳಿಗೆ ಹಾಜರಾದರು. ನಾಟಕದ ಎರಡು ಪ್ರಯೋಗಗಳು ಯಶಸ್ವಿಯಾಗಿ ಜರುಗಿದ್ದವು. ಊರಿನ ಜನರೆಲ್ಲ ನಾಟಕದ ಸ್ಥಳಕ್ಕೆ ಭಾರೀ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಪಾಟೀಲರ ತಂದೆಗಾದರೋ ಕಲೆ, ಸಾಹಿತ್ಯ, ನಾಟಕ ಇವುಗಳೆಂದರೆ ಕೆಲಸಕ್ಕೆ ಬಾರದ ಹವ್ಯಾಸಗಳು ಎಂಬ ಭಾವನೆ. ಸರಿ ರಾತ್ರಿಯಾಗಿರಬಹುದು. ಮನೆಯಲ್ಲಿ ಭೀಮನಗೌಡರು ಹಾಗೂ ಒಬ್ಬ ಸೇವಕನನ್ನು ಬಿಟ್ಟರೆ ಮತ್ಯಾರೂ ಇಲ್ಲ. ಮಲಗಿದ್ದ ಭೀಮನಗೌಡರಿಗೆ ಸಮೀಪದಲ್ಲೇ ಪ್ರದರ್ಶಿತಗೊಳ್ಳುತ್ತಿದ್ದ ನಾಟಕದಲ್ಲಿ ಪಾಟೀಲರಾಡುತ್ತಿದ್ದ ಸಂಭಾಷಣೆಗಳು ಆ ನೀರವ ರಾತ್ರಿಯನ್ನು ಭೇಧಿಸಿಕೊಂಡು ಕೇಳಿಸತೊಡಗಿದಾಗ ಮಗನ ದನಿಯ ಗುರುತನ್ನು ಪತ್ತೆ ಹಚ್ಚಿದ ಅವರು ತಾವೆಂದೂ ನಾಟಕ ಮಂದಿರಕ್ಕೆ ಕಾಲಿಟ್ಟರದಿದ್ದರೂ ಅಂದು ಮೊದಲ ಬಾರಿಗೆ ಅದರತ್ತ ನಡೆದರು. ಅಭಿನಯದಲ್ಲೇ ಮುಳುಗಿದ್ದ ಪಾಟೀಲರು ತಂದೆ ಬಂದು ಕೂತದ್ದನ್ನೂ ಗಮನಿಸಿರಲಿಲ್ಲ. ಆದರೆ ತಂದೆಗೆ ಮಾತ್ರ ಮಗನ ಅಭಿನಯ ಚಾತುರ್ಯ ಕಂಡು ದಂಗಾಗಿತ್ತು. ಇದರಿಂದಾದ ಪರಿಣಾಮವೆಂದರೆ ಭೀಮನಗೌಡರು ಮಗನನ್ನು ಹೀಯಾಳಿಸುವುದು ಕಡಿಮೆಮಾಡಿದ್ದು. ಮಗನ ಚಟುವಟಿಕೆಗಳ ಬಗ್ಗೆ ಅವರಿಗೆ ಕ್ರಮೇಣ ಅಭಿಮಾನ ಮೂಡತೊಡಗಿತ್ತು. ಏಳನೇ ಇಯತ್ತೆಯವರೆಗೆ ತಿಕೋಟಾದಲ್ಲಿ ಶಿಕ್ಷಣವನ್ನು ಪಡೆದುಕೊಂಡ ಪಾಟೀಲರು

ಅನಂತರ ಅಲ್ಲಿಂದ ೧೩ ಮೈಲಿಗಳಷ್ಟು ದೂರವಿದ್ದ ವಿಜಾಪುರದ ಶ್ರೀ ಸಿದ್ಧೇಶ್ವರ ಹೈಸ್ಕೂಲನ್ನು (ಎಸ್.ಎಸ್. ಹೈಸ್ಕೂಲು) ಸೇರಿದರು.

ವಿಜಾಪುರ ತಲುಪಲು ಆಗ ಖಾಸಗಿ ಬಸ್‌ಗಳ ಸಂಚಾರವಿತ್ತೇ ಹೊರತು ಸರ್ಕಾರಿ ಬಸ್‌ಗಳಿರಲಿಲ್ಲ. ಎಂಟನೆಯ ಇಯತ್ತೆಗೆ ಸೇರಿದ ಪಾಟೀಲರು ಗೆಳೆಯರ ಜತೆ ಕೋಣೆಯಲ್ಲಿ ವಾಸಮಾಡತೊಡಗಿದರು. ಪಾಟೀಲರ ಶ್ರೀಮಂತ ಗೆಳೆಯರು ಧಾರಾಳವಾಗಿ ಹಣವನ್ನು ವೆಚ್ಚ ಮಾಡುತ್ತಿದ್ದಾಗ ಮನೆಯಿಂದ ತಿಂಗಳಿಗೆ ೧೦ ರೂಪಾಯನ್ನು ಮಾತ್ರ ಪಡೆಯುತ್ತಿದ್ದ ಪಾಟೀಲರು ತಮ್ಮ ಸ್ಥಿತಿಯ ಬಗ್ಗೆ ಮುಜುಗರ ಪಡುತ್ತಲೇ ಕಾಸುಕಾಸಿಗೆ ಲೆಕ್ಕ ಹಾಕುತ್ತಾ ಹೇಗೋ ದಿನಗಳನ್ನು ದೂಡಬೇಕಾಗಿತ್ತು. ಪಾಟೀಲರ ಕಿರಿಯಣ್ಣ ಬಸಣ್ಣಗೌಡ ತಂದೆಯಂತೆಯೇ ವ್ಯಾಪಾರ ವ್ಯವಹಾರದಲ್ಲಿ ತೊಡಗಿದ್ದರೆ ಹಿರಿಯಣ್ಣ ಶಿವನಗೌಡ ಪಾಟೀಲರಿಗೆ ಸುಶಿಕ್ಷಿತ ಗೆಳೆಯರ ಸಂಘವಿತ್ತು. ತಮ್ಮನ ಮನಸ್ಸನ್ನು ಅರಿತಿದ್ದ ಶಿವನಗೌಡ ಶ್ರೀಮಂತ ಗೆಳೆಯರ ಮಧ್ಯೆ ಮನಸ್ಸನ್ನು ಮುದುಡಿ ಕೊಂಡು ಕಾಲ ಹಾಕುತ್ತಿದ್ದ ತಮ್ಮನ ಬವಣೆಯನ್ನು ಅರ್ಥಮಾಡಿಕೊಂಡು ಕಾಲೇಜು ಕಲಿಯುತ್ತಿದ್ದ ತಮ್ಮ ಗೆಳೆಯ ತಿಕೋಟಿಕರ್ ಅವರಿಗೆ ಹೇಳಿ ಪಾಟೀಲರಿಗೆ ಒಂದು ಪ್ರತ್ಯೇಕ ಕೋಣೆಯನ್ನು ಕೊಡಿಸಿದರು. ಪಾಟೀಲರ ಬಗ್ಗೆ ಅಪಾರವಾದ ಅಕ್ಕರೆಯಿದ್ದ ತಾಯಿ, ತಂದೆಯ ಮುಂದೆ ಇವರ ವಿಚಾರವಾಗಿ ಮತ್ತೆ ಮತ್ತೆ ಹೇಳದಿದ್ದರೂ ಇವರ ಆರೋಗ್ಯದ ಬಗ್ಗೆ ಶಿಕ್ಷಣದ ಬಗ್ಗೆ ಕಾಳಜಿ ವಹಿಸಿದ ಆಕೆ ಪ್ರತಿ ದಿನವೂ ಮಗನಿಗಾಗಿ ತಗಡಿನ ಡಬ್ಬಿಯಲ್ಲಿ ರೊಟ್ಟಿ, ಸಾರು, ಮೊಸರನ್ನು ರವಾನಿಸುತ್ತಿದ್ದರು.

ಚಿತ್ರಕಲೆಗೆ ಪದಾರ್ಪಣೆ

ಎಂ.ಬಿ. ಪಾಟೀಲರಿಗೆ ಚಿತ್ರಕಲೆಯಲ್ಲಿದ್ದ ಪ್ರತಿಭೆಯನ್ನು ಬೆಳಕಿಗೆ ತರಲು ನೆರವಾದ ಪ್ರಸಂಗವೆಂದರೆ ಇವರ ಹಿರಿಯಣ್ಣ ಶಿವನಗೌಡ ಪಾಟೀಲರು "ಗೆಳೆಯರ ಬಳಗ" ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದ್ದು ಹಾಗೂ "ವಸಂತ" ಎಂಬ ಕೈಬರಹದ ಮಾಸಪತ್ರಿಕೆಯನ್ನು ಹೊರತರಲು ಆರಂಭಿಸಿದ್ದು. ಪಾಟೀಲರಲ್ಲಿ ತುಡಿಯುತ್ತಿದ್ದ ಕಲಾಭಿವ್ಯಕ್ತಿ ಬಹಿರಂಗಗೊಳ್ಳಲು ತವಕಿಸುತ್ತಿದ್ದಾಗ ಅವರು ತಮ್ಮ ಸೃಜನಶೀಲ ಭಾವನೆಗಳನ್ನು ತೋಡಿಕೊಳ್ಳಲು "ವಸಂತ" ಪತ್ರಿಕೆಯ ಮುಖಪುಟಗಳನ್ನೇ ಬಳಸಿಕೊಂಡರು. ಶಾಲೆಯಲ್ಲಿ ಓದುತ್ತಿದ್ದ ವರ್ಷಗಳುದ್ದಕ್ಕೂ "ವಸಂತ" ಪತ್ರಿಕೆಯ ಮುಖಪುಟಗಳಿಗೆ ಪಾಟೀಲರಿಂದ ರಚಿತವಾದ ವರ್ಣಚಿತ್ರಗಳೇ. "ಗೆಳೆಯರ ಬಳಗ" ಮಿರ್ಜಿ ಅಣ್ಣಾರಾಯ, ಬಿ.ಟಿ. ಸಾಸನೂರು, ಸಿಂಪಿ ಲಿಂಗಣ್ಣ ಇಂಥ ಪ್ರಮುಖ ಭಾಷಣಕಾರರನ್ನು ಕರೆಸುತ್ತಿತ್ತು. ಪಿ.ಡಿ.ಜೆ. ಹೈಸ್ಕೂಲಿನ ರಜತ ಮಹೋತ್ಸವಕ್ಕೆ ತಿ.ತಾ. ಶರ್ಮ ಹಾಗೂ ರಂ.ಶ್ರೀ. ಮುಗುಳಿ ಅತಿಥಿಗಳಾಗಿ ಬಂದಿದ್ದ ಸಂದರ್ಭದಲ್ಲಿ ಉಪನ್ಯಾಸ ನೀಡುತ್ತಿದ್ದಾಗ ಪಾಟೀಲರು ಅವರ ರೇಖಾಚಿತ್ರಗಳನ್ನು ಬರೆದು ಎಲ್ಲರನ್ನೂ ದಂಗು ಬಡಿಸಿದರು. ರಂಗೋಲಿ ಸ್ಪರ್ಧೆಯಲ್ಲಿ "ಲ್ಯಾಂಡ್ ಸ್ಕೇಪ್" ರಚಿಸಿ ಸೈ ಎನ್ನಿಸಿಕೊಂಡರು. ಇವರ ಕಲೆಯನ್ನು ಮೆಚ್ಚಿದ ಶಾಲೆ ಇವರಿಗೆ ಬೆಳ್ಳಿ ಪದಕ ಹಾಗೂ ಪ್ರಶಸ್ತಿ ಪತ್ರ ನೀಡಿ ಪ್ರೋತ್ಸಾಹಿಸಿತು. ಹೀಗೆ ಪಾಟೀಲರ ಕಲಾಭಿರುಚಿ ಪ್ರೌಢಶಾಲೆಯ ದಿನಗಳಿಂದಲೇ ಉನ್ನತ ರೀತಿಯಲ್ಲಿ ಪ್ರಾರಂಭಗೊಂಡಿತು.

ಪಾಟೀಲರಿಗೆ ಸುಮಾರು ೧೪-೧೫ ವಯಸ್ಸಾಗಿದ್ದಾಗ ವಿಜಾಪುರದಲ್ಲಿ ಸುಬ್ಬಯ್ಯನಾಯ್ಡು ಅವರ ನಾಟಕ ಕಂಪನಿ ಮೊಕ್ಕಾಂ ಮಾಡಿ "ಕುರುಕ್ಷೇತ್ರ", "ಬಾಣಸಿಗ ಭೀಮ", "ಭಕ್ತ ಅಂಬರೀಶ" ನಾಟಕಗಳನ್ನು ಪ್ರದರ್ಶಿಸಿದಾಗ ನಾಟಕಗಳಿಗೆ ಅಗತ್ಯವಾದ ದೃಶ್ಯಗಳನ್ನು (ಸೀನರಿಗಳನ್ನು) ಈ ಕೆಲಸದಲ್ಲಿ ಪರಿಣತಿ ಪಡೆದಿದ್ದ

ಕೆಂಘೂಳೆ, ಧೋತ್ರೆ ಇವರುಗಳು ನಿರ್ವಹಿಸುತ್ತಿದ್ದರು. ನಾಟಕದ ದೃಶ್ಯಗಳನ್ನು ಕಂಡಾಗ ಪುಳಕಿತರಾಗುತ್ತಿದ್ದ ಪಾಟೀಲರು ನಾಟಕ ಮುಗಿದ ಕೂಡಲೇ ಮನೆಗೋಡಿ ದೊಡ್ಡ ದೊಡ್ಡ ಗೋಡೆಗಳ ಮೇಲೆ ಇದ್ದಿಲಿನಿಂದ ದುರ್ಯೋಧನ, ಭೀಮ ಇವರ ಆಕೃತಿಗಳನ್ನು ಬರೆಯಲಾರಂಭಿಸುತ್ತಿದ್ದರು. ನಾಟಕದ ದೃಶ್ಯಗಳು ಇವರ ಮೇಲೆ ಎಂಥಾ ಮಾನಸಿಕ ಪರಿಣಾಮವನ್ನು ಬೀರುತ್ತಿದ್ದವೆಂದರೆ ದುರ್ಯೋಧನನ್ನು ದುಷ್ಟನಂತೆ ಚಿತ್ರಿಸಿ, ಭೀಮನನ್ನು ಬಲಶಾಲಿಯನ್ನಾಗಿಸುತ್ತಿದ್ದರು. ಅಶ್ವತ್ಥಾಮನನ್ನು ರೌದ್ರವಾಗಿ ರಚಿಸುತ್ತಿದ್ದರು. ಚಿತ್ರಕಲೆಗೆ ಸಂಬಂಧಿಸಿವಂತೆ ಇಂಥ ಸಂಯೋಜನೆಗಳು, ಪೌರಾಣಿಕ ಹಿನ್ನೆಲೆಯಲ್ಲಿ ಹಾಗೂ ಅನಂತರ ಸಾಮಾಜಿಕ ಹಿನ್ನೆಲೆಯಲ್ಲಿ ಪಾಟೀಲರ ಮನಸ್ಸಿನಲ್ಲಿ ಕ್ರಮೇಣ ರೂಪುಗೊಳ್ಳುತ್ತಿದ್ದವು.

೧೯೬೦ರಲ್ಲಿ ಪಾಟೀಲರು ಎಸ್.ಎಸ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದರೂ ಇವರ ಸಂಪೂರ್ಣ ಗಮನವೆಲ್ಲ ಚಿತ್ರಕಲೆಯ ಮೇಲಿತ್ತು.

ಆಗಿನ ದಿನಗಳಲ್ಲಿ ಚಿತ್ರಕಲೆಯಲ್ಲಿ ಆಸಕ್ತಿಯುಳ್ಳವರೆಲ್ಲರ ಮಹದಾಸೆ ಮುಂಬೈನ ಕಲಾ ಕೇಂದ್ರಗಳಲ್ಲಿ ತರಬೇತಿಯನ್ನು ತೆಗೆದುಕೊಳ್ಳಬೇಕೆಂಬುದು. ಪಾಟೀಲರ ಮನೆಯಲ್ಲೋ ಹಿರಿಯಣ್ಣನನ್ನುಳಿದು ಮತ್ಯಾರಿಗೂ ಕಲೆಯ ಗಂಧವಿಲ್ಲ. ಶಿವನಗೌಡರಿಗೆ ತಮ್ಮನ ಅಭ್ಯುದಯದಲ್ಲಿ ಆಸಕ್ತಿಯಿದ್ದರೂ ಅವರಿಗೂ ಚಿತ್ರಕಲೆಯ ಬಗ್ಗೆ ಆಳವಾದ ತಿಳುವಳಿಕೆಯಿರಲಿಲ್ಲ. ಪಾಟೀಲರು ಮುಂಬೈಗೆ ಹೊರಡಲು ತುದಿಗಾಲಲ್ಲಿ ನಿಂತದ್ದನ್ನು ಕಂಡ ಅವರ ತಂದೆ ಶಾಲೆಯ ಡ್ರಾಯಿಂಗ್ ಮಾಸ್ತರ ವಿ.ಕೆ. ಪಾಟೀಲ್ ಅವರ ಸಲಹೆಯನ್ನು ಕೇಳಿದಾಗ ಅವರ ಸೂಚನೆಯಂತೆ ಶ್ರೀಪತಿ ಸೋನಾರ್ ಎಂಬುವರಿಗೆ ಪತ್ರ ಬರೆದರು. ಶ್ರೀಪತಿ ಸೋನಾರ್ ಅಕ್ಕಸಾಲೆ ಕೆಲಸದಲ್ಲಿ ನಿಪುಣರಾಗಿದ್ದರು, ಅನಂತರ ಮುಂಬೈನ ಡಿಸೈನ್ ಸೆಂಟರ್‌ನಲ್ಲಿ ಉದ್ಯೋಗದಲ್ಲಿದ್ದವರು. ವಿ.ಕೆ. ಮಾಸ್ತರರ ಮಾತೆಂದರೆ ಪಾಟೀಲರ ತಂದೆಗೂ ವೇದವಾಕ್ಯವೇ ಆಗಿತ್ತು. ಕಾರಣ ದರ್ಗಿಯ ಬಳಿಯ ಟಕ್ಕಳಿಕೆ ಎಂಬ ಸ್ಥಳಕ್ಕೆ ಸೇರಿದ್ದ ಅವರು ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದ ಪಾಟೀಲರ ಅಜ್ಜನ ವಿದ್ಯಾರ್ಥಿಯಾಗಿದ್ದು ಭೀಮನಗೌಡರ ಮನೆತನದ ಬಗ್ಗೆ ವಿಶೇಷ ಅಭಿಮಾನವನ್ನು ಇಟ್ಟಿದ್ದರು. ಶ್ರೀಪತಿ ಸೋನಾರ್‌ರಿಗೆ ಪತ್ರ ತಲುಪಿ ಅವರಿಂದ ಮಾರುತ್ತರ ಬಂದು ಪಾಟೀಲರನ್ನು ಮುಂಬೈನ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ಗೆ ಸೇರಿಸಲು ಕರೆದೊಯ್ಯುವ ಹೊತ್ತಿಗಾಗಲೇ ಅಲ್ಲಿ ಪ್ರವೇಶದ ಅವಧಿ ಮುಗಿದಿತ್ತು. ಚಿತ್ರಕಲೆಯನ್ನು ಕಲಿಯಲೆಂದೇ ಮುಂಬೈಗೆ ಧಾವಿಸಿದ್ದ ಪಾಟೀಲರನ್ನು ವಾಪಸ್ಸು ಊರಿಗೆ ಕರೆತಂದು ನಿರಾಸೆಗೊಳಿಸುವಂತಿರಲಿಲ್ಲ. ಪಾಟೀಲರ ಅಣ್ಣ ಇವರನ್ನು ನೂತನ ಕಲಾಮಂದಿರವನ್ನು ನಡೆಸುತ್ತಿದ್ದ ದಂಡಾವತಿಮಠರ ಬಳಿಗೆ ಕರೆದೊಯ್ದರು.

ದಂಡಾವತಿಮಠರು ಅಷ್ಟು ಹೊತ್ತಿಗಾಗಲೇ ಕುಂಚಬ್ರಹ್ಮನೆಂದು ಹೆಸರು ಪಡೆದಿದ್ದರು. ಬೆಳಗಾಂ ಜಿಲ್ಲೆಯ ಬೈಲಹೊಂಗಲದವರು. ಸ್ಯಾನಿಟರಿ ಇನ್ಸ್‌ಪೆಕ್ಟರ್ ಆಗಿದ್ದ ಅವರು ಸೌದತ್ತಿ ತಾಲ್ಲೂಕಿನಲ್ಲಿ ಉದ್ಯೋಗ ಮಾಡುತ್ತಿದ್ದಾಗ ಊರಿನ ಕೆಲವು ಪ್ರಮುಖರು ಅವರ ಕಲಾವಂತಿಕೆಯನ್ನು ಗಮನಿಸಿ ಅವರನ್ನು ಮುಂಬೈಗೆ ಕಳಿಸಿದ್ದರು. ನೂತನ ಕಲಾ ಮಂದಿರದ ಮೊದಲ ಪ್ರಾಂಶುಪಾಲರಾಗಿದ್ದ ಡಿ.ಜಿ. ಬಡಗೇರ ಅವರು ರಾಯಲ್ ಅಕಾಡಮಿಯ ಉನ್ನತ ಹುದ್ದೆಗಳಿಗೆ ನೇಮಕಗೊಂಡಾಗ ದಂಡಾವತಿಮಠರನ್ನು ಮಂದಿರದ ಪ್ರಾಂಶುಪಾಲರಾಗಿ ನೇಮಿಸಿದ್ದರು. ಪಾಟೀಲರು ಮಂದಿರವನ್ನು ಸೇರಿದಾಗ ಅದು ತನ್ನ ೨೫ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿತ್ತು. ದಂಡಾವತಿಮಠರ ಜೊತೆಗೆ ದಯಾನಂದ ಶೆಟ್ಟಿ, ಹೆಗಡೆ, ಮಯ್ಯ ಮುಂತಾದವರು ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು.

ನೂತನ ಕಲಾ ಮಂದಿರದ ವಿದ್ಯಾರ್ಥಿಯಾಗಿದ್ದ ಎಂ.ಬಿ. ಪಾಟೀಲರಿಗೆ ಆಗ ಮನೆಯಿಂದ ಬರುತ್ತಿದ್ದುದೇ ೧೦೦ ರೂಪಾಯಿ. ದಾದರ್‌ನಲ್ಲಿದ್ದ ವಸತಿ ಗೃಹದಲ್ಲಿ ತಿಂಗಳಿಗೆ ೭೫ ರೂಪಾಯಿಯ ಕರಾರಿನ ಪ್ರಕಾರ ವಸತಿಯ ವ್ಯವಸ್ಥೆ ಮಾಡಿಕೊಂಡರೂ ಅಲ್ಲಿನ ವಾತಾವರಣ ಒಗ್ಗದಿದ್ದಾಗ ಮಾತುಂಗಾದ ಖಾಲ್ಸ ಕಾಲೇಜಿನ ಬಳಿ ಪಂಜಾಬಿ ಚಾಳದಲ್ಲಿ ಹಂಗಾಮಿಯಾಗಿ ವಾಸ್ತವ್ಯ ಹೂಡಿದರು. ರಸ್ತೆಯಲ್ಲಿದ್ದ ನಲ್ಲಿಯಲ್ಲಿ ಪ್ರತಿ ಮುಂಜಾನೆ ಮಹಿಳೆಯರು ಸ್ನಾನಕ್ಕಾಗಿ ಬರುತ್ತಿದ್ದುದುಂಟು. ಪಾಟೀಲರಿಗೆ ಅಲ್ಲಿನ ಆಗುಹೋಗುಗಳು ಸರಿ ಹೋಗದಿದ್ದಾಗ ಶ್ರೀಪತಿ ಕಾಕ ಅವರ ನೆರವಿನಿಂದ ಅಂಧೇರಿ ಈಸ್ಟ್‌ನಲ್ಲಿ ಏರ್‌ಫೋರ್ಸ್ ಕ್ವಾರ್ಟರ್ಸ್ ಹಾಗೂ ಮರೋಶ್ ಪೈಪ್ ಲೈನ್ ಬಳಿಯಿದ್ದ ಕೋಣೆಯಲ್ಲಿ ವಾಸದ ಏರ್ಪಾಟನ್ನು ಮಾಡಿಕೊಂಡರು. ಎಂದೂ ದುಡ್ಡಿಗಾಗಿ ಗುದ್ದಾಡದ ಶ್ರೀಪತಿ ಕಾಕ ಪಾಟೀಲರನ್ನು ತಮ್ಮ ಸ್ವಂತ ಮಗನಂತೆ ಸಲಹಿದರು. ಅನಂತರ ಪಾಟೀಲರು ಅಲಂಕಾರ್ ಥಿಯೇಟರ್ ಬಳಿಯ ಗ್ರ್ಯಾಂಟ್ ರಸ್ತೆಯಲ್ಲಿನ ಮಾಧವಭಾಗ್‌ಗೆ ತಮ್ಮ ವಸತಿಯನ್ನು ಸ್ಥಳಾಂತರಿಸಿದರು.

ಈಗ ಪಾಟೀಲರ ಸುತ್ತಮುತ್ತ ಗೆಳೆಯರು. ಮಧು, ಮಹೇಶ್, ತ್ರಿಪಾಠಿ, ಪಾಟೀಲ್ ಇವರ ಗುಂಪೆಂದರೆ ಗೆಳೆತನಕ್ಕೊಂದು ಉದಾಹರಣೆ. ವಸತಿ ನೀಡಿದ್ದ ಮಾಲೀಕನಿಗೆ ಮಕ್ಕಳಿರಲಿಲ್ಲ. ಪಾಟೀಲರ ಗುಂಪಿಗೋ ಸದಾಕಾಲವೂ ಅತಂತ್ರ ಹಣಕಾಸು ಪರಿಸ್ಥಿತಿ. ಹಲವಾರು ತಾಪತ್ರಯಗಳು. ಇವರೆಲ್ಲರ ಪೈಕಿ ಮಹೇಶ್ ತ್ರಿಪಾಠಿಗೆ ಮಾತ್ರ ಬಾಡಿಗೆ ಕೊಡುವ ತಾಕತ್ತಿತ್ತೇ ಹೊರತು ಮಿಕ್ಕೆಲ್ಲರ ಕೈ ಸಾಮಾನ್ಯವಾಗಿ ಬರಿದೇ. ಕೋಣೆಯಲ್ಲಿ ಎಲ್ಲಿ ಸ್ಥಳವಿದೆಯೋ ಅಲ್ಲಿ ಮಲಗುತ್ತೇವೆಂಬ ಇವರ ಸಲಹೆಗೆ ಮಾಲೀಕನು ಒಪ್ಪದ್ದರಿಂದ ವಸತಿ ಸಮಸ್ಯೆ ಹೇಗೋ ಬಗೆಹರಿದರೂ ಕಾಸಿಲ್ಲದಿದ್ದಾಗ ಎಂದೂ ಸುಳ್ಳಾಡದಿದ್ದ ಈ ಗೆಳೆಯರು ಅನೇಕ ದಿನಗಳು ಕೇವಲ ನೀರನ್ನು ಕುಡಿದು ದಿನಗಳನ್ನು ಕಳೆಯುತ್ತಿದ್ದರು. ಕೈಲಿ ದುಡ್ಡಿದ್ದಾಗ ನಾಲ್ವರು ಸ್ನೇಹಿತರೂ ಒಂದು ಬನ್‌ನ್ನು ಹಂಚಿಕೊಂಡು ತಿನ್ನುತ್ತಿದ್ದುದುಂಟು. ಯಾರಿಗೇ ಮನೆಯಿಂದ ಮನಿಆರ್ಡರ್ ಬರಲಿ ಅದನ್ನು ಬಚ್ಚಿಡದೆ ಬಂದ ಹಣವೆಲ್ಲ ಸಾಮೂಹಿಕವಾಗಿ ವಿನಿಯೋಗವಾಗುತ್ತಿತ್ತು. ಇವರ ಮಧ್ಯೆ ಎಂದೂ ಭೇದಭಾವ ಸುಳಿಯಲೇ ಇಲ್ಲ. ಆಗ ೪ ಅಣೆಗೆ ಒಂದು ಬನ್, ಬಟಾಣಿ ಉಸಳಿ ಬರುತ್ತಿತ್ತು, ಪಾವ್‌ಭಾಜಿ ಸಿಗುತ್ತಿತ್ತು (ಈಗ ಫ್ಯಾಷನ್ ತಿನಸು ಎಂದು ಪರಿಗಣಿತವಾಗಿರುವ ಬರ್ಗರ್, ಪಾವ್‌ಭಾಜಿ ಇವೆಲ್ಲ ಮುಂಬೈನಲ್ಲಿ ಅಂದಿನ ದಿನಗಳಲ್ಲೇ ಪ್ರಚಲಿತವಾಗಿತ್ತು).

ಗ್ರ್ಯಾಂಟ್ ರಸ್ತೆಯಲ್ಲಿನ ವಾಸ್ತವ್ಯದ ಸಂದರ್ಭದಲ್ಲಿ ಪಾಟೀಲರ ಗುಂಪಿಗೆ ಪರಿಚಯವಾದವನು ರಬಕವಿಯ ಒಬ್ಬ ಹುಡುಗ. ಕನ್ನಡ ಮಾತನಾಡುವವ. ಅವನು ವ್ಯಾಪಾರದ ಸಂಬಂಧದಲ್ಲೂ ಇವರೊಂದಿಗೆ ತಿಂಗಳಾನುಗಟ್ಟಲೆ ಇರುತ್ತಿದ್ದವನು ಒಮ್ಮೆ ಇದ್ದಕ್ಕಿದ್ದಂತೆ ಮಾಯವಾಗಿಬಿಟ್ಟ. ಇವರ ಊಟ ತಿಂಡಿಯನ್ನು ಅವನೂ ಹಂಚಿಕೊಳ್ಳುತ್ತಿದ್ದ, ಇವರಿದ್ದ ೧೦೦ ಅಡಿ ದೂರದಲ್ಲಿದ್ದ ಹೊಟೇಲಿನಿಂದ ತಿಂಗಳಿಗೆ ೨೨ ರೂಪಾಯಿಕೊಟ್ಟು ದಿನಕ್ಕೆ ಎರಡು ಬಾರಿ "ರೈಸ್ ಪ್ಲೇಟ್" ತರಿಸಿಕೊಳ್ಳುತ್ತಿದ್ದರು. ರಬಕವಿ ಹುಡುಗನಿಗೆ ಕೈಲಿ ಕಾಸಿಲ್ಲದೆ ಹೋದಾಗ ಅವನಿಗೆ ತಾಪತ್ರಯದಲ್ಲೇ ಇದ್ದ ತನ್ನ ಗೆಳೆಯರೊಂದಿಗೆ ಊಟ ಹಂಚಿ ಕೊಳ್ಳುವುದು ಹೀನಾಯವೆನ್ನಿಸಿ ಇವರಿಂದ ದೂರವಾಗಿ ಹೊಟೇಲಿನಲ್ಲಿ ಉದ್ಯೋಗ ಹಿಡಿದಿದ್ದ. ಒಮ್ಮೆ ಮಹೇಶ್ ತ್ರಿಪಾಠಿಗೆ ಬೀಡಿ ಜಾಹಿರಾತಿನ ವಿನ್ಯಾಸವೊಂದಕ್ಕಾಗಿ ೭೫ ರೂಪಾಯಿ ಸಂಭಾವನೆ ಸಿಕ್ಕಿದಾಗ ಹೊಟೆಲಿಗೆ ಊಟಕ್ಕಾಗಿ ಹೇಳಿಕಳಿಸಿದರೆ ಅದನ್ನು ಒಯ್ದು ತಂದವನು ಅಲ್ಲಿ ಕೆಲಸಕ್ಕಿದ್ದ ರಬಕವಿಯ ಹುಡುಗನೇ! ಗೆಳೆಯರ ಕಣ್ಣಲ್ಲಿ ನೀರು. ರಬಕವಿ ಹುಡುಗನ ಸ್ವಾಭಿಮಾನ ಕಂಡು ಇವರೆಲ್ಲರ ಮನದಲ್ಲೂ ಪ್ರಶಂಸೆ ಪುಟಿದಿತ್ತು.

ಮುಂಬೈನಲ್ಲಿದ್ದಾಗ ಪಾಟೀಲರು ಗೆಳೆಯರೊಂದಿಗೆ ಕೈಗೊಳ್ಳುತ್ತಿದ್ದ ಚಟುವಟಿಕೆಗಳೆಲ್ಲವೂ ಚಿತ್ರಕಲೆಗೆ ಅಥವಾ ಇನ್ನಾವುದೋ ಸೃಜನಶೀಲತೆಗೆ ಸಂಬಂಧಿಸಿದ್ದೇ. ಬಿಡುವಿನ ವೇಳೆಯಲ್ಲಿ ಇವರಿಗೆ ಮುಖ್ಯ ಆಕರ್ಷಣೆಯ ಸ್ಥಳವೆಂದರೆ ಫೋಟೋ ಸ್ಟುಡಿಯೋ. ಪಾಟೀಲರು ತಾವು ಸುತ್ತಮುತ್ತಲಲ್ಲಿ ಗ್ರಹಿಸಿದ ವಿದ್ಯೆಯನ್ನು ಕಾರ್ಯರೂಪಕ್ಕೆ ಇಳಿಸಲು ಅವರಿಗೆ ಅಡ್ಡಬರುತ್ತಿದ್ದುದೆಂದರೆ ಹಣಕಾಸಿನ ಕೊರತೆ. ದಂಡಾವತಿ ಮಠರ ನೂತನ ಕಲಾಮಂದಿರದಲ್ಲಿ ಮೊದಲ ವರ್ಷದ ಶಿಕ್ಷಣವನ್ನು ಪಾಟೀಲರು ಪಡೆಯುತ್ತಿದ್ದಾಗ ಚಿತ್ರಕಲೆಗೆ ಅಗತ್ಯವಾದ ಬಣ್ಣಗಳು, ಕಾಗದ, ಡ್ರಾಯಿಂಗ್ ಬೋರ್ಡ್ ಮೊದಲಾದ ಸಾಮಗ್ರಿಗಳನ್ನು ಕೊಳ್ಳಲೂ ಇವರಿಗೆ ಆರ್ಥಿಕ ಸಾಮರ್ಥ್ಯವಿರಲಿಲ್ಲ. ಇನ್ನೇನು ಮೊದಲ ವರ್ಷದ ಪರೀಕ್ಷೆ, ಅಗತ್ಯವಾಗಿದ್ದ ಸಾಮಗ್ರಿಗಳನ್ನು ಕೊಳ್ಳಲು ೨೦೦ ರೂಪಾಯಿ ಬೇಕೆಂಬುದಾಗಿ ಅಣ್ಣನಿಗೆ ಪತ್ರ ಬರೆದಿದ್ದರೂ ಹಣ ಬರುವುದು ತಡವಾಗಿತ್ತು. ಮುಂಬೈನ ಪ್ರಸಿದ್ಧ ಜೆ.ಜೆ. ಸ್ಕೂಲ್ ಆಫ್ ಆರ್ಟ್ ಪರೀಕ್ಷೆ ನಡೆಯಲಿದ್ದ ಕೇಂದ್ರ. ಪಾಟೀಲರಿಗೆ ಟ್ಯಾಕ್ಸಿ ಮಾಡಿಕೊಂಡು ಹೋಗಲೂ ಕೈಲಿ ಕಾಸಿಲ್ಲ. ಅಪೇರಾ ಹೌಸ್‌ನ ಬಳಿ ಇವರು ಪೆಚ್ಚು ಮೋರೆ ಹಾಕಿಕೊಂಡು ನಿಂತಿದ್ದಾಗ ಇವರ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದ ಗುಜರಾತಿ ಸೋದರಿಯರಲ್ಲಿ ಒಬ್ಬಳು ಮೂಕ ಹುಡುಗಿ ಇವರನ್ನು ಕಂಡು ಸನ್ನೆ ಮಾಡಿ ತನ್ನ ಕಾರಿನಲ್ಲಿ ಕೂರಿಸಿಕೊಂಡು ಶಾಲೆಗೆ ಬಿಟ್ಟಿದ್ದಳು. ಆ ದಿನ ಮಧ್ಯಾಹ್ನದವರೆಗೆ ಪಾಟೀಲರ ಗಮನವೆಲ್ಲ ಪರೀಕ್ಷೆಯಲ್ಲೇ. ಮೊದಲ ದಿನ ವ್ಯಕ್ತಿ ಚಿತ್ರವನ್ನು ಬಿಡಿಸಬೇಕಾಗಿತ್ತು. ಪಾಟೀಲರು ಈಗಿನಂತೆಯೇ ಆಗಲೂ ವ್ಯಕ್ತಿ ಚಿತ್ರಣದಲ್ಲಿ ಎತ್ತಿದ ಕೈ. ಚಿತ್ರಣದಲ್ಲಿ ತುಂಬಾ ಚುರುಕು. ಮಧ್ಯಾಂತರ ವೇಳೆಗೆ (ಇಂಟರವೆಲ್) ೧೫-೨೦ ನಿಮಿಷ ಮುಂಚಿತವಾಗಿಯೇ ಪರೀಕ್ಷಾ ಕೋಣೆಯಿಂದ ಹೊರಬಂದಾಗ ಹಸಿದಿದ್ದ ಪಾಟೀಲರ ಹೊಟ್ಟೆ ಬೆಂಕಿಯಂತೆ ಸುಡುತ್ತಿತ್ತು. ಗೆಳೆಯರ ಹಣದಲ್ಲಿ ಅದೆಷ್ಟು ದಿನಗಳು ತಿನ್ನುವುದೆಂದು ಸಂಕೋಚ ಪಡುತ್ತಿದ್ದ ಮನಸ್ಸು ಆಗ ಮಾತ್ರ ಪಾಟೀಲರು ಬೆಂಚೊಂದರ ಮೇಲೆ ಕೂತು ಗಂಟೆಗಟ್ಟಲೆ ಅತ್ತಿದ್ದರು. ಇವರ ಗೆಳೆಯರೆಲ್ಲ ಅಷ್ಟು ಹೊತ್ತಿಗಾಗಲೇ ಇವರಿಗಾಗಿ ಹುಡುಕಾಡಿದ್ದರು. ಪಾಟೀಲರು ಅವರ ಕಣ್ಣಿಗೆ ಬೀಳುವುದನ್ನು ತಪ್ಪಿಸಿಕೊಂಡು ಒಂಟಿಯಾಗಿ ಕೂತು ತಮ್ಮ ಸ್ಥಿತಿಗಾಗಿ ತಾವೇ ಮರುಗಿದ್ದರು.

ಪಾಟೀಲರು ಅಳುತ್ತಾ ಕೂತಿದ್ದ ಸ್ಥಳದಿಂದ ಸ್ವಲ್ಪವೇ ದೂರದಲ್ಲಿ "ಎಸ್. ರಾಮಚಂದ್ರ ಸ್ಟೇಷನರಿ ಮರ್ಚೆಂಟ್" ಇವರ ಅಂಗಡಿ. ಅಲ್ಲಿಗೆ ಆಗಮಿಸಿದ್ದ ಲೀಲಾ ಷಾ ಎಂಬ ಇವರ ಸಹಪಾಠಿ ಇವರನ್ನು ಕಂಡದ್ದು ಅಚಾನಕವಾಗಿ. ಮಹಾ ತೀಕ್ಷ್ಣ ಸ್ವಭಾವದ ಹುಡುಗಿ. ಮಧ್ಯಾಹ್ನದ ಪರೀಕ್ಷೆ ಸಮಯ ಸಮೀಪಿಸುತ್ತಿದ್ದಾಗ ಮರದ ಕೆಳಗೆ ಕೂತಿದ್ದ ಪಾಟೀಲರನ್ನು ಕಂಡು ಅವರಲ್ಲಿಗೆ ಧಾವಿಸಿದವಳೇ "ನಿನ್ನ ಮುಖ ನೋಡಿದರೆ ನೀನು ಊಟ ಮಾಡಿರುವ ಹಾಗಿಲ್ಲ" ಎಂದು ಹೇಳಿ ಪರೀಕ್ಷಾ ಕೋಣೆಗೆ ಇವರನ್ನು ಕರೆದೊಯ್ದು ಸೂಪರ್‌ವೈಜರಿಗೆ ಸ್ವಲ್ಪ ತಡವಾಗಿ ಬರಲು ಅನುಮತಿ ಬೇಡಿ ಇವರನ್ನು ಹೊಟೇಲಿಗೆ ಕರೆದೊಯ್ದೇ ಬಿಟ್ಟಳು. ಊಟವಾದ ನಂತರ ನೂರರ ನೋಟನ್ನು ಹೊರತೆಗೆದು ಪಾಟೀಲರ ಕೈಗೆ ತುರುಕಿ "ನೋಡು ಪಾಟೀಲ್ ನಂಗೊತ್ತಿದೆ ನಿಮಗೆ ಅಂದರೆ ಗಂಡಸರಿಗೆ ಹೆಣ್ಣೊಬ್ಬಳ ಹಣದಿಂದ ತಿನ್ನೋದು ಇಷ್ಟವಾಗೊಲ್ಲಾಂತ. ಸ್ವಾಭಿಮಾನ ನಿಮ್ಮನ್ನು ಕಾಡುತ್ತದೆ. ನೀನೇ ಈ ಹಣವನ್ನು ಕ್ಯಾಶಿಯರ್‌ಗೆ ಕೊಡು" ಎಂದಳು. ಗಂಡು ಹೆಣ್ಣು ಎಂಬ ಭೇದ ಭಾವವೇ ಇರದಿದ್ದ ಮುಕ್ತ ವಾತಾವರಣದ ಇಂಥ ಕಲಾಶಾಲೆಯಲ್ಲಿ ವ್ಯಾಸಂಗ ಮಾಡಿದ್ದರಿಂದಲೇ ಪಾಟೀಲರಿಗೆ ಉದಾರ ದೃಷ್ಟಿಯನ್ನು ಬೆಳೆಸಿಕೊಳ್ಳುವುದು ಸಾಧ್ಯವಾಯಿತು. ಹುಡುಗಿಯೊಬ್ಬಳ ಜಡೆ ಹಿಡಿದೆಳೆದರೆ ಅಥವಾ ಆಕೆಯ ಹೆಗಲ ಮೇಲೆ ಕೈ ಹಾಕಿದರೆ ಯಾರೂ ಸಣ್ಣತನವನ್ನೇ ತೋರಿಸುತ್ತಿರಲಿಲ್ಲ. ದುಡುಕಿ ಏನಾದರೂ ಅಚಾತುರ್ಯವಾದರೂ ನೇರವಾಗಿ ಸರಿಪಡಿಸಿಕೊಳ್ಳಬಹುದಾಗಿದ್ದ ಸಲಿಗೆ ವಿದ್ಯಾರ್ಥಿಗಳ

ಮಧ್ಯದಲ್ಲಿತ್ತು. ವ್ಯಕ್ತಿತ್ವವನ್ನು ಕಾಯ್ದುಕೊಳ್ಳಬೇಕಾದಾಗ ಅನೇಕ ಸೂಕ್ಷ್ಮಗಳು ಪಾಟೀಲರ ಮನಸ್ಸಿನಲ್ಲಿ ಬೆಳೆದಿದ್ದವು. ಇವರ ಮನಃಸ್ಥೈರ್ಯವನ್ನು ಪರೀಕ್ಷಿಸುವಂಥ ಅನೇಕ ಸಂದರ್ಭಗಳಿದ್ದವು.

ನೂತನ ಕಲಾಮಂದಿರದ ವಿದ್ಯಾರ್ಥಿಯೊಬ್ಬನಿಗೆ ಪ್ರತಿ ದಿನವೂ ಒಂದು ದೊಡ್ಡ ಡ್ರಾಯಿಂಗ್ ಶೀಟ್ - ಹಾಫ್ ಇಂಪೀರಿಯಲ್ ಸೈಜ್ - ಅಂದರೆ ೧೫" x ೧೮" ಅಭ್ಯಾಸಕ್ಕೆ ಅಗತ್ಯವಾಗುತ್ತಿತ್ತು. ಪಾಟೀಲರ ಪರಿಸ್ಥಿತಿ ಇವರ ಅನೇಕ ಸಹಪಾಠಿಗಳಿಗೆ ಅರ್ಥವಾಗಿದ್ದು ಇವರ ಅಕ್ಕನಂತಿದ್ದ ಲೀಲಾ ಲೋಲ್ವೇಕರ್ ಎಂಬಾಕೆಯಂತೂ ವಿಶೇಷ ನೆರವನ್ನು ನೀಡುತ್ತಿದ್ದರು. ಅಗತ್ಯಕ್ಕಿಂತಲೂ ಹೆಚ್ಚಿನ ಸಾಮಗ್ರಿ ಆಕೆಯ ಬಳಿ ಸದಾ ಇರುತ್ತಿತ್ತು. ಡ್ರಾಯಿಂಗ್ ಶೀಟ್‌ಗಳು, ಪರೀಕ್ಷೆಗೆಂದು ಕೊಂಡಿದ್ದ ಹೊಸ ಹೊಸ ವಿಂಡ್ಸರ್ ಅಂಡ್ ನ್ಯೂಟನ್ ಕಲರ್ ಟ್ಯೂಬ್‌ಗಳು, ಇವನ್ನೆಲ್ಲ ಆಕೆ ಇವರೊಂದಿಗೆ ಹಂಚಿಕೊಳ್ಳುತ್ತಿದ್ದರು. ಆಕೆ ಕೊಳ್ಳುತ್ತಿದ್ದುದ್ದೇ ಲೈಗ್ಗರ್ ಕಂಪನಿಯ ಸ್ಟೂಡೆಂಟ್ ಕಲರ್‌ಗಳನ್ನು.

ಜೆ.ಜೆ. ಸ್ಕೂಲ್ ಆಫ್ ಆರ್ಟ್‌ನಲ್ಲಿ ಪರೀಕ್ಷೆಗೆ ಹಾಜರಾಗಬೇಕಾಗಿದ್ದ ಎರಡನೆಯ ದಿನವೂ ಪಾಟೀಲರಿಗೆ ಊರಿನಿಂದ ಹಣ ಬಂದಿರಲೇ ಇಲ್ಲ. ಜೆ.ಜೆ. ಶಾಲೆಯ ಬಳಿಯೇ ಇದ್ದ "ಲಕ್ಕಿ ಹೊಟೇಲ್"ಗೆ ಜಯಂತಿ ಭಾಯಿ ಎಂಬ ಕಮೀಷನ್ ಏಜೆಂಟ್ ಪ್ರತಿ ದಿನವೂ ಮಧ್ಯಾಹ್ನ ೧ ಗಂಟೆಗೆ ತಪ್ಪದೆ ಬರುತ್ತಿದ್ದ. ಪಾಟೀಲರಿಗೆ ಹೊಟ್ಟೆ ಹಸಿವು ತಡೆಯದಾಗಿತ್ತು. ಅವರ ಬಳಿ ಆಗಿದ್ದ ಒಂದೇ ಒಂದು ಬೆಲೆಬಾಳುವ ವಸ್ತುವೆಂದರೆ ಅವರ ಅಣ್ಣ ನೀಡಿದ್ದ ಚಿನ್ನದ ಉಂಗುರ. ಪಾಟೀಲರು ಆ ಕಮೀಷನ್ ಏಜೆಂಟರ ಬಳಿ ಹೋಗಿ ಸಂಕೋಚದಿಂದ "ನೀವು ಈ ಉಂಗುರವನ್ನು ನಿಮ್ಮ ಬಳಿ ಇಟ್ಟುಕೊಂಡಿರಿ. ಮನೆಯಿಂದ ಮನಿ ಆರ್ಡರ್ ಬಂದಿಲ್ಲ. ಹಣ ಬರುವವರೆಗೂ ನಾನು ನಿಮ್ಮ ಹೆಸರಿನಲ್ಲಿ ಇಲ್ಲಿ ಊಟ ಮಾಡಬಹುದಾ?" ಎಂದು ಕೇಳಿದಾಗ ಆ ಕಮೀಷನ್ ಏಜೆಂಟ್‌ನಿಗೆ ಇವರ ಮಾತು ಕೇಳಿ ಅದೆಷ್ಟು ನೋವಾಯಿತೆಂದರೆ ಗದ್ಗದದ ದನಿಯಲ್ಲಿ "ನೋಡಪ್ಪಾ ನಾನು ಕಮೀಷನ್ ಕೆಲಸ ಮಾಡುವವನಿರಬಹುದು. ಆದರೆ ನೀನು ತಿಳಿಯಬೇಕಾದ್ದು ನಾನು ದಿನವೊಂದರಲ್ಲಿ ಸಾವಿರಾರು ರೂಪಾಯಿಯನ್ನು ಖರ್ಚು ಮಾಡಬಲ್ಲೆ ಎಂಬುದು. ನನಗೆ ಹಣದ ಕೊರತೆಯಿಲ್ಲ. ನಿನ್ನ ತಾಪತ್ರಯ ನಂಗೆ ಅರ್ಥವಾಗಿದೆ. ನಿನ್ನ ಉಂಗುರ ನೀನೇ ಇಟ್ಟುಕೋ. ನಾನು ನಿಂಗೆ ಊಟದ ವ್ಯವಸ್ಥೆ ಮಾಡುತ್ತೇನೆ" ಎಂದ. ತಕ್ಷಣವೇ ಹೊಟೇಲು ಮಾಲಿಕನ ಬಳಿಗೆ ಇವರನ್ನು ಕರೆದೊಯ್ದು "ಈ ಹುಡುಗನಿಗೆ ನನ್ನ ಲೆಕ್ಕದಲ್ಲಿ ಅವನು ಯಾವಾಗಲೇ ಬರಲಿ ಊಟದ ವ್ಯವಸ್ಥೆ ಮಾಡಿಕೊಡಿ" ಎಂದು ಆದೇಶಿಸಿದ.

ಪರೀಕ್ಷೆಯ ಮೂರನೆಯ ದಿನದ ಹೊತ್ತಿಗೆ ಪಾಟೀಲರಿಗೆ ಮನೆಯಿಂದ ೨೦೦ ರೂಪಾಯಿ ಮನಿ ಆರ್ಡರ್ ಬಂದಿತ್ತು. ಪಾಟೀಲರ ತಂದೆಗೆ ತಿಳಿಸದೆಯೇ ಇವರ ಅಣ್ಣ ಶಿವನಗೌಡರು ಬೆಲ್ಲದ ಲಾರಿಯಿಂದ ಬಂದ ಕಮೀಷನ್ನನಲ್ಲಿ ಇವರಿಗೆ ಹಣ ಕಳಿಸಿ "ಇದನ್ನು ಯೋಗ್ಯವಾಗಿ ಬಳಸಿಕೋ" ಎಂದು ತಿಳಿಸಿದ್ದರು.

ಶಾಲೆಯಲ್ಲಿ ಎಂ.ಬಿ. ಪಾಟೀಲರು ಏನೇ ಕಲಾ ಸಾಮರ್ಥ್ಯವನ್ನು ತೋರಿದ್ದರೂ ಅವರ ತಂದೆಗೆ ಮಾತ್ರ ಮಗ ಆಯ್ದು ಕೊಂಡ ಹಾದಿಯ ಬಗ್ಗೆ ಅಸಮಾಧಾನ ಕಾಡುತ್ತಲೇ ಇತ್ತು. ಪಾಟೀಲರ ಆತ್ಮೀಯ ಗೆಳೆಯ, ಸಾಹಿತ್ಯಪ್ರೇಮಿ ದಾನಪ್ಪ ಜತ್ತಿಯ ವಚನ ಸಂಕಲನವನ್ನು ಬಂಥನಾಳ ಶಿವಯೋಗಿಗಳು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಊರಿನಲ್ಲಿ ಸಮಾರಂಭ ಏರ್ಪಟ್ಟಾಗ ಪಾಟೀಲರು ಮುಂಬೈನಿಂದ ಅಲ್ಲಿಗೆ ತೆರಳಿದ್ದರು. ದಾನಪ್ಪ ಜತ್ತಿಯ ತಂದೆ ಜತ್ತಿ, ಪಾಟೀಲರ ತಂದೆಯ ನಿಕಟವರ್ತಿಗಳು. ಸಮಾರಂಭ

ಮುಗಿದ ನಂತರ ಪಾಟೀಲರು ರಾತ್ರಿ ಅಣ್ಣಂದಿರೊಂದಿಗೆ ಮನೆಯಲ್ಲಿ ಊಟಕ್ಕೆ ಕೂತಿದ್ದರು, ಅತ್ತಿಗೆಯರೆಲ್ಲ ಬಡಿಸುತ್ತಿದ್ದರು. ಮಾತಿನ ಮಧ್ಯೆ ಸಹಜವಾಗಿಯೇ ಸಮಾರಂಭದ ವಿಷಯ ಪ್ರಸ್ತಾಪವಾಯಿತು. ಅಸಮಾಧಾನದ ಛಾಯೆಯನ್ನು ಹೊತ್ತ ಪಾಟೀಲರ ತಂದೆ "ನೀವೆಲ್ಲ ನೋಡ್ತಿದೀರೋ ಇಲ್ಲವೋ, ಆ ಹುಚ್ಚ ಸೂಳೆಮಗ ದಾನಪ್ಪ ಜತ್ತಿ ಒಂದು ವಚನ ಸಂಕಲನ ಮಾಡ್ದ. ಅದಕ್ಕೆ ಮೂರು ಕಾಸಿನ ಬೆಲೆಯಿಲ್ಲ. ಇನ್ನು ಇವನು, ನನ್ನ ಮಗ ಮಲ್ಲಿಕಾರ್ಜುನ ಚಿತ್ರ ಬರೆದು ಭಿಕ್ಷೆ ಬೇಡ್ತಿದ್ದಾನೆ. ಇವರೆಲ್ಲ ಹೆಂಗೆ ಸುಧಾರಿಸ್ತಾರೋ ಗೊತ್ತಿಲ್ಲ. ಇವರೆಲ್ಲ ಉಪವಾಸ ಬೀಳೋರೇ" ಅಂತ ಕಿರುಚಾಡಿದರು. ಪಾಟೀಲರು ಕೈಲಿ ಹಿಡಿದಿದ್ದ ಅನ್ನದ ತುತ್ತನ್ನು ತಾಟಿನೊಳಗೇ ಬಿಟ್ಟರು. ಮುಖ ಕೆಂಪಾಗಿಸಿಕೊಂಡು ಮನೆಯವರೆಲ್ಲ ತಮ್ಮನ್ನು ಗಮನಿಸುತ್ತಿದ್ದಾಗ ತಂದೆಯ ಮುಂದೆ ಮೊದಲ ಬಾರಿಗೆ ಗುಡುಗಿದರು: "ನೀವು ನನಗೆ ಮಾಡಿರುವ ಉಪಕಾರವನ್ನು ನಾನು ಸ್ಮರಿಸುತ್ತೀನಿ ನಿಜ. ಆದರೆ ಒಂದು ಮಾತು ಕೇಳಿ. ಎಲ್ಲಿಯವರೆಗೆ ನೀವು ಸಾಹಿತ್ಯ ಹಾಗೂ ಕಲೆಯನ್ನು ತುಚ್ಛವಾಗಿ ನೋಡುತ್ತೀರೋ ಅಲ್ಲಿಯವರೆಗೆ ನಿಮಗೆ ಏಳಿಗೆಯಿಲ್ಲ. ನಿಮ್ಮ ಕೈಲಿ ಓಡಾಡುತ್ತಿರುವ ದುಡ್ಡು, ನಿಮ್ಮ ವ್ಯವಹಾರ, ಪರಿಸರ ಇವೆಲ್ಲವೂ ನಿಮ್ಮಿಂದ ಇಂಥ ಮಾತುಗಳನ್ನು ಆಡಿಸುತ್ತದೆ. ನಿಮ್ಮ ಮುಂದಿನ ಪೀಳಿಗೆ ನಿಮ್ಮ ಹೆಸರನ್ನು ಸ್ಮರಿಸುತ್ತದೋ ಇಲ್ಲವೋ ತಿಳಿಯದು. ಹೆಚ್ಚೆಂದರೆ ಒಂದು ತಲೆಮಾರು ತಮ್ಮ ಮಕ್ಕಳಿಗೆ ನಿಮ್ಮ ಹೆಸರನ್ನು ಇಟ್ಟರೂ ಇಡಬಹುದಷ್ಟೆ. ನೀವು ಕಾಲವಾದ ನಂತರ ನಿಮ್ಮಲ್ಲಿರುವ ಹಣವನ್ನು ನಾವೆಲ್ಲ ಹಂಚಿಕೊಳ್ಳುತ್ತೀವಿ. ಅಲ್ಲಿಗೆ ನಿಮ್ಮ ಅಂತಸ್ತು, ಮನೆ ಮಾರು ಇವೆಲ್ಲ ಮುಗಿಯುತ್ತದೆ. ಆದರೆ ಕಲೆ, ಸಾಹಿತ್ಯ ಇವು ವ್ಯಕ್ತಿ ಕಣ್ಮರೆಯಾದ ನಂತರವೂ ಶಾಶ್ವತವಾಗಿ ಉಳಿಯುತ್ತವೆ" ಪಾಟೀಲರ ಆತ್ಮವಿಶ್ವಾಸಕ್ಕೆ, ಸ್ವಾಭಿಮಾನಕ್ಕೆ ಎಂದೂ ಸೋಲಿರಲಿಲ್ಲ.

ಮಗನ ನೇರ ಮಾತಿನಿಂದ ಪಾಟೀಲರ ತಂದೆ ಭೀಮನಗೌಡರು ದಂಗಾದರು. ಮನೆ ಹೆಂಗಸರೆಲ್ಲ ಮೌನದಿಂದ ಒಳಗೆ ಸೇರಿದರು. ಪಾಟೀಲರ ಹಿರಿಯಣ್ಣ ತಮ್ಮನ ಅಭ್ಯುದಯಕ್ಕಾಗಿ ಸಾಧ್ಯವಾದುದೆಲ್ಲವನ್ನು ಮಾಡುತ್ತಿದ್ದ ಉದಾರಿಯಾಗಿದ್ದರೆ, ಪಾಟೀಲರ ಎರಡನೇ ಸೋದರ ಮಾತ್ರ ಇವರ ಬಗೆಗಿನ ಈರ್ಷೆಯನ್ನು ಮುಂದುವರಿಸಿಯೇ ಇದ್ದರು. ಅವಕಾಶ ಸಿಕ್ಕಾಗಲೆಲ್ಲ ಪಾಟೀಲರ ಬಗ್ಗೆ ತಂದೆಗೆ ಚಾಡಿ ಮಾತುಗಳನ್ನು ಹೇಳಿ ಇವರನ್ನು ದಂಡಿಸುವಂತೆ ಪ್ರಚೋದಿಸುತ್ತಲೇ ಇದ್ದರು. ಶಿಕ್ಷಣ ಪೂರೈಸುವ ಸಲುವಾಗಿ ಪಾಟೀಲರು ಮತ್ತೆ ಮುಂಬೈ ತಲಪುತ್ತಿದ್ದಂತೆಯೇ ತಂದೆಯಿಂದ ಪತ್ರವೊಂದು ಬಂದಿತ್ತು. ಅದರ ಒಕ್ಕಣೆ: "ನೀನೇನಾದರೂ ಅಲ್ಲಿ ಶಿಕ್ಷಣವನ್ನು ಮುಂದುವರೆಸಿದೆಯಾದರೆ ನಾನು ಆಮರಣ ಉಪವಾಸ ಮಾಡುತ್ತೀನಿ." ಆ ಪತ್ರ ಅಕಸ್ಮಿಕವಾಗಿ ಸಿಕ್ಕಿದ್ದು ಗುರುಗಳಾದ ದಂಡಾವತಿಮಠರ ಕೈಗೇ. ಅವರೇ ಪಾಟೀಲರ ತಂದೆಗೆ ಮಾರುತ್ತರ ಬರೆದರು: "ನಿಮ್ಮ ಮಗನ ಖರ್ಚನ್ನು ಪೂರೈಸುವುದು ನಿಮಗೆ ಅಷ್ಟೊಂದು ಕಷ್ಟವಾಗಿದ್ದರೆ ಅದರ ಚಿಂತೆ ಬಿಡಿ, ನನ್ನ ಮೂವರು ಮಕ್ಕಳ ಜತೆ ಇವನೂ ಒಬ್ಬ ಎಂದು ಭಾವಿಸಿ ನಾನು ಅವನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತೀನಿ."

ಪಾಟೀಲರು ಮುಂದೆ ವಿದ್ಯಾರ್ಥಿಯಾಗಿದ್ದಾಗಿನ ನಾಲ್ಕು ವರ್ಷಗಳಲ್ಲಿ ಅದೆಷ್ಟೋ "ಬ್ರೇಕ್"ಗಳು ಇದ್ದರೂ ಅವರು ತರಗತಿಗೆ ಹಾಜರಾದಾಗ ಮಾತ್ರ ಮೈಮರೆತು ಅಭ್ಯಾಸ ಮಾಡುತ್ತಿದ್ದರು. ನೂತನ ಕಲಾ ಮಂದಿರದಲ್ಲಿ ಸಂಕೀರ್ಣ ತರಬೇತಿ. ಪ್ರತಿ ದಿನವೂ ವಿದ್ಯಾರ್ಥಿಯೊಬ್ಬ ೫೦ರಿಂದ ೧೦೦ರವರೆಗೆ ಪೆನ್ಸಿಲ್ ಹಾಗೂ ಪೆನ್ ಸ್ಕೆಚ್‌ಗಳನ್ನು ಬರೆಯಬೇಕಾಗುತ್ತಿತ್ತು. ಸ್ಕೆಚ್ ಬುಕ್ ಅಂತೂ ವಿದ್ಯಾರ್ಥಿ ಹೋದೆಡೆಯಲ್ಲೆಲ್ಲ ನಿರಂತರವಾಗಿ ಕೊಂಡೊಯ್ಯಲೇ ಬೇಕಾಗಿದ್ದಂಥ ವಸ್ತು. ವಿದ್ಯಾರ್ಥಿಯೊಬ್ಬ ತನ್ನ ಅಧ್ಯಯನದ ಅವಧಿಯಲ್ಲಿ

ವ್ಯಕ್ತಿ ಚಿತ್ರ ರಚನೆ, ಸಂಯೋಜನೆ ಹಾಗೂ ಸ್ಟಿಲ್ ಲೈಫ್ ಚಿತ್ರಣ ಕಲಿಯಬೇಕಾಗಿತ್ತು. ನಾಲ್ಕನೇ ವರ್ಷದಲ್ಲಿ ನ್ಯೂಸ್ ಸ್ಟಡಿ. ಇವಕ್ಕೆಲ್ಲ ಚಾರ್‌ಕೋಲ್ ಹಾಗೂ ಕ್ರೇಯಾನ್ ಬಳಸಬೇಕಾಗಿತ್ತು. ರೂಪದರ್ಶಿಗಳಲ್ಲಿ ಕೆಲವರಿಗೆ ೩೦ ವರ್ಷಗಳ ಅನುಭವವಿತ್ತು. ಅಲ್ಲಲ್ಲಿ ಪ್ರದರ್ಶಿತಗೊಂಡ ಕಲಾಕೃತಿಗಳ ಮೂಲಕ ಅವರನ್ನು ಜನರು ರೂಪದರ್ಶಿಗಳೆಂದು ಗುರುತಿಸಲು ಸಾಧ್ಯವಾಗುತ್ತಿತ್ತು. ಹ್ಯೂಮನ್ ಅನಾಟಮಿಯಲ್ಲಿ, ಫಿಗರೆಟಿವ್ ಡ್ರಾಯಿಂಗ್‌ಗಳಲ್ಲಿ ಅತೀವ ಆಸಕ್ತಿಯಿದ್ದ ಪಾಟೀಲರು ಅಂದಿನ ದಿನಗಳಲ್ಲೇ ರೇಖೆಗಳ ಮೇಲೆ ಪ್ರಭುತ್ವವನ್ನು ಸಾಧಿಸಿದ್ದರು. ವ್ಯಕ್ತಿಯನ್ನು ಕಂಡ ಒಂದೆರಡು ಸೆಕೆಂಡುಗಳಲ್ಲೇ ಅವರ ಚಿತ್ರವನ್ನು ಬರೆಯಬಲ್ಲವರಾಗಿದ್ದರು.

ರಿಯಲಿಸ್ಟಿಕ್ ಇಲಸ್ಟ್ರೇಶನ್, ಕಾರ್ಟೂನ್‌ಗಳು, ಡಿಸೈನ್‌ಗಳು ಇವೆಲ್ಲಕ್ಕೂ ಡ್ರಾಯಿಂಗ್‌ನಲ್ಲಿ ಮಹತ್ವವಿದೆ ಎಂದು ಅರಿತಿದ್ದ ಪಾಟೀಲರು ಅದನ್ನು ಆಳವಾಗಿ ಅಧ್ಯಯನ ಮಾಡಿ ಬೇರೆ ಬೇರೆ ಮಾಧ್ಯಮಗಳಿಗೆ ಅದನ್ನು ಬಳಸಿಕೊಳ್ಳುವುದನ್ನು ಸಾಧ್ಯವಾಗಿಸಿ ಕೊಂಡರು. ಯಾವುದೇ ವಸ್ತುವನ್ನು ಕಂಡಾಗ ದೃಷ್ಟಿಕೋನ ಗೋಚರವಾಗಿ ಕಲಾವಿದನ ಚೌಕಟ್ಟಿನಲ್ಲಿ ಅದನ್ನು ಚಿತ್ರಿಸಲು ಸಾಧ್ಯವಾಗುವುದರಿಂದ ನೃತ್ಯಗಾತಿಯೊಬ್ಬಳನ್ನು ಕೂಡಾ ಚಿತ್ರಿಸಬಹುದೆಂಬ ಪರಿಜ್ಞಾನ ಅವರಿಗಿತ್ತು. ಪರಿಪೂರ್ಣತೆಯನ್ನು ಸಾಧಿಸುವ ಮೂಲಕ ಇಂಥ ವೇಗವನ್ನು ಕರಗತ ಮಾಡಿಕೊಳ್ಳಲು ಅವರು ಸನ್ನದ್ಧರಾಗಿದ್ದರು.

ಉದ್ಯೋಗಕ್ಕಾಗಿ ಹುಡುಕಾಟ

ಎಂ.ಬಿ. ಪಾಟೀಲರು ಮುಂಬೈನ ನೂತನ ಕಲಾಮಂದಿರದಲ್ಲಿ ವಿದ್ಯಾರ್ಥಿಯಾಗಿದ್ದಾಗ ನಾಲ್ಕು ವರ್ಷಗಳ ಕಾಲವೂ ಹಲವಾರು ಏಳುಬೀಳುಗಳು. ತಂದೆ ಹಾಗೂ ಒಬ್ಬ ಸೋದರನಿಂದಂತೂ ನಿರಂತರ ನಿರುತ್ತೇಜನ! ಅದರೂ ಪಾಟೀಲರು ವಿದ್ಯಾರ್ಥಿಯ ದೆಸೆಯಲ್ಲಿ ಕಂಡದ್ದು ಮಾನವಿಯತೆಯ ಅತ್ಯದ್ಭುತ ಮುಖಗಳನ್ನು; ಗೆಳೆಯರ ಹೃದಯಶ್ರೀಮಂತಿಕೆಯನ್ನು; ದಂಡಾವತಿಮಠರಂಥ ಸಂಪನ್ನ ನಿಸ್ವಾರ್ಥ ಕಲಾಗುರುಗಳ ಧೀಮಂತ ಹಾಗೂ ಉದಾರ ವ್ಯಕ್ತಿತ್ವವನ್ನು. ಪಾಟೀಲರು ಹತಾಶೆಗಳ ಮಧ್ಯೆಯೂ ತಮ್ಮತನವನ್ನು ಕಾಯ್ದುಕೊಂಡು ಎಂಥಾ ಅಡ್ಡಿಗಳು ಎದುರಾದರೂ ಧೃತಿಗೆಡದೆ ಗುರಿಯನ್ನು ತಲಪಲು ಸಾಧ್ಯವಾದದ್ದು, ವಿಪರ್ಯಾಸಗಳ ಮಧ್ಯೆಯೂ ಅವರು ಎಡೆಬಿಡದೆ ರೂಢಿಸಿಕೊಂಡಂಥ ಗಟ್ಟಿತನ.

ನೂತನ ಕಲಾಮಂದಿರದ ತರಬೇತಿಯ ಕೊನೆಯಲ್ಲಿ ಚಿತ್ರಕಲೆಯಲ್ಲಿ ಡಿಪ್ಲೊಮೊ ಪಡೆದು ಮುಂಬೈನಿಂದ ತಿಕೋಟಾಕ್ಕೆ ವಾಪಸ್ಸಾದ ನಂತರ ಪಾಟೀಲು ಎದುರಿಸಿದ ಮೊದಲ ಸಮಸ್ಯೆ ತಾವು ಕಲಿತ ವಿದ್ಯೆಯನ್ನು ಬಳಸಿಕೊಳ್ಳುವಂಥ ಅಯಾಮದ ಹುಡುಕಾಟ. ವಿದ್ಯಾರ್ಥಿ ಜೀವನವನ್ನು ಮುಗಿಸಿ ಬಂದ ಇವರಿಂದ ಮನೆಯವರಿಗಿದ್ದ ನಿರೀಕ್ಷಣೆಯೇ ಬೇರೆ. ಅದೆಂದರೆ ಇವರೊಂದು ಸಂಪಾದನೆಯ ಮಾರ್ಗವನ್ನು ಹಿಡಿದು ಸಂಸಾರಕ್ಕೆ ಅರ್ಥಿಕವಾಗಿ ನೆರವಾಗಬೇಕೆನ್ನುವುದು. ಮುಂಬೈನ ವಿಶಾಲವಾದ ವಾತಾವರಣದಲ್ಲಿ ತೇಲಿ ಮುಳುಗಿ ಬಂದಿದ್ದ ಪಾಟೀಲರು ಈಗ ತಿಕೋಟಾದಂಥ ಸಣ್ಣ ಸ್ಥಳದಲ್ಲಿ ತಮ್ಮ ವ್ಯಕ್ತಿತ್ವದ ಛಾಪನ್ನು ಮೂಡಿಸಬೇಕಾಗಿತ್ತು. ಇವರ ಸಾಮರ್ಥ್ಯಕ್ಕೆ ತಿಕೋಟಾದ ಆವರಣ ಸಣ್ಣದಾಗಿತ್ತು. ಇವರ ವಿಫುಲ ಕಲಾವಂತಿಕೆಯ ಪ್ರಯೋಜನವನ್ನು ಪಡೆದುಕೊಳ್ಳುವ ಅವಕಾಶ ತಿಕೋಟಾದಂಥ ಸ್ಥಳಕ್ಕೆ ಇರದಿದ್ದುದೇ ಒಂದು ವಿಪರ್ಯಾಸವಾಗಿತ್ತು.

ಸಂಪಾದನೆಯ ಮಾರ್ಗವನ್ನು ಕಂಡುಕೊಳ್ಳಲೇಬೇಕಾದ ಅನಿವಾರ್ಯ ಪರಿಸ್ಥಿತಿಗೆ ಸಿಕ್ಕ ಪಾಟೀಲರು ತಿಕೋಟಾದಲ್ಲಿನ ಪಂಚಾಯಿತಿಯ ಆವರಣದಲ್ಲಿ ತೂಗು ಹಾಕುವ ಸಲುವಾಗಿ ಮುಂಬೈನಿಂದ ತಂದಿದ್ದ ವರ್ಣಸಾಮಗ್ರಿಗಳ ನೆರವಿನಿಂದ ಮಹಾತ್ಮಾ ಗಾಂಧಿ, ಸರ್ವಪಲ್ಲಿ ರಾಧಾಕೃಷ್ಣನ್ ಹಾಗೂ ಪಂಡಿತ್

ಜವಹರಲಾಲ್ ನೆಹ್ರೂ ಅವರ ಭಾವಚಿತ್ರಗಳನ್ನು ತಯಾರಿಸಿದಾಗ ಊರಿನ ಜನರೆಲ್ಲ ಅದನ್ನು ಕೊಂಡಾಡಿದರೂ ಪಂಚಾಯಿತಿ ಮಾತ್ರ ಹಣ ನೀಡಿಕೆಯ ವಿಷಯದಲ್ಲಿ ಭಾರೀ ತಕರಾರು ಮಾಡಿದರು. "ನಿಮ್ಮಪ್ಪ ಅದ್ಕಂದು ಮಾಡಿಸು. ನಿಂಗೆ ಇವುಗಳ ಬೆಲೆ ಗೊತ್ತಾಗ್ತದೆ" ಎಂದು ಪಂಚಾಯಿತಿ ಮುಖ್ಯಸ್ಥರ ಮುಂದೆ ಕೂಗಾಡಿದವರೇ, ಅವರಿತ್ತ ಹಣ ತೆಗೆದುಕೊಳ್ಳದೆಯೇ ಹೊರಬಂದರು - ತಾರುಣ್ಯ ತುಂಬಿದ್ದ ಪಾಟೀಲ. ಸಹಜವಾಗಿಯೇ ಯೌವ್ವನದಲ್ಲಿ ಇರುವ ರೋಷ ಇವರಲ್ಲೂ ಮನೆ ಮಾಡಿತ್ತು.

ತಿಕೋಟಾದಲ್ಲಿ ಒಳ್ಳೆಯ ಪುಸ್ತಕ ಭಂಡಾರವಿರಲಿಲ್ಲ. ಅಸುಪಾಸಿನಲ್ಲಿ ದೊಡ್ಡ ಗ್ರಂಥಾಲಯವೆಂದರೆ ವಿಜಾಪುರದಲ್ಲಿ ಇದ್ದಂಥದ್ದು. ಅಲ್ಲಿಗೆ ಹೋಗಲು ೭೫ ಪೈಸೆ ಬಸ್ ಚಾರ್ಜು. ಊರಿಗೆ ಬರುತ್ತಿದ್ದ ಸಂಯುಕ್ತ ಕರ್ನಾಟಕ, ಪ್ರಜಾಮತ ಹಾಗೂ ಮರಾಠಿ ಪತ್ರಿಕೆಗಳಿಂದಲೇ ಪಾಟೀಲರು ತಮ್ಮ ಜ್ಞಾನಾರ್ಜನೆಯ ಹಸಿವನ್ನು ಪೂರೈಸಿಕೊಳ್ಳಬೇಕಾಗುತ್ತಿತ್ತು. ಪಾಟೀಲರಿಗೆ ಅಪ್ಯಾಯಮಾನ ವೆನ್ನಿಸುವ ಪುಸ್ತಕಗಳು ಅವರಿಗೆ ದೊರೆಯುತ್ತಿರಲಿಲ್ಲ.

ಪಾಟೀಲರ ಸೃಜನಶೀಲ ಮನಸ್ಸು ನಾನಾ ಬಗೆಯಲ್ಲಿ ತೊಳಲಾಡುತ್ತಿದ್ದ ಸಂದರ್ಭದಲ್ಲಿ ದೆಹಲಿಯ ನ್ಯಾಶನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್ ಸಂಸ್ಥೆ ಚಿತ್ರಕಲಾ ಸ್ಪರ್ಧೆಗಳಿಗಾಗಿ ಕೃತಿಗಳನ್ನು ಆಹ್ವಾನಿಸಿದಾಗ ಇವರು ಎರಡು ಕೃತಿಗಳನ್ನು - ಒಂದನೆಯದು ಕರಿಅಂಚಿನ ಇಳಕಲ್ ಸೀರೆಯುಟ್ಟಿದ್ದ ತಮ್ಮ ತಂಗಿಯ ಭಾವಚಿತ್ರ - ½ ಇಂಪೀರಿಯಲ್ ಸೈಜಿನದು - "Artist's Sister" ಎಂಬ ಶೀರ್ಷಿಕೆ ಹಾಗೂ "My Life" ಎಂಬ ಸಂಯೋಜನೆಯನ್ನು ರಚಿಸಿದರು. ಆದರೆ ದೆಹಲಿಗೆ ಇವನ್ನು ಪಾರ್ಸಲ್ ಮಾಡಲು ೨೫ ರೂಪಾಯಿ ಅಗತ್ಯವಾಗಿತ್ತು. ಜೇಬು ಬರಿದಾಗಿದ್ದ ಪಾಟೀಲರು ದಿನನಿತ್ಯ ಒಡನಾಟ ಇರುವಂಥ ವರ್ತಕರಾದ ಸಿದ್ಧರಾಮಪ್ಪ ಇಂಚಗೇರಿಯವರ ಬಳಿಗೆ ಹೋಗಿ "ನಿಮ್ಮ ತಾಯಿ ತಂದೆಯವರ ಭಾವಚಿತ್ರಗಳನ್ನು ತಯಾರಿಸಿಕೊಡ್ತೀನಿ ಈ ಚಿತ್ರಗಳನ್ನು ದೆಹಲಿಗೆ ಕಳಿಸಲು ಸಾಲ ಕೊಡಿ" ಎಂದು ವಿನಂತಿಸಿಕೊಂಡು ಅವನ್ನು ಅಲ್ಲಿಗೆ ಕಳಿಸಿದಾಗ ಅವು ದೆಹಲಿಯಲ್ಲಿ ಪ್ರದರ್ಶನಗೊಂಡವು. ಗ್ಯಾಲರಿಯಿಂದ ಮೆಚ್ಚಿಗೆಯ ಪತ್ರ ಬಂದರೂ ಚಿತ್ರಗಳು ಮಾರಾಟವಾಗಲಿಲ್ಲ. ಕೃತಿಗಳು ಮಾತ್ರ ಮತ್ತೆ ಪಾರ್ಸಲ್ ಮೂಲಕವೇ ಇವರಿಗೆ ವಾಪಸ್ಸಾದವು.

ಕೆಲಸವಿಲ್ಲದ ಕೂಡಲಾಗದಿದ್ದ ಪಾಟೀಲರು ಅನಂತರ ಹಿಂದಿ ಭಾಷೆಯ ಮಾಸಪತ್ರಿಕೆಯೊಂದಕ್ಕೆ ಕೃತಿಯೊಂದನ್ನು ಕಳಿಸಿದಾಗ ಅದು ಮುಖಪುಟದಲ್ಲಿ ಪ್ರಕಟವಾಯಿತು. ಅದೊಂದು ಮಹಿಳೆಯ ಏಕರೇಖೆಯ ಚಿತ್ರ. ಅದರಲ್ಲಿ ಅಲಂಕರಣವಿತ್ತು. ಇವರ ಉನ್ನತಿಯನ್ನು ಎಂದೂ ಸಹಿಸದಿದ್ದ ಇವರ ಕಿರಿಯಣ್ಣ ಬ್ಲೂ ಪ್ರಿಂಟ್ ತೆಗೆಸಿದ್ದ ಚಿತ್ರವನ್ನು ಕಂಡು ಅದು ನಿಜವೋ ಸುಳ್ಳೋ ಎಂದು ಪರೀಕ್ಷಿಸಲು ಅದಕ್ಕೆ ಉಗುಳು ಹಚ್ಚಿ ನೋಡಿದ್ದ! ಚಿತ್ರದಲ್ಲಿ ಅಂಥದೊಂದು ನೈಜತೆಯಿತ್ತು.

ಆಗೆಲ್ಲ ಪೂನಾದಿಂದ 'ಸ್ವರಾಜ್ಯ' ಎಂಬ ಮರಾಠಿ ವಾರಪತ್ರಿಕೆ ಹೊರಡುತ್ತಿತ್ತು. ಜೋಶಿ ಎಂಬುವರು ಇದರ ಸಂಪಾದಕರು. ಮುಖಪುಟಕ್ಕಾಗಿ ನಡೆಸಲಾದ ಸ್ಪರ್ಧೆಯಲ್ಲಿ 'ಕೋಳಿನಿ' ಎಂಬ ಶೀರ್ಷಿಕೆಯ ಗುಡ್ಡಗಾಡು ಜನಾಂಗಕ್ಕೆ ಸಂಬಂಧಿಸಿದ ಬೆಸ್ತರನ್ನು ಕುರಿತು ಪಾಟೀಲರ ಕೃತಿಗೆ ಎರಡನೆಯ ಬಹುಮಾನ ಸಿಕ್ಕಿತು. ಸ್ಪರ್ಧೆಗಾಗಿ ಬಂದಿದ್ದ ೮೦೦ ಚಿತ್ರಗಳಲ್ಲಿ ಪಾಟೀಲರದ್ದು ದ್ವಿತೀಯ ಸ್ಥಾನಕ್ಕೆ ಆಯ್ಕೆಯಾಗಿತ್ತು.

ತಿಕೋಟಾದಲ್ಲಿ ಪಾಟೀಲರಿಗೆ ಸತತವಾಗಿ ಪ್ರೋತ್ಸಾಹ ಸಿಕ್ಕಿದ್ದೆಂದರೆ ಗ್ರಂಥಪಾಲಕರಾಗಿದ್ದ ಶ್ರೀಪತಿ

ಛತ್ರೆಮಠರಿಂದ. ಸುಶಿಕ್ಷಿತರಾಗಿದ್ದ ಅವರು ಸ್ವಯಂ ಗ್ರಂಥಪಾಲಕರ ಹುದ್ದೆಯನ್ನು ಕೈಗೊಂಡಿದ್ದರು. ಅಷ್ಟು ಹೊತ್ತಿಗಾಗಲೇ ಅವರಿಗೆ ೭೦ ವಯಸ್ಸು. ಒಮ್ಮೆ ಸ್ವರಾಜ್ಯ ವಾರಪತ್ರಿಕೆಯ ಮುಖಪುಟದಲ್ಲಿ ಪಾಟೀಲರು ರಚಿಸಿದ ಕೃತಿ ಮುದ್ರಣಗೊಂಡದ್ದನ್ನು ಕಂಡು ತೀರಾ ಭಾವುಕರಾದ ಅವರು ಪಾಟೀಲರ ತಂದೆಯವರ ಬಳಿಗೆ ಓಡೋಡಿ ಬಂದು "ಸ್ವರಾಜ್ಯದ" ಪ್ರತಿಯನ್ನು ತಂದೆಯ ಮುಂದೆ ಬಿಸಾಡಿ "ನಮ್ಮೂರಿನ ರತ್ನ ರಚಿಸಿದ ಕೃತಿ ಇದು. ಈ ವಾರಪತ್ರಿಕೆಯ ಲಕ್ಷಗಟ್ಟಲೆ ಪ್ರತಿಗಳು ಮುದ್ರಣಗೊಳ್ಳುತ್ತವೆ ಗೊತ್ತೇ?" ಎಂದರು. ಕ್ರಮೇಣ ತಂದೆಗೆ ಪಾಟೀಲರ ಪ್ರತಿಭೆಯ ಅರಿವಾದರೂ ಇವರ ಕಿರಿಯಣ್ಣ ಹಾಗೂ ಇವರ ಮಧ್ಯೆ ವಾದವಿವಾದಗಳು ಮುಂದುವರಿದೇ ಇದ್ದವು. "ಇವನು ಸುಮ್ನೆ ಕೂತು ತಿಂತಾನೆ" ಎನ್ನುವುದು, ಅಣ್ಣ ಇವರ ಮುಖಕಂಡಾಗಲೆಲ್ಲ ಆಡುತ್ತಿದ್ದ ಚುಚ್ಚು ಮಾತು. ಒಮ್ಮೆಯಂತೂ ಅಣ್ಣ ಹಾಗೂ ಪಾಟೀಲರ ಮಧ್ಯೆ ತೀವ್ರ ಕಿತ್ತಾಟವಾಗಿ ತಂದೆ ಇವರನ್ನು ತಾವೇ ಸಂಭಾಳಿಸಲು ಅಸಹಾಯಕರಾದರಂತೆ. ಪಾಟೀಲರ ಅಜ್ಜಿಯಿದ್ದ ದಂದರ್ಗಿಯಲ್ಲಿ 'ಪಂಚಾಯತಿ'ಯನ್ನೇ ಏರ್ಪಡಿಸಿಬಿಟ್ಟರು! ಮನಃಸ್ವಾಸ್ಥ್ಯವಿರದಿದ್ದ ಪಾಟೀಲರು ಐದು ಮೈಲಿ ದೂರ ನಡೆದೇ ದಂದರ್ಗಿಯನ್ನು ತಲಪಿದಾಗ ಮನೆಯ ಮುಂದಿನ ಕಟ್ಟೆಯಲ್ಲಿ ಇವರ ತಂದೆ, ಇಬ್ಬರು ಅಣ್ಣಂದಿರು ಹಾಗೂ ಊರಿನ ಹಿರಿಯರು ಕೂತಿದ್ದರು. ಕಂಬವನ್ನು ಒರಗಿನಿಂತ ಪಾಟೀಲರಿಗೆ ಹಿರಿಯರು ಕಿರಿಯಣ್ಣನ ಕ್ಷಮಾಪಣೆ ಕೇಳು ಎಂದು ಆದೇಶಿಸಿದಾಗ, ಮತ್ತಷ್ಟು ಸೆಟೆದುಕೊಂಡ ಪಾಟೀಲರು "ನಾನು ಎಂದಾದರೂ ಯಾರಿಗಾದರೂ ಕಾಲು ಹಿಡಿದವನೇ ಆದರೆ ಅದು ಹಿರಿಯಣ್ಣನ ಕಾಲನ್ನು ಮಾತ್ರ!" ಎಂದವರೇ ಅತನ ಕಾಲನ್ನು ಗಪ್ಪನೆ ಹಿಡಿದೇ ಬಿಟ್ಟರು!

ಹಿರಿಯಣ್ಣನಿಗೆ ಪಾಟೀಲರ ಬಗ್ಗೆ ಎಂದಿಗೂ ಅಭಿಮಾನ ಇದ್ದದ್ದೇ. "ನಿನ್ನ ಸ್ವಭಾವದಲ್ಲಿ ಸಹನಶೀಲತೆ ಬೆಳೆಸಿಕೊಳ್ಳಬೇಕು. ಸಿಟ್ಟನ್ನು ಬಿಡು. ಈ ಊರನ್ನೇ ಬಿಟ್ಟು ನಿನ್ನ ಉದ್ಯೋಗದ ದಾರಿಯನ್ನು ಕಂಡುಕೋ" ಎಂದು ಕಣ್ಣೀರು ತುಂಬಿ ಉಪದೇಶಿಸಿ ತಮ್ಮನನ್ನು ಬೀಳ್ಕೊಟ್ಟನು.

ವಿಜಾಪುರದ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆಯಲ್ಲಿ ಡ್ರಾಯಿಂಗ್ ಶಿಕ್ಷಕರ ಹುದ್ದೆ ತೆರವಾದಾಗ ಅದನ್ನು ದೊರಕಿಸಿ ಕೊಳ್ಳುವ ಸಲುವಾಗಿ ಪಾಟೀಲರು ಊರಿನ ಪ್ರಮುಖ ರಾಜಕಾರಣಿಗಳಾಗಿದ್ದ ಬಿ.ಎಂ. ಪಾಟೀಲರನ್ನು ಭೇಟಿಯಾಗಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. "ನಂಗೆ ಧಾರವಾಡಕ್ಕೆ ಹೋಗೋಕ್ಕೆ ಅವಕಾಶ ಮಾಡಿಕೊಡಿ. ಮೂವತ್ತು ರೂಪಾಯಿ ಕೊಡಿ" ಎಂದು ತಂದೆಯನ್ನು ವಿನಂತಿಸಿಕೊಂಡಿದ್ದರು. ಅಲ್ಲಿನ ಶಿಕ್ಷಣ ಇಲಾಖೆಯ ಮುಖ್ಯಸ್ಥರು ಪಾಟೀಲರ ಸರ್ಟಿಫಿಕೇಟುಗಳು, ವೃತ್ತ ಪತ್ರಿಕೆಗಳ ಕಟ್ಟಿಂಗ್‌ಗಳನ್ನು ನೋಡಿದವರೇ "ಅಲ್ಲೋ, ನಿನ್ನಂಥ ಪ್ರತಿಭಾವಂತ ಕಲಾವಿದ ಇಂಥ ಸಾಮಾನ್ಯ ಡ್ರಾಯಿಂಗ್ ಟೀಚರ್ ಹುದ್ದೆಗೆ ಸೇರ್ತಿಯೇನು? ಬೇಡ ಹೋಗು!" ಎಂದರು. ಹೀಗೆಯೇ ಇನ್ನೊಮ್ಮೆ ವೆಟರ್ನರಿ ಕಾಂಪೌಂಡರ್ ಕೆಲಸಕ್ಕೂ ಇವರಿಗೆ ಆರ್ಡರ್ ಬಂತು "ಚಿತ್ರಕಲೆ ಅಭ್ಯಸಿಸಿ ಈ ಉದ್ಯೋಗವನ್ನೇನು ಮಾಡುತ್ತೀಯಾ ಮಣ್ಣು" ಎಂದವರೇ ಇವರ ಹಿರಿಯಣ್ಣ ಅದನ್ನು ಹರಿದುಬಿಸಾಡಿದರು.

ಬದುಕಿಗೊಂದು ತಿರುವು

ಧಾರವಾಡದ ಶಿಕ್ಷಣ ಇಲಾಖೆಯಲ್ಲಿ ಎಂ.ಬಿ. ಪಾಟೀಲರನ್ನು ಡ್ರಾಯಿಂಗ್ ಟೀಚರನ್ನಾಗಿ ನೇಮಿಸಿಕೊಳ್ಳಲು ಅಲ್ಲಿನ ಅಧಿಕಾರಿಗಳು ತೋರಿದ ನಿರಾಕರಣೆ ಪ್ರಾಯಶಃ ಪಾಟೀರ ಬದುಕಿಗೇ ಒಂದು ಮಹತ್ವದ ತಿರುವು. ಪಾಟೀಲರೇನಾದರೂ ಆ ಹುದ್ದೆಯನ್ನು ಹಿಡಿದಿದ್ದರೆ ಅವರ ಕಲಾಜೀವನ ಆ ಶಾಲೆಗೇ ಸೀಮಿತವಾಗುತ್ತಿತ್ತು. ಆದರೆ ಇವರ ಅರ್ಹತೆಯನ್ನು ತುಲನಾತ್ಮಕವಾಗಿ ಪರಿಶೀಲಿಸಿದ್ದ ಮುಖ್ಯಸ್ಥರು ಆಗಲೇ

ಇವರ ಸಾಮರ್ಥ್ಯ ಪಡೆದುಕೊಳ್ಳಬೇಕಾದ ಆಯಾಮ ಮತ್ಯಾವ ಎತ್ತರದಲ್ಲೋ ಇದೆ ಎಂಬುದನ್ನು ಕಂಡುಕೊಂಡಿದ್ದರು.

ಪಾಟೀಲರು ಹುಬ್ಬಳಿಗೆ ಹೊರಟರು, ಉದ್ಯೋಗವನ್ನು ಅರಸುತ್ತಾ. ಅಲ್ಲಿನ ಸ್ಟುಡಿಯೋವೊಂದರಲ್ಲಿ ಅವರಿಗೆ ಕಂಡದ್ದು ಕಲಾವಿದ ಎ.ಎ. ಅಲ್ಮೇಲ್‌ಕರ್ ಅವರ ಭಾವಚಿತ್ರ. ಅಲ್ಮೇಲ್‌ಕರ್ ಡೆಕೊರೆಟಿವ್ ಪೈಂಟರ್. ಬಾಲಿ, ಸುಮಾತ್ರಾ, ಸಿಂಗಪೂರ್‌ಗೆ ಹೋಗಿ ಬಂದಿದ್ದರು. ದಂಡಾವತಿಮಠರ ಶಿಷ್ಯರು. ವಿಜಾಪುರ ಜಿಲ್ಲೆಯವರಾದರೂ ಬೆಳೆದದ್ದು ಸೊಲ್ಲಾಪುರದಲ್ಲಿ. ಮೂರನೆಯ ಕ್ಲಾಸ್‌ವರೆಗೆ ಮಾತ್ರ ಓದಿದ್ದರೂ ಕಲೆಯ ವಿಷಯದಲ್ಲಿ ಮೇಲ್ಪಂಕ್ತಿಯಲ್ಲಿದ್ದ ಅಲ್ಮೇಲ್‌ಕರ್ ಅಹಮದಾಬಾದ್‌ನ ಎಚ್.ಎಲ್. ಕ್ಷತ್ರಿಯರ ಸ್ಟುಡಿಯೋದಲ್ಲಿ ಕೆಲಸ ಮಾಡುತ್ತಿದ್ದರು. ಪಾಟೀಲರು "ಭಾರತಿ ಸ್ಟುಡಿಯೋ" ಪ್ರವೇಶಿಸಿದಾಗ ಇವರನ್ನು ಬರಮಾಡಿಕೊಂಡ ನಾಲ್ವರು ಸೋದರರು - ಕಾಶೀನಾಥ ಕ್ಷತ್ರಿ, ಧನುಕ್ಷತ್ರಿ, ಪಕ್ಕೂಸಾ ಕ್ಷತ್ರಿ ಹಾಗೂ ಸುಭಾಷ್ ಕ್ಷತ್ರಿ - ಅಲ್ಮೇಲ್‌ಕರ್ ಅವರು ಹುಬ್ಬಳ್ಳಿಗೆ ಬಂದಾಗಲೆಲ್ಲ ತಮ್ಮ ಸ್ಟುಡಿಯೋದಲ್ಲಿ ತಿಂಗಳಾನುಗಟ್ಟಲೆ ಉಳಿದುಕೊಳ್ಳುತ್ತಾರೆಂದೂ ತಾವು ಎಚ್.ಎಲ್. ಕ್ಷತ್ರಿಯವರ ಸಂಬಂಧಿಕರೆಂದೂ ತಿಳಿಸಿದರು. ಅಷ್ಟೇ ಅಲ್ಲ ಪಾಟೀಲರಿಗೆ ಛಾಯಾಚಿತ್ರಗಳಿಗೆ "ಕಲರಿಂಗ್" ಮಾಡುವ ಕೆಲಸವನ್ನು ನೀಡಿ ಇವರ ಊಟ ತಿಂಡಿ ಖರ್ಚನ್ನು ಪೂರೈಸಲು ಸಿದ್ಧರಾದರು. ಈ ಸಂದರ್ಭದಲ್ಲೇ ಪಾಟೀಲರು ಮೊಟ್ಟಮೊದಲ ಬಾರಿಗೆ ಹುಬ್ಬಳ್ಳಿಯಲ್ಲಿ ಕಲಾ ಪ್ರದರ್ಶನವೊಂದನ್ನು ನಡೆಸಿದರು.

ಹುಬ್ಬಳ್ಳಿಯ ವೈದ್ಯಕೀಯ ಕಾಲೇಜು ಕಲಾವಿದರ ಹುದ್ದೆಗೆ ಅರ್ಜಿಗಳನ್ನು ಕರೆದಿದೆ ಎಂದು ತಿಳಿದರೂ ಪಾಟೀಲರು ಎಂದೂ ವ್ಯವಹಾರದಲ್ಲಿ ಹಿಂದುಳಿದವರೇ. ಉದ್ಯೋಗಾಕಾಂಕ್ಷಿಗಳು ಉದ್ಯೋಗ ವಿನಿಮಯ ಕೇಂದ್ರದಲ್ಲಿ ತಮ್ಮ ಹೆಸರನ್ನು ದಾಖಲು ಮಾಡಿಸಿರಬೇಕು ಎಂಬುದೂ ಅವರಿಗೆ ತಿಳಿದಿರಲಿಲ್ಲ ಅಲ್ಲಿನ ಮುಖ್ಯಸ್ಥ ಡಾ. ಪಾರ್ಥಸಾರಥಿ ಹಾಗೂ ಕಾಲೇಜಿನ ಡೀನ್ ಧರ್ಮರಾಜ್ ಪಾಟೀಲರ ಪ್ರತಿಭೆಯನ್ನು ಗುರುತಿಸಿದರೂ ಉದ್ಯೋಗ ವಿನಿಮಯ ಕೇಂದ್ರದ್ಲಲಿ ಹೆಸರನ್ನು ದಾಖಲು ಮಾಡಿಸಿದ್ದ ಬೇರೊಬ್ಬನಿಗೆ ಆ ಹುದ್ದೆಯನ್ನು ಕೊಡಲೇಬೇಕಾದ ಪ್ರಮೇಯವಿತ್ತು. ಡೀನ್‌ರು "ಪಾಟೀಲ್, ನಿನಗಾಗಿ ನಾನು ಮತ್ತೊಂದು ಹುದ್ದೆಯನ್ನು ಸೃಷ್ಟಿಸುವಂತೆ ಸಂಬಂಧಪಟ್ಟವರಿಗೆ ಹೇಳುತ್ತೇನೆ" ಎಂದು ಆಶ್ವಾಸನೆ ನೀಡಿದರೂ ಅಷ್ಟು ಹೊತ್ತಿಗಾಗಲೇ ರಾಜ್ಯದ ವಾರ್ತಾ ಮತ್ತು ಪ್ರಸಾರ ಇಲಾಖೆ ಕಲಾವಿದನ ಹುದ್ದೆಗೆ ಅರ್ಜಿಯನ್ನು ಕರೆದಾಗ ಪಾಟೀಲರು ಅರ್ಜಿಯನ್ನು ಹಾಕಿಕೊಂಡರು. ಪಾಟೀಲರದ್ದು ಆಗ ಹುಬಳ್ಳಿಯ ಕೋಣೆಯೊಂದರಲ್ಲಿ ವಾಸ. ಸಂದರ್ಶನಕ್ಕೆ ಹಾಜರಾಗಲು ಸರಿಯಾದ ಉಡುಪು ಇಲ್ಲ. ಪಕ್ಕದ ಕೋಣೆಯಲ್ಲಿದ್ದ ಮಿಲಿಟರಿ ಯುವಕನನ್ನು ವಿನಂತಿಸಿಕೊಂಡು ಅವನಿಂದ ಶಾರ್ಕ್‌ಸ್ಕಿನ್ ಪ್ಯಾಂಟನ್ನು ಪಡೆದು ಅದನ್ನು ಧರಿಸಿ ಮೇಲೊಂದು ನಿಲುವಂಗಿ ತೂರಿಸಿಕೊಂಡು ಹೊರಟ ಪಾಟೀಲರು ದಾರಿಯಲ್ಲಿನ ಕಾಟನ್ ಮಾರ್ಕೆಟ್ ನಲ್ಲಿದ್ದ ಹನುಮಂತ ದೇವರ ಗುಡಿಗೆ ಮೊದಲ ಬಾರಿಗೆ ಅಡ್ಡಬಿದ್ದು "ಇದು ನನ್ನ ಸತ್ವ ಪರೀಕ್ಷೆ ದೇವರೇ, ನಿನಗಿಷ್ಟ ಬಂದಂತೆ ನನ್ನನ್ನು ನಡೆಸಿಕೋ" ಎಂದು ಬೇಡಿದ್ದರು.

ಕಲಾವಿದನ ಒಂದು ಹುದ್ದೆಗೆ ಬಂದಿದ್ದ ಅರ್ಜಿಗಳು ಐದು. ಮಿಕ್ಕೆಲ್ಲ ಅಭ್ಯರ್ಥಿಗಳಿಗಿಂತಲೂ ಪಾಟೀಲರು ಪ್ರತಿಭೆಯ ದೃಷ್ಟಿಯಿಂದ ಮೇಲು. ಸಂದರ್ಶನವನ್ನು ನಡೆಸಿದ ಅಧಿಕಾರಿಗಳು ಇವರ ಕಲೆಯನ್ನು ತಟ್ಟನೆ ಗುರುತಿಸಿದವರೇ "ನಾಳೆ ಬಂದು ಕೆಲಸಕ್ಕೆ ಸೇರಿಕೋ" ಎಂದೇ ಬಿಟ್ಟರು.

ಪಾಟೀಲರಿಗೆ ಇದು ಅತ್ಯಂತ ಅನಿರೀಕ್ಷಿತ ಪ್ರಸಂಗ. ತಮ್ಮ ಸಂತಸವನ್ನು ಮತ್ತೊಬ್ಬರೊಂದಿಗೆ ಕೂಡಲೇ ಹಂಚಿಕೊಳ್ಳ ಬೇಕೆನ್ನಿಸಿದಾಗ ಇವರಿಗೆ ನೆನಪಾದವರು ಬದುಕಿನುದ್ದಕ್ಕೂ ತಮ್ಮನ್ನು ಪ್ರೋತ್ಸಾಹಿಸುತ್ತಲೇ ಇದ್ದ ತಮ್ಮ ಹಿರಿಯಣ್ಣ. ಪಾಟೀಲರು ಕೂಡಲೇ ಸಂತಸದ ಸುದ್ದಿಯನ್ನು ತಂತಿಯ ಮೂಲಕ ಅಣ್ಣನಿಗೆ ರವಾನಿಸಿದರು. ಅಂದು ತಿಕೋಟಾದಲ್ಲಿ ಸಂತೆಯ ದಿನ. ಪಾಟೀಲರ ಅಣ್ಣನಿಗೋ ಬಿಡುವಿಲ್ಲ. ಪಾಟೀಲರ ಮನೆತನದಲ್ಲೇ ಸರ್ಕಾರಿ ಕೆಲಸಕ್ಕೆ ಸೇರಿದವರಲ್ಲಿ ಇವರೇ ಮೊದಲಿಗರು. ಪಾಟೀಲರ ತಂದೆ ಹಾಗೂ ತಾಯಿ ಅಂದು ಯಾವುದೋ ಕೆಲಸದ ಮೇಲೆ ದಂದರ್ಗಿಯಲ್ಲಿದ್ದರು. ಪರಿಚಯದವನ ಮೂಲಕ ಪಾಟೀಲರ ಹಿರಿಯಣ್ಣ ದಂದರ್ಗಿಯಲ್ಲಿದ್ದ ತಂದೆಗೆ ಸೋದರ ಕಳಿಸಿದ್ದ ತಂತಿಯನ್ನು ಕಳಿಸಿದಾಗ ಸರಿ ರಾತ್ರಿ. "ಮಲ್ಲಿಕಾರ್ಜುನನಿಂದ ತಾರು ಬಂದೈತೆ" ಅಂತ ಅವನು ತಂದೆಗೆ ಹೇಳಿದ ಕೂಡಲೆ ಯಾವ ಕೆಟ್ಟಸುದ್ದಿ ತಮಗಾಗಿ ಕಾದಿದೆಯೋ ಎಂದು ನಡುಗಿದ ತಂದೆ "ಏನಾಯ್ತೋ, ಮಲ್ಲಿಕಾರ್ಜುನ ಹುಷಾರಾಗಿದಾನೋ ಇಲ್ವೋ. ತಂತೀಲಿ ಏನು ಬರೆದೈತೆ ಅದನ್ನಾದ್ರು ಹೇಳೋ" ಎಂದು ಬಡಬಡಿಸಿ ತಾರನ್ನು ಓದುತ್ತಲೇ ಹೆಂಡತಿಯ ಬಳಿಗೆ ಓಡಿದರು. ಪಾಟೀಲರ ತಾಯಿ ಎಂದಿಗೂ ಮಗನ ಅಭ್ಯುದಯಕ್ಕಾಗಿ ಹತ್ತಾರು ದೇವರುಗಳಿಗೆ ಹರಕೆಯನ್ನು ಹೊತ್ತಿದ್ದಾಕೆ. ಪಾಟೀಲರನ್ನು ಅನಂತರ ಭೇಟಿಯಾದಾಗಲೆಲ್ಲ ಅವರ ತಂದೆ; "ಏನೋ, ನಿನ್ನ ಇಡೀ ಪಗಾರಾನೇ ನಿಮ್ಮಮ್ಮನಿಗೆ ಕೊಟ್ಟರೂ ಸೈತ ಅವಳ ಹರಕೆಗೆ ಬೇಕಾದ ಕಾಯಿಯ ಖರ್ಚು ತುಂಬೋದಿಲ್ಲ" ಎಂದು ಹಾಸ್ಯ ಮಾಡುತ್ತಿದ್ದುದುಂಟು.

ಹುಬ್ಬಳ್ಳಿಯಲ್ಲಿ ಸ್ವಂತ ಸಂಪಾದನೆಗೆ ವ್ಯವಸ್ಥೆಯಾದ ಕೂಡಲೇ ಪಾಟೀಲರು ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುವುದು ಸಾಧ್ಯವಾಯಿತು. ಅವರು ಮತ್ತಷ್ಟು ಎತ್ತರಕ್ಕೆ ಬೆಳೆಯುವ ಅವಕಾಶ ದೊರೆಯಿತು.

ವಿವಾಹಕ್ಕೆ ಪ್ರವೇಶ

ಎಂ.ಬಿ. ಪಾಟೀಲರು ವಾರ್ತಾ ಇಲಾಖೆಯಲ್ಲಿ ಉದ್ಯೋಗಕ್ಕೆ ಸೇರಿದ ಒಂದು ತಿಂಗಳಿಗೇ - ನವೆಂಬರ್ ೧೯, ೧೯೬೫ರಂದು ಇವರ ವಿವಾಹ ಸೌದತ್ತಿ ತಾಲ್ಲೂಕಿನ ಉಗರಗೋಳದಲ್ಲಿನ ಅರ್ಚಕರ ಮಗಳು ಕಸ್ತೂರಿಯೊಂದಿಗೆ. ಪಾಟೀಲರು ಮುಂಬೈನಲ್ಲಿ ಕಲಿಯುತ್ತಿದ್ದಾಗಲೇ ಕಸ್ತೂರಿಯ ತಂದೆ ತಾಯಿ ವಿವಾಹದ ಬಗ್ಗೆ ಪ್ರಸ್ತಾಪ ಮಾಡಿ ಮಾತುಕತೆ ಮಾಡಿಕೊಂಡಿದ್ದರು. ಪಾಟೀಲರಿಗೆ ನೌಕರಿ ಸಿಗುವ ಹೊತ್ತಿಗಾಗಲೇ ಮಾವ ತೀರಿಕೊಂಡಿದ್ದರು. ಅವರ ನಾಲ್ಕು ಹೆಣ್ಣು ಮಕ್ಕಳ ಪೈಕಿ ಕಸ್ತೂರಿ ಮೂರನೆಯ ಮಗಳು. ಮಾವನವರಿಗೆ ಕಲೆಯ ಬಗ್ಗೆ ಗೌರವವಿತ್ತು. ಭಾವೀ ಅಳಿಯನ ಸ್ವಾಭಿಮಾನವನ್ನೂ ಅಲ್ಪಕಾಲದಲ್ಲೇ ಪರಿಚಯಿಸಿಕೊಂಡಿದ್ದ ಪರೋಕ್ಷವಾಗಿಯೇ ಅಳಿಯನ ಉನ್ನತ ಶಿಕ್ಷಣಕ್ಕೂ ನೆರವು ನೀಡುತ್ತೇನೆಂದೂ ಹೇಳಿದ್ದರು. ಧಾರವಾಡದಲ್ಲಿದ್ದಾಗ ಸೌದತ್ತಿಗೆ ಭೇಟಿ ನೀಡಿದ್ದ ಪಾಟೀಲರು ಆ ಮೊದಲೇ ಕನ್ಯೆಯನ್ನು ನೋಡಿದ್ದರು.

ಪಾಟೀಲರಿಗೆ ಉದ್ಯೋಗ ದೊರೆಯುತ್ತಿದ್ದಂತೆಯೇ ಅವರ ವಿವಾಹಕ್ಕೆ ಏರ್ಪಾಟಾದಾಗ ಎಂದಿನಂತೆಯೇ ಪಾಟೀಲರ ಕೈಲಿ ಕಾಸಿಲ್ಲ. ಪಾಟೀಲರು ವರದಕ್ಷಿಣೆಗೆ ವಿರುದ್ಧವಾಗಿದ್ದರು. ತಂದೆ ಹಾಗೂ ಹಿರಿಯಣ್ಣ ಇವರು ಬಟ್ಟೆಬರೆಗೆಂದು ಕಳಿಸಿದ್ದ ೫೦೦ ರೂಪಾಯಿನಲ್ಲಿ ಒಂದು ಟೆರಿಕಾಟ್ ಪ್ಯಾಂಟ್ ಹಾಗೂ ಉಣ್ಣೆಯ ಕೋಟನ್ನು ಕೊಂಡು ಪಾಟೀಲರು ವರನಾಗಿ ಸಜ್ಜುಗೊಂಡರು. ತಿಕೋಟಾದ ಹೊರವಲಯದಲ್ಲಿ, ಊರಿನಿಂದ ೪ ಕಿ.ಮೀ. ದೂರದದಲ್ಲಿ ಇವರ ವಿವಾಹ. ಅಡವಿಯ ಮಧ್ಯದಲ್ಲಿ ದೇಗುಲವಿತ್ತು. ವಿವಾಹ ಸಮಾರಂಭಕ್ಕಾಗಿ ಲಿಂಗವನ್ನು ಸ್ವಚ್ಛ ಮಾಡಿ ಅವರಣದಲ್ಲಿ ಬಿದ್ದಿದ್ದ ಪಾರಿವಾಳಗಳ ಹಿಕ್ಕೆಗಳನ್ನು ತೆಗೆದು, ಮದುಮಗ ಹಾಗೂ ಅವನ ಪರಿವಾರದವರು ಅಲ್ಲಿಗೆ ಚಕ್ಕಡಿಯಲ್ಲಿ ಪ್ರಯಾಣ. ಕಸ್ತೂರಿಗೆ ೧೮ ವಯಸ್ಸು,

ಪಾಟೀಲರಿಗೆ ೨೫. ಅದೂ ಇದೂ ದೇವರ ಕಾರ್ಯಕ್ಕೆಂದು ಒಂದು ತಿಂಗಳು ತೌರಿನಲ್ಲಿದ್ದ ಕಸ್ತೂರಿಯೊಂದಿಗೆ ಪಾಟೀಲರು ಸಂಸಾರ ಹೂಡಿದ್ದು ಹುಬ್ಬಳ್ಳಿಯಲ್ಲಿ - ೧೨ ರೂಪಾಯಿ ಬಾಡಿಗೆ ಮನೆಯಲ್ಲಿ. ಅಗ ಅವರಿಗೆ ಸಿಗುತ್ತಿದ್ದ ವೇತನ ೨೦೦ ರೂಪಾಯಿ. ತಂದೆಯ ಹಾಗೂ ಮಾವನ ಮನೆಗಳೆರಡೂ ತೀರಾ ಹತ್ತಿರದಲ್ಲೇ ಇದ್ದರೂ ಪಾಟೀಲ ಅವರಿಂದ ಯಾವ ನೆರವನ್ನೂ ಪಡೆದುಕೊಳ್ಳದೆ ಸಂಸಾರವನ್ನು ನಿಭಾಯಿಸಲು ಯತ್ನಿಸಿದರು. ಎರಡು ಹೊತ್ತಿನ ಊಟಬಿಟ್ಟು ಮತ್ಯಾವ ಆಡಂಬರವೂ ಇರದಿದ್ದರೂ, ಸುತ್ತಲಿನ ಶ್ರೀಮಂತರೊಂದಿಗೆ ತಮ್ಮನ್ನು ಹೋಲಿಸಿಕೊಂಡು ಕೀಳರಿಮೆಯಿಂದ ನರಳುವಂಥ ಜಾಯಮಾನವನ್ನು ಎಂದೂ ಬೆಳೆಸಿಕೊಳ್ಳದಿದ್ದ ಪಾಟೀಲ ದಂಪತಿಗಳು ಪರಸ್ಪರ ವಿಶ್ವಾಸದಿಂದ ಸುರಕ್ಷಿತ ಬದುಕನ್ನು ಅನುಭವಿಸಿದರು. ಪರಸ್ಪರರ ಪ್ರೀತಿಗೆ ಪ್ರತೀಕವಾಗಿ ಐವರು ಮಕ್ಕಳು ಕಲಾವತಿ, ಮೀನಾಕ್ಷಿ, ಅನಿಲ್ ಕುಮಾರ್, ಜಗದೀಶ್ ಹಾಗೂ ವಾಣಿ - ಪಾಟೀಲ ದಂಪತಿಗಳ ಮನೆ ಮನಗಳನ್ನು ತುಂಬಿದರು. (ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ವಸ್ತುಪ್ರದರ್ಶನವೊಂದರ ಏರ್ಪಾಟಾಗಿ ರಾಯಚೂರಿಗೆ ತೆರಳಿದ್ದ ಎಂ.ಬಿ. ಪಾಟೀಲರು ಅಲ್ಲಿನ "ರಾಯಚೂರು ವಾಣಿ" ಪತ್ರಿಕೆಯನ್ನು ಮೆಚ್ಚಿ ಆಗ ತಾನೇ ಜನಿಸಿದ್ದ ತಮ್ಮ ಕೊನೆಯ ಮಗಳಿಗೆ "ವಾಣಿ" ಎಂದೇ ನಾಮಕರಣ ಮಾಡಿದ್ದರು.)

ಕಲಾ ಪ್ರದರ್ಶನಗಳು

ಯಾವುದೇ ಸರ್ಕಾರಿ ಇಲಾಖೆಯಲ್ಲಾಗಲೀ ಸೃಜನಶೀಲತೆಗೆ ತೀರಾ ಸೀಮಿತ ಅವಕಾಶ ಎಂಬುದು ಎಲ್ಲರಿಗೂ ತಿಳಿದದ್ದೇ. ಎಂ.ಬಿ. ಪಾಟೀಲ ಉದ್ಯೋಗದಲ್ಲಿದ್ದ ವಾರ್ತಾ ಮತ್ತು ಪ್ರಸಾರ ಇಲಾಖೆಯಲ್ಲಿ ಇಂಥ ಪರಿಸ್ಥಿತಿಯೇ. ಆದರೆ ಕಲಾತ್ಮಕತೆ ರಕ್ತಗತವಾಗಿದ್ದ ಪಾಟೀಲರು ಸರ್ಕಾರಿ ಉದ್ಯೋಗಿಯಾಗಿದ್ದರೂ ತಮ್ಮ ಸ್ವಂತಿಕೆಯನ್ನು ಬಿಟ್ಟುಕೊಡಲಿಲ್ಲ. ಇಲಾಖೆಯಲ್ಲಿ ನಾನಾ ಕರ್ತವ್ಯಗಳನ್ನು ಪೂರೈಸಬೇಕಾದಾಗಲೂ ಸಹ ವಿನೂತನ ಮಾಧ್ಯಮಗಳ ಮೂಲಕ ಪ್ರಸಾರಕ್ಕೆ ಅನುಕೂಲವಾಗುವಂತಹ ವಸ್ತುಗಳನ್ನು ಇಟ್ಟುಕೊಂಡು ಕೃತಿಗಳನ್ನು ರಚಿಸಿದರು. ಇದರಿಂದಾಗಿ ಪಾಟೀಲರು ಆದರ ಗೌರವಗಳನ್ನು ಗಳಿಸಿದರಲ್ಲದೆ, ಅವರ ಕಲಾ ಪ್ರದರ್ಶನಗಳು, ಕಲಾ ಚಟುವಟಿಕೆಗಳು ಅವರಿಗೆ ಜನತೆಯಿಂದ ಅಪಾರ ಮೆಚ್ಚುಗೆಯನ್ನು ಗಳಿಸಿಕೊಟ್ಟವು.

ಪಾಟೀಲರದ್ದು ಅವರದ್ದೇ ಆದ ವೈಯಕ್ತಿಕ ಶೈಲಿ. ಮಾನವ ಆಕೃತಿಗಳಲ್ಲಿ ಇವರಿಗೆ ವಿಶೇಷ ಆಸಕ್ತಿ. ಇವರು ರೇಖೆಗಳ ಮೂಲಕ ಅಲಂಕರಣಯುಕ್ತವಾಗಿ ಸಂದರ್ಭಕ್ಕೆ ಅನುಸಾರವಾಗಿ ಚಿತ್ರಗಳನ್ನು ರಚಿಸಬಲ್ಲವರು. ಪಾಟೀಲರು ವಿವಿಧ ಮಾಧ್ಯಮಗಳಲ್ಲಿ ಕೆಲಸ ಮಾಡಿದವರು. ತೈಲ ವರ್ಣಬಳಕೆಯಲ್ಲಿ ಇವರಿಗೆ ವಿಶೇಷ ಆಸಕ್ತಿಯಿದ್ದರೂ, "ಬರ್ನಿಂಗ್ ಟೆಕ್ನಿಕ್" ಹಾಗೂ "ಕೊಲೇಜ್"ಗಳು ಇವರನ್ನು ವಿಶೇಷವಾಗಿ ಆಕರ್ಷಿಸಿರುವುದು. ಪಣಿಕ್ಕರ್, ಎಂ.ಎಫ್. ಹುಸೇನ್, ರಝಾ, ಎನ್.ಎಸ್. ಬೇಂದ್ರೆಯವರ ಕಲೆಗಳ ದಿಟ್ಟತನವನ್ನು ಮೆಚ್ಚಿಕೊಂಡು ಅವರ ವರ್ಣಸಂಯೋಜನೆಗೆ ಮಾರು ಹೋಗಿರುವ ಪಾಟೀಲರು, ಕರ್ನಾಟಕದ ಹೆಸರಾಂತ ಕಲಾವಿದರಾದ ಆರ್.ಎಂ. ಹಡಪದ, ರಾಮ ಕೆವೆಟಿ, ಇವರುಗಳಂತೆಯೇ "ಪ್ಲೇಟ್ ಮೇಲೆ ಹೀಟರ್‌ನಿಂದ ಬರ್ನ್ ಮಾಡಿ" "ಫ್ಲಾಟ್ ಲೈನ್ಸ್, ಕರ್ವ್ ಲೈನ್ಸ್ ಮತ್ತು ಬ್ರೇಕಿಂಗ್ ಲೈನ್ಸ್" ಮೂಲಕ ಚಮತ್ಕಾರವನ್ನು ತೋರುತ್ತಾರೆ. ೧೬ ಅಡಿ ಎತ್ತರದ "ಬರ್ನಿಂಗ್" ಕೃತಿಗಳು ಸಿದ್ಧವಾಗಿವೆ.

ರದ್ದಿ ಪೇಪರ್, ಬಣ್ಣ ಬಣ್ಣದ ಹಾಳೆಗಳು, ರ್‍ಯಾಪರ್‌ಗಳು, ಹರಿದ ಕ್ಯಾಲೆಂಡರ್ ಇವೇ ಪಾಟೀಲರ "ಕೊಲೇಜ್"ಗಳ ಸಾಮಗ್ರಿ. ಇವನ್ನು ಒಪ್ಪವಾಗಿ ಕತ್ತರಿಸಿ ಹಲವಾರು ಪರಿಣಾಮಕಾರಿ ಕೃತಿಗಳನ್ನು ನೀಡಿರುವ ಪಾಟೀಲ್ "ಕೊಲೇಜ್"ನ್ನು ವಿವರಿಸುತ್ತಾ "ಇಲ್ಲಿ ಬಣ್ಣಗಳ ಸಂಯೋಜನೆ, ವಿಷಯಗಳ ಆಯ್ಕೆ ಪ್ರಮುಖ

ಪಾತ್ರ ವಹಿಸುತ್ತವೆ. ಹಳೆಯ ವಸ್ತುಗಳನ್ನು ಖಚಿತವಾಗಿ ಒಪ್ಪವಾಗಿ ಕತ್ತರಿಸಿ, ಚಿತ್ರಕಲೆಯ ಕುಶಲತೆಯೊಂದಿಗೆ ಅವನ್ನು ರಚಿಸಬೇಕು" ಎನ್ನುತ್ತಾರೆ. ಇವರ "ಕೊಲೇಜ್" ಬಗ್ಗೆ ವಿಮರ್ಶಕರೊಬ್ಬರು ನೀಡಿರುವ ವಿವರಣೆಯಿದು: "ಯಾವುದೋ ಚಿತ್ರದ ಕಣ್ಣು ಮತ್ಯಾವುದೋ ಚಿತ್ರದ ಕೈ ಮತ್ಯಾವುದೋ ಕ್ಯಾಲೆಂಡರಿನ ಮುಂಡ, ರದ್ದಿ ಕಾಗದದ ಮುಂಡ ಸೇರಿ ಒಂದು ಮೂರ್ತಿಯಾಗಿ ಕಲಾವಿದನ ಭಾವನೆಗೆ ಉಸಿರಿತ್ತು ವಸ್ತುವಿನ ಲೈಕ್‌ನೆಸ್ ಒಳಗೊಂಡು ಚಿತ್ರಕೃತಿಯಾಗುತ್ತವೆ. ಅವರದ್ದೇ ಪೋರ್ಟ್‌ರೇಟಂತೂ ಇಲ್ಲಿ ಅದ್ಭುತವೆನ್ನಿಸುತ್ತದೆ". ಪಾಟೀಲರು ಬಳಸಿಕೊಂಡಿರುವ ಮತ್ತೊಂದು ಮಾಧ್ಯಮ "ಮ್ಯೂರಲ್"ಗಳು. ಗೋಡೆ, ಕಟ್ಟಡ, ಫಲಕಗಳ ಮೇಲೆ ವರ್ಣ ಸಂಯೋಜನೆಗಳು. ೧೦ ಅಡಿಯಿಂದ ೪೧ ಅಡಿಯವರೆಗಿನ "ಮ್ಯೂರಲ್‌ಗಳನ್ನು" ಸೃಷ್ಟಿಸಿದ್ದಾರೆ. ಕಲ್ಬುರ್ಗಿಯ ಪ್ರಾಚ್ಯ ವಸ್ತು ಇಲಾಖೆಯಲ್ಲಿ ನಡೆದ ಇವರ "ಕೊಲೇಜ್" ಪ್ರದರ್ಶನದಲ್ಲಿ ಲ್ಯಾಂಡ್‌ಸ್ಕೇಪ್ (ಪ್ರಕೃತಿ ದೃಶ್ಯಗಳು), ಬೂರ್ಖಾ ಧರಿಸಿದ ಹೆಂಗಸರು ಹಾಗೂ ಕೂಲಿ ಜನರನ್ನು ವಿನ್ಯಾಸಗಳಲ್ಲಿ ಮೂಡಿಸಿರುವುದುಂಟು.

ಹುಬ್ಬಳ್ಳಿಯ ರೈಲ್ವೆ ನಿಲ್ದಾಣದ ಪಕ್ಕದಲ್ಲಿನ ರಸ್ತೆಯಲ್ಲಿ ಪಾಟೀಲರು, ಸುಭಾಷ್ ಕ್ಷತ್ರಿ ಹಾಗೂ ಕೆ.ಆರ್. ಸುಬ್ಬಣ್ಣ ಇವರು "ತ್ರಿವಳಿ ಆರ್ಟ್ ಗ್ರೂಪ್" ಎಂದು ಹೆಸರಿನ ಕೆಳಗೆ ನಡೆಸಿದ ಪ್ರದರ್ಶನವಂತೂ ಅಪಾರವಾದ ಜನಮನ್ನಣೆ ಗಳಿಸಿತು. ಸರ್ಜುಕಾಟ್ಕರ್, ಸತೀಶ್ ಕುಲಕರ್ಣಿ, ಪದ್ಮರಾಜ ಮುಂತಾದ ಪತ್ರಿಕೆಯ ಗೆಳೆಯರು ಹಾಗೂ ಲೇಖಕರು ಇವರಿಗೆ ಒತ್ತಾಸೆಯಾಗಿ ನಿಂತರು. ಬುದ್ದಣ್ಣ ಹಿಂಗಮರೆ ಹಾಗೂ ಸೋಮಶೇಖರ ಇಮ್ರಾಪುರ ಪ್ರದರ್ಶನವನ್ನು ಉದ್ಘಾಟಿಸಿದರು. "ಕಲಾವಿದರು ತಮ್ಮ ಚಿತ್ರಗಳನ್ನು ಬಹಿರಂಗವಾಗಿ ಪ್ರದರ್ಶನಕ್ಕಿರಿಸಿರುವುದು ಈ ದೇಶದಲ್ಲಿ ಇದು ಮೂರನೆಯ ಸಲವೆಂದೇ ಹೇಳಬೇಕು. ಎಲ್ಲಕ್ಕೂ ಮೊದಲು ೧೯೭೧ರಲ್ಲಿ ಬೀದಿಯ ಮೇಲೆ ಕಲಾವಿದನೊಬ್ಬ ತನ್ನ ಚಿತ್ರಗಳನ್ನು ಬಹಿರಂಗವಾಗಿ ಪ್ರದರ್ಶನಕ್ಕಿಟ್ಟಿದ್ದು" ಎಂದು ಪತ್ರಿಕೆಯೊಂದು ಇದನ್ನು ಬಣ್ಣಿಸಿತು. ಉದಯವಾಣಿ ದಿನ ಪತ್ರಿಕೆಯ ಮ್ಯಾಗಜಿನ ವಿಭಾಗದಲ್ಲಿ ಇದರ ಬಗ್ಗೆ ಬರೆದ ಪ್ರೊ. ಸಿ.ಪಿ. ಹೇಮಗಿರಿಮಠ ಅವರು ಹುಬ್ಬಳ್ಳಿಯ ಕೆಲವು ಗ್ರಂಥಾಲಯಗಳ ಆವರಣದಲ್ಲಿ ಬೀದಿಯ ಬದಿಗೇ ನಡೆಸಿದ್ದ ಈ ಕಲಾ ಪ್ರದರ್ಶನದಲ್ಲಿ ಪಾಲ್ಗೊಂಡ "ಭಿನ್ನ ಪ್ರಕೃತಿ, ಭಿನ್ನ ಅಭಿರುಚಿಯ ಪಾಟೀಲರನ್ನು ಒಳಗೊಂಡಿರುವ ಮೂವರು ಹವ್ಯಾಸಿ ಕಲಾವಿದರನ್ನು ಶ್ಲಾಘಿಸಿ "ಇವರಲ್ಲಿ ಒಬ್ಬೊಬ್ಬರಿಗೂ ತಮ್ಮದೇ ಆದ ವಿಶಿಷ್ಟ ಶೈಲಿ ಹಾಗೂ ದೃಷ್ಟಿಕೋನ. ಅವರ ಪ್ರತಿಭೆ, ಪರಿಶ್ರಮಗಳ ಮೂಲಕ ಮೂಡಿ ಬಂದ ಬಣ್ಣದ ಬೆಡಗು ಕಣ್ಣಿಗೆ ಹಬ್ಬ. ಬುದ್ಧಿಗೆ ಕಸರತ್ತು, ಭಾವನೆಗೆ ಅಭಿವ್ಯಕ್ತಿ, ಕಲ್ಪನೆಗೆ ಪುಟ, ಮನಸ್ಸಿಗೆ ಆನಂದ, ಅಹ್ಲಾದ" ಎಂದಿದ್ದಾರೆ.

"(ಇಲ್ಲಿ ಪ್ರದರ್ಶಿತಗೊಂಡಿರುವುವು) ರಮ್ಯ ಹಾಗೂ ನವ್ಯ ಎರಡೂ ಸಂಪ್ರದಾಯಗಳ ಚಿತ್ರಗಳು. ಸಂಕೀರ್ಣತೆ, ಸಾಂಕೇತಿಕತೆಯ ಜತೆ ಜತೆಗೇ ವಸ್ತುನಿಷ್ಠತೆ, ವಾಸ್ತವಿಕತೆ ಹಾಗೂ ಸ್ಥಿರಚಿತ್ರಣ ಮತ್ತು ಕಲ್ಪನೆಗಳಿಗೂ ಸಮಾನ ಅವಕಾಶ" ಎನ್ನುವ ಹೇಮಗಿರಿಮಠರು "ಜನ ಸಾಮಾನ್ಯರಲ್ಲಿ ಭಾಷೆಯ ಗೊಂದಲವಿಲ್ಲದ ಚಿತ್ರ ಕಲೆಯ ಮುಖಾಂತರ ಹೃದಯದ ಭಾವ ಭಾವನೆಗಳನ್ನು, ಕಲ್ಪಕತೆಯನ್ನು ಕಲಾವಿದನ ಹೃದಯದಿಂದ ನೇರವಾಗಿ ಅವರಿಗೆ ಮುಟ್ಟಿಸಲು, ತನ್ಮೂಲಕ ಅವರಲ್ಲಿರುವ ಕಲಾಭಿಜ್ಞತೆಯನ್ನು ಎಚ್ಚರಿಸಲು, ಕಲ್ಪಕತೆಯನ್ನು ಕೆರಳಿಸಲು ಹಾಗೂ ಭೌದ್ಧಿಕ ಕಸರತ್ತನ್ನು ಕೊಡಲು ತಾವು ಕೈಗೊಂಡ ಒಂದು ನಮ್ರ ಪ್ರಯತ್ನ" ಎಂದು ಕಲಾವಿದರೇ ಆಡಿದ ಮಾತುಗಳನ್ನು ಉಲ್ಲೇಖಿಸುತ್ತಾರೆ. ಎಂ.ಬಿ. ಪಾಟೀಲರ ಬಗ್ಗೆ

ಪ್ರತ್ಯೇಕವಾಗಿ ಹೇಳುತ್ತಾ "ರಮ್ಯತೆ ಹಾಗೂ ನಿಸರ್ಗಪ್ರೇಮಕ್ಕೆ ವಾಸ್ತವಿಕ ಕಟು ಸತ್ಯತೆಗೆ ಯಥಾವತ್ ರೂಪಕೊಟ್ಟು ಜೀವದುಂಬಿ ನಿಲ್ಲುವ ಕಲೆಯನ್ನು ರೂಢಿಸಿಕೊಂಡ ಕಲಾವಿದರು" ಎನ್ನುತ್ತಾರೆ. "ಚಿತ್ರ ಕಲೆಯ ಬಗ್ಗೆ ಸಾರ್ವಜನಿಕರಲ್ಲಿ ಹೆಚ್ಚಿನ ಆಸಕ್ತಿಯನ್ನು ಕೆರಳಿಸುವ ಉದ್ದೇಶವನ್ನು" ಹೊಂದಿದ ಇದನ್ನು "ಕ್ರಾಂತಿಕಾರಿ ಪ್ರಯೋಗ" ಎಂದೂ ಕರೆದವರುಂಟು.

ಪಾಟೀಲರ ಕಲಾ ಜೀವನದ ಪ್ರಾರಂಭದಲ್ಲಿ ವೃತ್ತಪತ್ರಿಕೆಗಳು ಕಲಾಪ್ರದರ್ಶನಗಳನ್ನು ಕುರಿತಂತೆ ಪ್ರಚಾರ ನೀಡಿದರೂ ಯಾವುದೇ ಕಲೆಯ ಬಗ್ಗೆ ವಿಮರ್ಶಾತ್ಮಕವಾಗಿ ಚರ್ಚೆಗಳಾಗುತ್ತಿರಲಿಲ್ಲ. ಪಾಟೀಲರ ಪ್ರದರ್ಶನಗಳಿಗೆ ಅನಂತರದಲ್ಲಿ ನಾನಾ ಪ್ರಬುದ್ಧ ವಿಮರ್ಶಕರಿಂದ ನಿಷ್ಪಕ್ಷಪಾತವಾದ ಮೌಲ್ಯಮಾಪನ ದೊರಕಿದರೂ ಪಾಟೀಲರ ಕಲೆಯ ಬಗ್ಗೆ ಅರ್ಥಪೂರ್ಣವಾಗಿ ವಿವರಿಸಬಲ್ಲವರಾಗಿದ್ದವರು ಪಾ.ವೆಂ. ಆಚಾರ್ಯರು. "ಕಸ್ತೂರಿ" ಮಾಸಪತ್ರಿಕೆಗೆ ಮುಖಪುಟವನ್ನು ಇವರಿಂದ ಪಡೆದುಕೊಂಡ ಆಚಾರ್ಯರು ಕಲಾವಿದರಿಗೆ ಸೂಕ್ತವಾದ ಪುರಸ್ಕಾರವನ್ನು ನೀಡಬಲ್ಲವರಾಗಿದ್ದರು. ಹುಬ್ಬಳ್ಳಿಯ ವಾರ್ತಾ ಕೇಂದ್ರದಲ್ಲಿ ನಡೆದ ಸಮ್ಮೇಳನವೊಂದಕ್ಕಾಗಿ ಸರ್ಕಾರಕ್ಕಾಗಿ ೧೨ ಅಡಿ ೪ ಅಡಿ ಅಳತೆಯ ಕೊಲೇಜ್ ಕಲಾಕೃತಿಯ ಮೂಲಕ ಪಾಟೀಲರು ಭಾವೈಕ್ಯವನ್ನು ಬಿಂಬಿಸಿದ್ದರು. ಅದರ ಬಗ್ಗೆ ಸಂಯುಕ್ತ ಕರ್ನಾಟಕ ವಿಸ್ತಾರವಾದ ಮಾಹಿತಿ ನೀಡಿತಲ್ಲದೆ ಬಂಗ್ಲಾದೇಶದ ವಿಮೋಚನೆಯನ್ನು ಕುರಿತು ಪೋಸ್ಟರ್ ಕಲರ್ ಬಳಿಸಿ ಪಾಟೀಲರು ರಚಿಸಿದ ಚಿತ್ರ ಸಭೆಗೆ ಆಗಮಿಸಿದ್ದ ದ.ರಾ. ಬೇಂದ್ರೆಯವರನ್ನು ಆಕರ್ಷಿಸಿ ಅವರು ತಮ್ಮ ಭಾಷಣದಲ್ಲಿ "ಇಲ್ಲಿ ಕಲಾಕೃತಿಯೊಂದೇ ಜೀವ ತಳೆದು ಮಾತನಾಡುತ್ತಿರಬೇಕಾದಾಗ ನನ್ನಂಥವನ ಭಾಷಣವೇ ಅನಗತ್ಯ" ಎಂದರು.

ಪಾಟೀಲರ ಕಲೆಯಲ್ಲಿನ ತಂತ್ರ

ಎಂ.ಬಿ. ಪಾಟೀಲರ ಶೈಲಿಯಲ್ಲಿ ಅನುಕರಣೆಯಿಲ್ಲ. ಅವರಲ್ಲಿರುವ ಕಲಾನುಭವ ಪ್ರತಿಯೊಂದು ಕೃತಿ ರಚನೆಯ ಪ್ರಾರಂಭದಲ್ಲೇ ಅವರನ್ನು ಅವರದ್ದೇ ಆದ ದಿಕ್ಕಿನಲ್ಲಿ ಸಾಗುವಂತೆ ಪ್ರೇರೇಪಿಸುತ್ತದೆ. ಪಾಟೀಲರ ಕೃತಿಯಲ್ಲಿ ಇತರರ ಕೃತಿಗಳ ಛಾಯೆಯಿರದೆ ಭಿನ್ನ ರೀತಿಯ ಸಂಯೋಜನೆಗಳಿರುತ್ತವೆ. ಇವರು ಬಣ್ಣಗಳ ಸಮಿಶ್ರಣ, ಬಣ್ಣಗಳ ಹೊಂದಾಣಿಕೆಯನ್ನು ಹುಡುಕಿಕೊಂಡು ಹೋಗುತ್ತಾರೆ.

ಪಾಟೀಲರ ಅನ್ವಯ ಸಾಮಾನ್ಯವಾಗಿ ಯಾವುದೇ ಕೃತಿಯನ್ನು ರಚಿಸುವಾಗ ಲಭ್ಯವಾಗುವವು ಎರಡು ರೀತಿಯ ಬಣ್ಣಗಳು. ಒಂದು ತಂಪಾದ ಬಣ್ಣಗಳು, ಅಂದರೆ "ಕೂಲ್ ಕಲರ್ಸ್". ಇವು ಮೃದುವಾಗಿ ಗೋಚರಿಸುವಂಥವು. ಮತ್ತೊಂದು ಪ್ರಖರವಾದ ಬಣ್ಣಗಳು ಅಂದರೆ "ಹಾಟ್ ಕಲರ್ಸ್" ವಸ್ತುವಿಗೆ ಹೊಂದಾಣಿಕೆಯಾಗುವ ರಿತಿಯಲ್ಲಿ ಬಣ್ಣಗಳನ್ನು ಸಂಯೋಜಿಸುವುದೇ ಕಲಾವಿದನ ಜಾಣ್ಮೆ. ಉದಾಹರಣೆಗೆ ಕೆಂಪು, ಹಸಿರು, ನೀಲಿ, ಕಪ್ಪು ಹಾಗೂ ಹಳದಿ ಬಣ್ಣಗಳು. ಇವುಗಳಲ್ಲೆಲ್ಲ ತುಲನಾತ್ಮಕಗೊಳಿಸುವ ಗುಣಗಳಿರುತ್ತವೆ. ಯಾವ ಬಣ್ಣ ಪ್ರಮುಖವಾಗಿ ಕಾಣುತ್ತದೆ, ಯಾವ ಬಣ್ಣವನ್ನು ಪ್ರಮಾಣಬದ್ಧವಾಗಿ ಬಳಸಿಕೊಂಡಾಗ ತುಲನೆ ಸಾಧ್ಯವಾಗುತ್ತದೆ ಎಂಬುದನ್ನು ಕಲಾವಿದನೊಬ್ಬ ತನ್ನ ಅನುಭವದ ಮೂಲಕ ಸಾಬೀತು ಪಡಿಸಬೇಕಾಗುತ್ತದೆ. ಕಲಾವಿದನ ಕಣ್ಣಿನಲ್ಲೇ ಬಣ್ಣಗಳ ಶಕ್ತಿಯನ್ನು, ಗುಣವನ್ನು ಅಳೆಯುವಂಥ ತಕ್ಕಡಿಯಿರುತ್ತದೆ. ಕಲಾವಿದನ ತುಲನಾತ್ಮಕ ಚೌಕಟ್ಟನ್ನಿಟ್ಟು ಕೊಂಡು, ಸ್ಥಳವಕಾಶದ ಬಗ್ಗೆ ತಿಳಿವಳಿಕೆಯನ್ನು ಹೊಂದಿ, ಬಳಸಬೇಕಾದ ಬಣ್ಣಗಳ ಬಗ್ಗೆ ನಿರ್ಧರಿಸುತ್ತಾನೆ. ಈ ಎಲ್ಲ ಲಕ್ಷಣಗಳೂ ಪಾಟೀಲರಲ್ಲಿ ಇರುವುದರಿಂದಲೇ ಭಾವನೆಗಳನ್ನು ಕೃತಿಗಳಲ್ಲಿ ವ್ಯಕ್ತಗೊಳಿಸುವಾಗ ಇವರು ಸಮಗ್ರ ವಿಷಯವನ್ನು "space

judgement" ಮೂಲಕ ವ್ಯಕ್ತಗೊಳಿಸುತ್ತಾರೆ. ಪಾಟೀಲರು ಹೇಳುತ್ತಾರೆ: "ಉದಾಹರಣೆಗೆ ಒಂದು ಕ್ಯಾನ್‌ವಾಸ್‌ನಲ್ಲಿ ನಾನು ರೇಖೆಯೊಂದನ್ನು ಮೂಡಿಸುತ್ತೇನೆ. ಈ ರೇಖೆ ಇಡೀ ಕ್ಯಾನ್‌ವಾಸನ್ನು ನಿಯಂತ್ರಿಸಬೇಕು. ನಮ್ಮ ಜಾಣ್ಮೆ ರೇಖೆಗಳನ್ನು ಬಳಸಿಕೊಳ್ಳುವ ವಿಧಾನದ ಮೂಲಕ ವ್ಯಕ್ತಗೊಳ್ಳುತ್ತದೆ. ವಾಸ್ತವ (ರಿಯಲಿಸ್ಟಿಕ್) ಕಲೆಯಲ್ಲಿ ಒಳ್ಳೆಯ ಬಾವಚಿತ್ರಗಳನ್ನು ಮಾಡಬಲ್ಲ ಸಾಮರ್ಥ್ಯವಿದೆ. ಅಕಾಡೆಮಿಕ್ ಶೈಲಿಯಲ್ಲಿ, ತಾಂತ್ರಿಕತೆಯನ್ನು ಬಳಸಿಕೊಳ್ಳುವ ಮೂಲಕ ಅದನ್ನು ರೂಪಿಸಬಾರದು. ಆದರೆ ಹೊಸ ಪ್ರಯೋಗಗಳನ್ನು ನಡೆಸುವಾಗ, ನಮ್ಮ ಅನುಭವಗಳನ್ನು ಹೊರ ಹಾಕಬೇಕಾದಾಗ, ನಮಗೇ ತೃಪ್ತಿಯಾಗಬೇಕು. ವಸ್ತುವನ್ನು ವಿಭಜಿಸುವುದು, ಅದರಲ್ಲಿ ಅಳವನ್ನು ಮೂಡಿಸುವುದು, ಜಾಮಿತಿಯ ವಿನ್ಯಾಸಗಳನ್ನು ಬಳಸಿಕೊಳ್ಳುವುದು ಇದು ನಮ್ಮ ಸೃಜನಶೀಲತೆಯನ್ನು ಅವಲಂಬಿಸುವಂಥದ್ದು!!"

ಪಾಟೀಲರು ಹೇಳುವ ಮಾತನ್ನೇ ಪುಷ್ಟೀಕರಿಸುವಂತೆ ಕಲಾ ವಿಮರ್ಶಕರೊಬ್ಬರು ಹೇಳುವ ಮಾತು: "ಪಾಟೀಲರಿಗೆ ಹಳದಿ ಮತ್ತು ಕೆಂಪು ಬಣ್ಣದ ವ್ಯಾಮೋಹ ಬಹಳವೆಂದು ತೋರುತ್ತದೆ. ಅವರ ಎಲ್ಲ ಕೃತಿಗಳ ಹಿಂದಿರುವ ಗುಣ ರೇಖೆಗಳಲ್ಲಿ ಖಚಿತತೆ ಮತ್ತು ಸನ್ನಿವೇಶ ನಿರ್ಮಾಣದಲ್ಲಿ ಸುಸಂಯೋಜನೆ. ವಾಸ್ತವ ಆಕೃತಿಗಳಲ್ಲಿ ಅವರ ಕೇಂದ್ರ ಗಮನ. ಬೇಸಗೆ, ಬೆಸ್ತ ಹೆಂಗಸು, ಹಕ್ಕಿ, ರಾಜ ಮತ್ತು ರಾಣಿ, ಮಾಯಾಮೃಗ, ಪ್ರೇಮಿಗಳು ಇವು ನೈಜ ನೆಲೆಯಲ್ಲೇ ವಸ್ತುನಿಷ್ಠತೆಯನ್ನು ಉಳಿಸಿಕೊಂಡಿವೆ. ಪಾಟೀಲರ ಕಾಳಜಿ ನವ್ಯದತ್ತಲೂ ಹರಿದಂತೆ ಕಾಣಲು "ಹೆಣ್ಣಿನ ಎರಡು ಮುಖ" ಮತ್ತು "ಭೀಭತ್ಸ" ಇವು ಸಾಕ್ಷಿ. ರೇಖೆಗೆ ಮಹತ್ವ ಕೊಡುವ ಪಾಟೀಲರ ಒಟ್ಟಾರೆ ವಾಂಛೆ ಸರಳ ಹಾಗೂ ನೇರ ರಚನೆಗಳ ಮೂಲಕ ಇರುವಿಕೆಯನ್ನು ರಂಗಿನಲ್ಲಿ ಸೆರೆ ಹಿಡಿಯುವುದಾಗಿದೆ."

ಪಾಟೀಲರು ಒಮ್ಮೆ ಒಂದು ನಿರ್ದಿಷ್ಟ ಬಣ್ಣದಲ್ಲಿ ಅದ್ದಿದ ಬ್ರಶ್‌ನ್ನು ಮತ್ತೊಮ್ಮೆ ಬಳಸುವುದಿಲ್ಲ. ಅವರ ನಿರಂತರ ಪ್ರವಾಸ, ಪರಿಸರದ ಬಗ್ಗೆ ಅವರಿಗಿರುವ ಕುತೂಹಲ, ಅವರು ಕಂಡಂಥ ನೋವು ನಲಿವುಗಳು, ಸುತ್ತಮುತ್ತಲಿನ ಘಟನೆಗಳು ಇವೆಲ್ಲವೂ ಇವರಲ್ಲಿ ಕಲೆಯಾಗಿ ಗಟ್ಟಿಗೊಳ್ಳುತ್ತವೆ. ಇವರ ಕೃತಿಗಳಲ್ಲಿ ಸಾಮಾನ್ಯವಾಗಿ ಬೂದುಬಣ್ಣ, ಇಂಡಿಯನ್ ರೆಡ್ ಮುಂತಾದ ನಿಷ್ಕ್ರಿಯ ಬಣ್ಣಗಳಿರುವುದಿಲ್ಲ. ಇಂಥ ಬಣ್ಣಗಳು ಬಳಕೆಯಾಗುವುದು ಇವರು ಆಯ್ದುಕೊಂಡ ವಸ್ತುವಿಗೆ ಅವು ಪೂರಕವೆನಿಸಿದಾಗ ಮಾತ್ರ. ಪಾಟೀಲ ತಮ್ಮ ಕಲೆಯನ್ನು ಈ ರೀತಿ ವಿವರಿಸುತ್ತಾರೆ. "ಉದಾಹರಣೆಗೆ ಕಲಾವಿದನೊಬ್ಬ ಗುಡ್ಡ, ಬಂಡೆ, ಕಲ್ಲು, ಬಿಸಿಲು ಇವನ್ನು ದಿಟ್ಟಿಸುತ್ತಾನೆ ಎಂದಿಟ್ಟುಕೊಳ್ಳೋಣ. ಬಿಸಿಲಿನ ಪ್ರಖರತೆಯನ್ನು ಅವನು ಗಮನಿಸುತ್ತಾನೆ. ಹಿನ್ನಲೆಯಲ್ಲಿ ಒಂದು ಮಸೀದಿಯಿರಬಹುದು. ಈ ದೃಶ್ಯ ಬರಡು ಎನ್ನಿಸುವುದಕ್ಕೆ ಕಾರಣ ಅಲ್ಲಿ ಹಸಿರಿಲ್ಲ, ಮರಗಿಡಗಳಿಲ್ಲ. ಇಂಥ ಸಂದರ್ಭದಲ್ಲಿ ತಂಪಾದ ಬಣ್ಣಗಳನ್ನು ಅಂದರೆ ಕೂಲ್ ಕಲರ್ಸ್‌ನ್ನು ಬಳಸುವುದು ತದ್ವಿರುದ್ಧವಾಗುತ್ತದೆ. ಯಾವುದೇ ಕಟ್ಟಡವೊಂದು ಅಗ್ನಿಗೆ ಆಹುತಿಯಾಗಿ, ಬೆಂಕಿಯ ಕೆನ್ನಾಲಿಗೆಗಳು ಚಾಚಿಕೊಂಡಿರುವಾಗ ವಾತಾವರಣದ ಕಾವನ್ನು, ಭಯಾನಕ ವಾತಾವರಣವನ್ನು ನಿರ್ಮಿಸಬೇಕಾದಾಗ ಪ್ರಖರ ಬಣ್ಣಗಳನ್ನು ಬಳಸಬೇಕಾಗುತ್ತದೆ. ಕೃತಿಯೊಂದರ ರಚನೆಯಲ್ಲಿ ತೊಡಗುವ ಮುಂಚೆ ನಾನು ನಿದ್ರೆ ಹತ್ತುವವರೆಗೂ ಅದರ ಬಗ್ಗೆ ಚಿಂತೆ ಮಾಡ್ತೀನಿ. ಕಲಾವಿದ ಸದಾ ಚಿಂತನಶೀಲನಾಗಿದ್ದಾಗ ಮಾತ್ರ ಅವನು ತನ್ನ ಭಾವನೆಗಳನ್ನು ಕೃತಿಗಿಳಿಸುವುದು ಸಾಧ್ಯ" ಪ್ರಹ್ಲಾದ ಬೆಟಗೇರಿಯವರು ಇವರ ಬಗ್ಗೆ ಬರೆಯುತ್ತ, "ಬಣ್ಣಗಳ ತೂಕ, ಸಮರ್ಪಕವಾದ ನಿರೂಪಣೆಯ ತಂತ್ರ ಪ್ರಾಮುಖ್ಯತೆಯೊಂದಿಗೆ ಕೃತಿ ರಚಿಸುವುದರಲ್ಲಿ ಸಿದ್ಧಹಸ್ತರೆನ್ನಿಸಿದ ಪಾಟೀಲರು ಮಾಧ್ಯಮ ಅರಿತ ಕಲಾವಿದರು. ಸಫೂರವಾದ ಕೈ ಬೆರಳುಗಳು ಕುಂಚದೊಂದಿಗೆ ತಾದಾತ್ಮ್ಯ ಹೊಂದಿ ಇದುವರೆಗೆ ಅಸಾಧಾರಣ ಪ್ರತಿಭೆಯ ಕೃತಿಗಳನ್ನು ಹೊಮ್ಮಿಸಿವೆ" ಎಂದಿದ್ದಾರೆ.

ಕಾರ್ಯವಿಧಾನ

ಪಾಟೀಲರ ಕಾರ್ಯವಿಧಾನವನ್ನು ಅವರಿಂದಲೇ ಅರಿಯಬೇಕಾಗುತ್ತದೆ. ಸಾಮಾನ್ಯವಾಗಿ ನೆಲದ ಮೇಲೆ ಕ್ಯಾನ್‌ವಾಸ್ ಹಾಗೂ ಬಣ್ಣದ ಸಾಮಾಗ್ರಿಗಳನ್ನು ಹರಡಿಕೊಂಡು ಚಿತ್ರಗಳನ್ನು ರಚಿಸುವ ಪಾಟೀಲರು ಒಮ್ಮೆ ಇಡೀ ರಾತ್ರಿ ಕೆಲಸ ಮಾಡುತ್ತಾರೆ. ಮುಂಜಾನೆಗಿಂತಲೂ ಮಧ್ಯಾಹ್ನದ ವೇಳೆಯನ್ನೇ ಕೃತಿ ರಚನೆಗೆ ಮೀಸಲಾಗಿಡುವುದುಂಟು. ಪಾಟೀಲರು ಹೇಳುತ್ತಾರೆ "ಮೊದಲು ವಸ್ತುವಿನ ಬಗ್ಗೆ ನಿರ್ಧರಿಸುತ್ತೇನೆ. ಕೃತಿಯೊಂದಕ್ಕೆ ಇಷ್ಟೇ ಕಾಲ ಅಗತ್ಯ ಎಂಬುದೇನಿಲ್ಲ. ಒಮ್ಮೊಮ್ಮೆ ಐದು ಕೃತಿಗಳನ್ನು ಒಂದೇ ದಿನದಲ್ಲಿ ಮಾಡಿ ಮುಗಿಸಬಹುದು. ಅರ್ಧ ಗಂಟೆಯಲ್ಲೂ ಮಾಡಬಹುದು. ೪-೫ ದಿನಗಳೂ ತಳ್ಳಬಹುದು. ಆದರೆ ಒಂದೇ ದಿನದಲ್ಲಿ ಅನೇಕ ಕೃತಿಗಳನ್ನು ಮಾಡುವಾಗ ಅವುಗಳಲ್ಲಿ ಬಣ್ಣಗಳ ವ್ಯತ್ಯಾಸಗಳಿರುತ್ತವೆ, ಅಂತರವಿರುತ್ತದೆ."

ಪಾಟೀಲರು ಇದುವರೆಗೆ ಸಾವಿರಾರು ಕೃತಿಗಳನ್ನು ರಚಿಸಿದ್ದಾರೆ. ಹುಬ್ಬಳ್ಳಿ, ಕಿತ್ತೂರು, ಕಲ್ಬುರ್ಗಿ, ಬೆಂಗಳೂರು, ಹೈದರಾಬಾದ್ ನಲ್ಲಿ ವ್ಯವಸ್ಥೆಗೊಳಿಸಲಾಗಿದ್ದ ಇವರ ಏಕವ್ಯಕ್ತಿ ಪ್ರದರ್ಶನಗಳೇ ಇರಬಹುದು ಅಥವಾ ಇವರು ವಿಪುಲವಾಗಿ ಭಾಗವಹಿಸಿರುವ "ಗ್ರೂಪ್ ಶೋ"ಗಳಾಗಿರಬಹುದು. ಕಲಾ ರಸಿಕರು ಇವರನ್ನು ವಿಶಿಷ್ಟ ರೀತಿಯ ಕಲಾವಿದರೆಂದು - ಅದರಲ್ಲೂ ಮುಖ್ಯವಾಗಿ ೧೯೬೫ರಿಂದೀಚೆಗೆ ಗುರುತಿಸಿದ್ದಾರೆ. ಗಾಂಧಿ ಶತಮಾನೋತ್ಸವ ಸಂದರ್ಭದಲ್ಲಿ ಇವರು ಹುಬ್ಬಳ್ಳಿಯ ಬಾಸೆಲ್ ಮಿಷನ್ ಸ್ಕೂಲ್ ಆವರಣದಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿನ ಗಾಂಧಿಯ ಪಾತ್ರವನ್ನು ಕುರಿತು ರಚಿಸಿದ ಕೃತಿಗಳು ಐದಾರು ದಿನಗಳ ಕಾಲ ಯಶಸ್ವಿಯಾಗಿ ಪ್ರದರ್ಶನಗೊಂಡು ನೂರಾರು ಜನರನ್ನು ಆಕರ್ಷಿಸಿರುವುದುಂಟು. ಈ ಪ್ರದರ್ಶನವನ್ನು ಪಾಟೀಲರು ಏರ್ಪಡಿಸಿದ್ದು ವೈಯಕ್ತಿಕವಾಗಿ, ತಮ್ಮದೇ ಖರ್ಚಿನಲ್ಲಿ! ಇವರಿಂದ ಪ್ರಪ್ರಥಮ ಬಾರಿಗೆ ಬೀದರದಲ್ಲಿ ಕಲಾಶಿಬಿರವೊಂದು ಏರ್ಪಾಡಾಗಿತ್ತು. ಕಲಾ ಚಟುವಟಿಕೆಗಳಲ್ಲಿ ಆಸಕ್ತಿಯಿದ್ದ ವಿವಿಧ ಕಲಾವಿದರು ಒಟ್ಟುಗೂಡಿ ಇಂಥ ಶಿಬಿರವೊಂದನ್ನು ಏರ್ಪಡಿಸಿದಾಗ ಪೋಲೀಸ್ ಇಲಾಖೆಯವರು ಟೆಂಟ್ ಹಾಕಿಕೊಟ್ಟರು. ಮೇ ತಿಂಗಳು, ಸುಡು ಬಿಸಿಲು, ರಾತ್ರಿಯ ವೇಳೆ ಹಾವುಗಳು ಟೆಂಟೊಳಗೆ ಹರಿದಾಡಲು ಶುರುವಾದಾಗ ಹುಮನಾಬಾದ್‌ನಿಂದ ೧೦ ಕಿಲೋಮಿಟರ್ ದೂರದಲ್ಲಿನ ಶಾಲೆಯಲ್ಲಿ ಶಿಬಿರ ಮುಂದುವರೆಯಿತು. ಪಾಟೀಲರು ಇಲ್ಲಿ ಜಲ್ಲಿ ಹೊಡೆದು ಆಯಾಸಗೊಂಡ ಕೂಲಿ ಹೆಂಗಸರ ಚಿತ್ರವನ್ನು ರಚಿಸಿದ್ದರು.

ಬೆಂಗಳೂರಿನಲ್ಲಿ ನಡೆದ ಪಾಟೀಲರ "ಹೋಂ-೯೧" ಹಾಗೂ ಇಲ್ಲಿನ ಇಮೇಜಸ್ ಆರ್ಟ್‌ಗ್ಯಾಲರಿಯಲ್ಲಿ ಪ್ರದರ್ಶಿತಗೊಂಡ ಮಹಿಳೆಯನ್ನು ಕುರಿತು ಚಿತ್ರಗಳು ವಿಮರ್ಶಕರ ಕುತೂಹಲಕ್ಕೆ ಗರಿ ಮೂಡಿಸಿದವಂಥವು. "ಮನೆ-೯೧"ರಲ್ಲಿನ ಪಾಟೀಲರ ೨೬ ಚಿತ್ರಗಳಲ್ಲಿ ಬಣ್ಣ ಬಣ್ಣದ ಚೌಕಗಳು ಪ್ರಧಾನವಾಗಿದ್ದು ಒಂದು ರೀತಿಯ ಕೃತಿಗಳಂತೆ ಅನುಭವವಾಗುತ್ತದೆ. ಕೆಲವು ಪೂರಾ ಅಮೂರ್ತದಲ್ಲಿ. ಆದರೆ ಎಲ್ಲದರಲ್ಲಿಯೂ ಈ ರೀತಿಯ ಸಾಮರಸ್ಯವುಳ್ಳ ಚೌಕ ಮತ್ತು ಇತರ ಆಕೃತಿಗಳಿಂದ ಕೂಡಿ ವರ್ಣಶೋಭೆಯಿಂದ ಆಕರ್ಷಿಸುತ್ತವೆ ಎಂದು ಬಿ.ವಿ.ಕೆ. ಶಾಸ್ತ್ರಿಯವರು ಬಣ್ಣಿಸಿದ್ದಾರೆ. ಇಮೇಜಸ್ ಆರ್ಟ್‌ಗ್ಯಾಲರಿಯಲ್ಲಿನ ಪಾಟೀಲರ ಚಿತ್ರಗಳನ್ನು ವಿಮರ್ಶಕರು, ಎನ್.ಎಸ್. ಬೇಂದ್ರೆ, ಎಂ.ಎಫ್. ಹುಸೇನ್, ಖಂಡೇರಾವ್ ಇವರ ಕೃತಿಗಳೊಂದಿಗೆ ಹೋಲಿಸಿ ನೋಡಿದ್ದಾರೆ. "ವಿವಿಧ ಭಂಗಿಗಳಲ್ಲಿರುವ ಈ ಹೆಂಗೆಳೆಯರೆಲ್ಲ ಸರಳ ಶೈಲೀಕೃತ ರೂಪ ಪಡೆದು ಕೊಂಡಿದ್ದಾರೆ. ... ತೆಳುವಾದ ಮೃದುವಾದ ಛಾಯಾಂತರದಂತಹ ಭಾರತೀಯ ಚಿಕಣಿ ಚಿತ್ರಶೈಲಿಯ ಕೆಲವು ಅಂಶಗಳೂ ಇಲ್ಲಿ ಬಂದಿವೆ!!"

ವ್ಯಂಗ್ಯ ಚಿತ್ರಗಳಲ್ಲಿ ಏಕೆ ತಮ್ಮನ್ನು ತೊಡಗಿಸಿಕೊಂಡಿಲ್ಲ ಎಂಬ ಪ್ರಶ್ನೆಗೆ ಪಾಟೀಲರು ನೀಡುವ ಉತ್ತರ: "ಇಡೀ ದಿನ ಅದಕ್ಕಾಗಿ ವಸ್ತುವನ್ನು ಹುಡುಕಬೇಕು. ಅಲ್ಲದೆ ವ್ಯಂಗ್ಯಚಿತ್ರಗಳು ಶಾಶ್ವತವಾಗಿ ಉಳಿಯುವಂಥವಲ್ಲ" ಇವೇ ಕಾರಣಕ್ಕಾಗಿಯೇ ಪಾಟೀಲರು ವಾಣಿಜ್ಯ ಕಲೆಯತ್ತ ಎಂದೂ ಒಲಿದಿಲ್ಲ. "ಕಮರ್ಶಿಯಲ್ ಆರ್ಟ್‌ನಲ್ಲಿ ಕಲಾವಿದನಿಗೆ ಸಾಕಷ್ಟು ಹಣ ಸಿಗಬಹುದು, ಆದರೆ ಅಲ್ಲಿ ಅವನಿಗೆ ಸ್ವಾತಂತ್ರ್ಯವಿಲ್ಲ. ಒಡೆಯ ಹೇಳಿದಂತೆ ಅವನು ಕೇಳಬೇಕು, ಕೃತಿಗೆ ಅವನು ಮೆರಗು ಕೊಡಬಹುದಾದರೂ ಇನ್ನೊಬ್ಬರು ಹೇಳಿದ ವರ್ತುಲದಲ್ಲಿ ಮಾತ್ರ. ಫೈನ್ ಆರ್ಟ್ ಹಾಗಲ್ಲ. ಇಲ್ಲಿ ಕಲಾವಿದನಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ತನ್ನ ವಿಚಾರಗಳನ್ನು ನಿರಾತಂಕವಾಗಿ ಬಣ್ಣಗಳ ಮೂಲಕ ತೋರಿಸಬಲ್ಲ." ಪಾಟೀಲರು ಚಿತ್ರಕಲೆಯನ್ನು "ಒಂದು ತಪಸ್ಸು" ಎಂದು ಕರೆಯುತ್ತಾರೆ. "ಅದರಲ್ಲಿ ಕಲಾವಿದ ಸಿದ್ಧಿಯನ್ನು ಪಡೆಯಲೇಬೇಕು. ಆಗ ಮಾತ್ರ ಅವನ ಕೃತಿಗಳಿಗೆ ಒಳ್ಳೆಯ ಬೆಲೆ ಬರುತ್ತದೆ". ಭಾರತೀಯ ಚಿತ್ರಕಲೆಯ ಬಗ್ಗೆ ಪಾಟೀಲರಿಗೆ ಗೌರವವಿದೆ. ಆದರೆ "ಮಾಡರ್ನ್ ಆರ್ಟ್" ತೋರಿಸುವಂಥದನ್ನು "ಭಾರತೀಯ ಕಲೆ" ತೋರಿಸಲಾರದು. ಭಾರತೀಯ ಕಲೆಯಲ್ಲಿ ಹೆಸರು ಮಾಡಿರುವ ರಾಗಮಾಲಿಕೆ ಚಿತ್ರಗಳಲ್ಲಿ, ರಜಪೂತ ಮತ್ತು ಮೊಗಲ ಶೈಲಿಯ ಚಿತ್ರಗಳನ್ನು "ಮಾಡರ್ನ್ ಆರ್ಟ್"ದಿಂದ ತೋರಿಸುವುದು ಸಾಧ್ಯವೆಂದು ಪಾಟೀಲರ ಅಭಿಪ್ರಾಯ. "ನವ್ಯಕಲೆ ಅರ್ಥವಾಗುವುದಿಲ್ಲವೆಂದು ಬಿಟ್ಟು ಬಿಟ್ಟರೆ ಅದು ಕೊನೆಯವರೆಗೂ ಅರ್ಥವಾಗದೇ ಉಳಿಯುತ್ತದೆ. ಮತ್ತೆ ಮತ್ತೆ ನೋಡಿ ಸ್ವಲ್ಪ ವಿಚಾರಿಸಿದರೆ ತಿಳಿದುಕೊಳ್ಳಲು ಅನುಕೂಲವಾಗುತ್ತದೆ. ಕಲೆ ಅರ್ಥವಾಗಬೇಕಾದರೆ ಬೇರೆ ಬೇರೆ ಕಲಾವಿದರ ಕೃತಿಗಳು ನಮ್ಮ ಜನಕ್ಕೆ ನೋಡಲು ಸಿಗಬೇಕು. ಇದು ಮುಖ್ಯ!"

ಪಾಟೀಲರ ಕೃತಿಗಳು ಈಗ ಹೈದರಾಬಾದ್‌ನಲ್ಲಿವೆ; ವೆಂಕಟಪ್ಪ ಆರ್ಟ್ ಗ್ಯಾಲರಿಯನ್ನು ಅಲಂಕರಿಸಿವೆ; ಕೇಂದ್ರ ಹಾಗೂ ರಾಜ್ಯ ಲಲಿತ ಕಲಾ ಅಕಾಡೆಮಿಗಳು ಅವನ್ನು ಕೊಂಡಿವೆ. ದೇಶದೊಳಗೆ ಹಾಗೂ ಹೊರಗಿನವರ ಕಲಾ ಸಂಗ್ರಹಗಳಲ್ಲಿ ಇವರ ಕೃತಿಗಳು ಸೇರಿವೆ.

ಪಾಟೀಲರಿಗೆ ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ.

ಸಂಘಟನೆ – ಸಂಸ್ಮರಣೀಯ ಮೈಲುಗಲ್ಲುಗಳು

ಕಲಾವಿದರ ಸಂಘಟನೆಯಲ್ಲೂ ಪಾಟೀಲರು ತೊಡಗಿದ್ದು ಉಂಟು. ಬೆಂಗಳೂರಿನ ಕಲಾ ಅಭಿವೃದ್ಧಿ ಸಂಘದ ಆಶ್ರಯದಲ್ಲಿ ಕಲಾ ಪ್ರದರ್ಶನಗಳನ್ನು, ಪ್ರಾತ್ಯಕ್ಷಿಕೆಗಳನ್ನು ನಡೆಸಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರಿ ಕಲಾವಿದರ ಸಂಘದ ಅಧ್ಯಕ್ಷರಾಗಿ ಇವರು ಕೆಲಸ ಮಾಡಿದ್ದಾರೆ.

ಪಾಟೀಲರ ಕಲಾ ಜೀವನದಲ್ಲಿ ಅವಿಸ್ಮರಣೀಯವಾದ ಮೈಲುಗಲ್ಲುಗಳು ಎನ್ನಿಸಬಲ್ಲ ಅನೇಕ ಸಂದರ್ಭಗಳಿವೆ. ಅವುಗಳಲ್ಲಿ ಮುಖ್ಯವಾದವೆಂದರೆ ಗುರುವಾಯೂರಿನಲ್ಲಿ ಏರ್ಪಡಿಸಲಾಗಿದ್ದ ೧೦ ದಿನಗಳ "ಮ್ಯೂರಲ್ ಪೈಂಟಿಂಗ್"ನ್ನು ಕುರಿತ ಕಾರ್ಯಾಗಾರ. ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ ಏರ್ಪಡಿಸಿದ್ದ ಈ ಕಾರ್ಯಾಗಾರದಲ್ಲಿ ಕೇರಳದ ಜ್ಞಾನಪೀಠ ಪ್ರಶಸ್ತಿ ವಿಜೇತರು, ಚಿತ್ರಕಾರರು ಇವರೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳುವಂಥ ವಿಶಿಷ್ಟ ಅನುಭವ. ಕೇರಳದ ಜನರು ಹೊರಗಿನಿಂದ ಬಂದಂಥ ಕಲಾವಿದರಿಗೆ ತೋರುವ ಗೌರವ ಆದರ ಮನಮುಟ್ಟಿದಂಥ ಸಂಗತಿ. ರಾಜ್ಯದಲ್ಲೇ ಕಲಬುರ್ಗಿ ಹಾಗೂ ಕಿತ್ತೂರಿನಲ್ಲಿ ಪ್ರಾಚ್ಯ ಸಂಶೋಧನಾ ಇಲಾಖೆಯ ಆಶ್ರಯದಲ್ಲಿ ಏಕವ್ಯಕ್ತಿ ಪ್ರದರ್ಶನಗಳನ್ನು ನೀಡಿದ್ದಾರೆ.

ಇದೇ ರೀತಿ ಪಾಂಡಿಚೆರಿಯಲ್ಲಿ ನಡೆದ ೧೦ ದಿನಗಳ ಅವಧಿಯ ಶಿಬಿರದಲ್ಲಿ ರಾಷ್ಟ್ರದ ಹತ್ತು ಕಲಾವಿದರಲ್ಲಿ ಪಾಟೀಲರೂ ಸೇರಿದ್ದರು. ಪಾಟೀಲರು ಇಲ್ಲಿ ಶಾಲಾ ಮಕ್ಕಳಿಗೆ ವ್ಯಕ್ತಿ ಚಿತ್ರ ರಚನೆಯನ್ನು ತೋರಿಸಿಕೊಟ್ಟಾಗ ಸುತ್ತಮುತ್ತಲಿನ ಅನೇಕ ಶಾಲೆಗಳ ಮುಖ್ಯಸ್ಥರು ಆಗಮಿಸಿ ಇವರ ಕೃತಿಗಳನ್ನು ವೀಕ್ಷಿಸಿದ್ದರು. ಚೆನ್ನೈಯಲ್ಲಿ ನಡೆದ ದಕ್ಷಿಣ ವಲಯ ಸಾಂಸ್ಕೃತಿಕ ಉತ್ಸವದಲ್ಲಿ ಜಾನಪದ ಶೈಲಿಯಲ್ಲಿ "ಫಿಗರೇಟಿವ್" ಕೃತಿಯನ್ನು ಪಾಟೀಲರು ರಚಿಸಿದ್ದರು.

ಪಾಟೀಲರು ರಂಗಸಜ್ಜಿಕೆಯಲ್ಲೂ ಕೆಲಸ ಮಾಡಿದ್ದಾರೆ ಎನ್ನುವುದು ಪ್ರಾಯಶಃ ಹೆಚ್ಚಿನವರಿಗೆ ತಿಳಿಯದ ಸಂಗತಿ. ಆರ್. ನಾಗೇಶ್ ನಿರ್ದೇಶನದ "ತಬರನ ಕಥೆ", ಟಿ.ಎಸ್. ರಂಗಾ ಅವರ "ರಥ ಮೂಸಲ", ಚನ್ನಕೇಶವಮೂರ್ತಿಯ "ದೊಡ್ಡಪ್ಪ" ಈ ನಾಟಕಗಳಿಗೆ ನೇಪಥ್ಯದಲ್ಲಿ ಕೆಲಸ ನಿರ್ವಹಿಸಿದ್ದಾರೆ. "ಕಿತಾಪತಿ" ಹಾಗೂ "ಶಂಖನಾದ" ಚಲನಚಿತ್ರಗಳಲ್ಲೂ ಇವರು ಕೆಲಸ ಮಾಡಿದ್ದಾರೆ.

ನಾಲ್ಕು ಗೋಡೆಗಳ ಮಧ್ಯೆ ಎಂದೂ ತಮ್ಮನ್ನು ಬಂಧಿಸಿಕೊಳ್ಳಲಾರದ ಎಂ.ಬಿ. ಪಾಟೀಲರಿಗೆ ಹೋದೆಡೆಯಲ್ಲೆಲ್ಲ ಗೆಳೆಯರು. ಇವರಲ್ಲಿ ಕಲಾವಿದರಿದ್ದಾರೆ, ಪತ್ರಕರ್ತರಿದ್ದಾರೆ, ಶಿಕ್ಷಕರಿದ್ದಾರೆ, ಸಾಹಿತಿಗಳಿದ್ದಾರೆ. ಕೃಷ್ಣಮೂರ್ತಿ ಪುರಾಣಿಕ, ಡಿ.ಎಸ್. ಕರ್ಕಿ, ರಾವ್ ಬಹದ್ದೂರ್, ದು.ನಿಂ. ಬೆಳಗಲಿ, ಮ.ಗು. ಬಿರಾದರ, ಕುಂ. ವೀರಭದ್ರಪ್ಪ, ಬಿ.ಎ. ಸನದಿ, ಚನ್ನವೀರ ಕಣವಿ, ಜ.ಚ.ನಿ, ಪಾಂ.ವೆಂ. ಅಚಾರ್ಯ, ಶಾಂತರಸ, ಚಂದ್ರಶೇಖರ ಪಾಟೀಲ, ಬುದ್ಧಣ್ಣ ಹಿಂಗಮರೆ ಇವರೆಲ್ಲರೊಂದಿಗೆ ಪಾಟೀಲರು ಸ್ಮರಣೀಯ ಸಮಯವನ್ನು ಕಳೆದಿದ್ದಾರೆ. ಶಿವರಾಮ ಕಾರಂತರೂ ಇಡೀ ರಾತ್ರಿ ಕಲಾ ಶಿಬಿರದಲ್ಲಿ ಕೂತು ಚಿತ್ರಕಲೆ, ವಿಜ್ಞಾನ, ಸಾಹಿತ್ಯ, ಛಾಯಾಗ್ರಹಣ ಇವನ್ನು ಕುರಿತಂತೆ ಆಲೋಚನೆಗಳನ್ನು ಹಂಚಿಕೊಂಡಾಗ ಪಾಟೀಲರು ಇನ್ನಿತರ ಕಲಾವಿದರೊಂದಿಗೆ ಕಾರಂತರ ಮಾತಿಗೆ ಬೆರಗಾಗಿದ್ದಾರೆ.

ಪಾಟೀಲರ ಜೀವನ ದೃಷ್ಟಿ ಎಂಥಹುದು?

ಪಾಟೀಲರು ತಮ್ಮ ಬದುಕನ್ನು ಕುರಿತಂತೆ ಹಿನ್ನೋಟ ಬೀರಿದಾಗ ಅವರಿಗೆ ತಮ್ಮ ಬಾಲ್ಯ ಸುಖಕರವಾಗಿರಲಿಲ್ಲವೆಂಬುದು ನೆನಪಾಗುತ್ತದೆ. ವೃತ್ತಿಗೆ ಅಂಟಿಕೊಂಡಾಗಲೂ ಸುಖ ಸಿಗಲಿಲ್ಲ. ಸಾಂಸಾರಿಕ ಜೀವನದಲ್ಲೂ ಇವರ ಕಲೆಯ ಬಗ್ಗೆ ಪ್ರತಿಕ್ರಿಯೆ ದೊರೆಯಲಿಲ್ಲ. ಆದರೆ ಪಾಟೀಲರ ದೃಷ್ಟಿ ಮಾತ್ರ ನಿಚ್ಚಳವಾಗಿದೆ: "ನಾನು ಸತ್ಯದ ದಾರಿಯನ್ನೇ ಹಿಡಿದೆ. ನನ್ನನ್ನು ಅಣಕವಾಡುವವರಿಂದಲೇ ನಾನು ಬೆಳೆದೆ. ಮತ್ತೊಬ್ಬರ ಬಗ್ಗೆ ಮಾತನಾಡುವುದಕ್ಕಿಂತಲೂ ಆ ಸಮಯವನ್ನು ನಮ್ಮ ಕೆಲಸಕ್ಕೆ ಬಳಸುವುದು ಉತ್ತಮ. ಸಮಯವನ್ನು ಯೋಗ್ಯವಾಗಿ ಬಳಸಬೇಕು. ಇಂದಿನ ಶ್ರಮವೇ ನಾಳಿನ ಭವಿಷ್ಯಕ್ಕೆ ದಾರಿ. ಒಬ್ಬ ಕಲಾವಿದ ಹೊಗಳಿಕೆ ಅಥವಾ ತೆಗಳಿಕೆಯಿಂದ ದೊಡ್ಡವನಾಗೊಲ್ಲ. ಆತನ ಕೃತಿಗಳೇ ಎಂದೆಂದಿಗೂ ಶಾಶ್ವತ. ಆತ ತನ್ನ ಕೃತಿಗಳಿಂದಲೇ ಎತ್ತರಕ್ಕೆ ಏರುತ್ತಾನೆ. ಅವನಿಗೆ ತನ್ನ ಕಲಾಕೃತಿಗಳಿಂದಲೇ ಪ್ರತಿಕ್ರಿಯೆ ಪ್ರತಿಫಲ ಇವೆರಡೂ ಸಿಗಬೇಕು. ತಾನು ರಚಿಸಿದ ಕೃತಿಯೊಂದರಿಂದಲೇ ಅವನಿಗೆ ಪ್ರತಿಕ್ರಿಯೆ ದೊರೆಯದೆ ಹೋದರೆ ಅಂಥ ಕೃತಿ ಅಪೂರ್ಣವೆಂದೇ ಅರ್ಥ."

ಉತ್ತರ ಕರ್ನಾಟಕದ ಸರಳ ವಾತಾವರಣದಲ್ಲಿ, ಸೋಗುಗಳಿಲ್ಲದ ಗೆಳೆಯರ ಮಧ್ಯೆ, ಕಲೆಯನ್ನು ಆರಾಧನಾ ದೃಷ್ಟಿಯಿಂದ ವೀಕ್ಷಿಸಬಲ್ಲ ರಸಿಕರ ಮಧ್ಯದಲ್ಲಿದ್ದ ಪಾಟೀಲರು ವೃತ್ತಿಯ ಸಲುವಾಗಿ ಧಿಡೀರನೆ ಬೆಂಗಳೂರಿಗೆ ಬರಬೇಕಾದಾಗ ಅವರಿಗೆ ಏನನ್ನಿಸಿರಬಹುದು? "ಬೆಂಗಳೂರಿನಲ್ಲಿ ಇರುವುದು ಕೇವಲ

ವ್ಯಾವಹಾರಿಕ ದೃಷ್ಟಿ" ಎನ್ನುತ್ತಾರೆ ಪಾಟೀಲರು. "ನನ್ನನ್ನು ದುರುಪಯೋಗ ಪಡಿಸಿ ಕೊಂಡವರೂ ಇದ್ದಾರೆ. ಆದರೆ ನಾನು ಅವರಿಗಾಗಿ ಮಾಡಿದ ಕೆಲಸವನ್ನು ಒಂದು ಸೇವೆ ಎಂಬುದಾಗಿ ಬಾವಿಸುತ್ತೇನೆ. ಅದು ನಾನು ಅವರಿಗಾಗಿ ನೀಡಿದ ಕೊಡುಗೆ, ಸಹಕಾರ ಎಂದು ತಿಳಿಯುತ್ತೇನೆ. ಆದರೆ ಕಲಾವಿದರೊಂದಿಗಿನ ಬಾಂಧವ್ಯ ನನಗೆ ತುಂಬಾ ಸಂತಸವನ್ನು ತಂದಿದೆ. ನಾನು ಯಾರ ಬಗ್ಗೆಯೂ ಎಂದೂ ಮನಸ್ಸಿನಲ್ಲಿ ಕಹಿಯನ್ನು ತುಂಬಿಕೊಂಡವನಲ್ಲ."

ಅನ್ಯಾಯದೊಂದಿಗೆ ಹೋರಾಡುವುವನ್ನೇ ತಮ್ಮ ಗುರಿಗಳಲ್ಲಿ ಒಂದನ್ನಾಗಿ ಪಾಟೀಲರು ಹೊಂದಿದ್ದರೂ ಅವರು ಹೆಚ್ಚಾಗಿ ವೈರಿಗಳನ್ನು ಕಂಡವರಲ್ಲ. ಯಾರನ್ನೂ ದ್ವೇಷಿಸಿದವರಲ್ಲ. ಇಂದಿನ ಕಲಾ ವಾತಾವರಣದ ಬಗ್ಗೆ ಪಾಟೀಲರ ಅಭಿಪ್ರಾಯ ಹೀಗಿದೆ: "ಇಪ್ಪತ್ತು ಇಪ್ಪತ್ತೈದು ವರ್ಷಗಳ ಹಿಂದಿದ್ದಂತೆ ಈಗ ಕಲಾವಿದನ ಅಯಾಮ ಸೀಮಿತವಾಗಿಲ್ಲ. ಹಲವಾರು ಮಾಧ್ಯಮಗಳು ಹುಟ್ಟಿಕೊಂಡಿವೆ. ಕೃತಿಗಳಿಗೆ ಅತ್ಯುತ್ತಮ ಮಾರುಕಟ್ಟೆಯೂ ಲಭ್ಯವಿದೆ. ಒಂದು ಕಾಲಕ್ಕೆ ವರ್ಷದಲ್ಲಿ ಒಂದೋ ಎರಡೋ ಪ್ರದರ್ಶನಗಳು ನಡೆಯುತ್ತಿದ್ದರೆ ಈಗ ಹಲವಾರು ಪ್ರದರ್ಶನಗಳು. ಕಮೀಷನ್ ಲಭ್ಯವಿದೆ. ಗ್ಯಾಲರಿಗಳಿವೆ. ಕಲಾವಿದನಿಗೆ ಬದುಕುವ ಸಾಮರ್ಥ್ಯವಿದ್ದರೆ ಬೆಳೆಯಲು ಅವನಿಗೆ ವಿಪುಲ ಅವಕಾಶಗಳಿವೆ. ಹೊರದೇಶಗಳಲ್ಲಿ ಭಾರತೀಯ ಕಲಾವಿದರ ಪ್ರವಾಸ, ಇಂಟರ್‌ನೆಟ್ ಮೂಲಕ ಕೃತಿಗಳ ವೀಕ್ಷಣೆ, ವಿದೇಶಗಳಿಗೆ ಕೃತಿಗಳ ರವಾನೆ ಇವೆಲ್ಲ ಈಗ ಸಾಮಾನ್ಯವಾಗಿವೆ. ತರುಣ ಕಲಾವಿದರಿಗೆ ಮಾರ್ಗದರ್ಶನ ವಿಪುಲವಾಗಿ ದೊರೆಯಬಲ್ಲ ಸಾಧ್ಯತೆಯಿದೆ."

ಎಂ.ಬಿ. ಪಾಟೀಲರ ಈ ಜೀವನ ವೃತ್ತಾಂತವನ್ನು ರಮೇಶ ಕೆಂಗೇರಿಯವರ ಮಾತಿನೊಂದಿಗೆ ಮುಗಿಸಬಹುದಾದರೆ ಇವರು "ಉತ್ತರ ಕರ್ನಾಟಕದ ವಿಜಾಪುರದ ಕರಿಮಣ್ಣಿನಲ್ಲಿ ಅರಳಿದ ಕಲಾಪ್ರತಿಭೆ." ಈ ಪ್ರತಿಭೆ ಇನ್ನೂ ಹತ್ತಾರು ವರ್ಷಗಳ ಕಾಲ ಕನ್ನಡ ನಾಡಿಗೆ ಹಾಗೂ ದೇಶಕ್ಕೇ ಹೆಮ್ಮೆಯನ್ನು ತಂದೀಯುವುದನ್ನು ಮುಂದುವರಿಸಲಿ.

ಎಂ.ಬಿ. ಪಾಟೀಲರ ಜೀವನ ಹಾಗೂ ವೃತ್ತಿಯ ವಿವರಗಳು

ಹೆಸರು : ಎಂ.ಬಿ. ಪಾಟೀಲ (ಮಲ್ಲಿಕಾರ್ಜುನ ಭೀಮನಗೌಡ ಪಾಟೀಲ)

ಜನ್ಮ ದಿನಾಂಕ : ೧೦-೧೨-೧೯೩೯

ಜನ್ಮ ಸ್ಥಳ : ತಿಕೋಟಾ, ವಿಜಾಪುರ ಜಿಲ್ಲೆ, ಕರ್ನಾಟಕ ರಾಜ್ಯ, ಭಾರತ

ಪತ್ರ ವ್ಯವಹಾರದ ವಿಳಾಸ : ನಂ. ೧೧, ಈಸ್ಟ್ ಪಾರ್ಕ್ ರಸ್ತೆ, ೧೭ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು - ೫೬೦ ೦೦೩, ಭಾರತ

ಶಿಕ್ಷಣ : ಜೆ.ಡಿ. ಆರ್ಟ್, ಮುಂಬೈ (೧೯೬೦-೬೪)
ನೂತನ ಕಲಾ ಮಂದಿರ, ಮುಂಬೈ

ಕಲಾ ಪ್ರದರ್ಶನಗಳು:

೧. **ಏಕ ವ್ಯಕ್ತಿ ಪ್ರದರ್ಶನಗಳು**

- ೧. ಗಾಂಧಿ ಶತಮಾನೋತ್ಸವ ವರ್ಷದ ಪ್ರದರ್ಶನ, ಹುಬ್ಬಳ್ಳಿ
- ೨. ಸ್ಕೂಲ್ ಆಫ್ ಆರ್ಟ್, ಧಾರವಾಡ (೧೯೭೪)
- ೩. ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ಕುರಿತು ಕೃತಿಗಳು, ಹುಬ್ಬಳ್ಳಿ (೧೯೭೪)
- ೪. ಪ್ರಾಚ್ಯ ಸಂಶೋಧನಾ ಇಲಾಖೆ, ಕಲಬುರ್ಗಿ (೧೯೭೭)
- ೫. ಪ್ರಾಚ್ಯ ಸಂಶೋಧನಾ ಇಲಾಖೆ, ಕಿತ್ತೂರು (೧೯೭೭)
- ೬. ಹೈದರಾಬಾದ್ ಬಾಲಭವನ (೧೯೭೯)
- ೭. ಕೃತ್ತಿಕಾ ಆರ್ಟ್ ಗ್ಯಾಲರಿ, ಬೆಂಗಳೂರು (೧೯೯೨)

೨. **ಸಾಮೂಹಿಕ ಪ್ರದರ್ಶನಗಳು**

- ೧. ಬಯಲು ಚಿತ್ರ ಕಲಾ ಪ್ರದರ್ಶನ, ಹುಬ್ಬಳ್ಳಿ (೧೯೭೫)
- ೨. ಮ್ಯಾಕ್ಸ್ ಮುಲ್ಲರ್ ಭವನ್, ಬೆಂಗಳೂರು (೧೯೭೫)
- ೩. ಅಲೈನ್ಸ್ ಫ್ರಾಂಕೈಸ್, ಬೆಂಗಳೂರು (೧೯೭೫)
- ೪. ಕರ್ನಾಟಕ ವೈದ್ಯಕೀಯ ಕಾಲೇಜು, ಹುಬ್ಬಳ್ಳಿ (೧೯೭೮)
- ೫. ಕಲಾಕೃತಿ ಬಳಗ, ಕಲಬುರ್ಗಿ (೧೯೮೦)
- ೬. ಸಮುಚ್ಚಯ, ಬೆಂಗಳೂರು (೧೯೮೪)
- ೭. ವಿ ಸೆವೆನ್, ಬೆಂಗಳೂರು (೧೯೮೫)
- ೮. ಕಲಾ ಅಭಿವೃದ್ಧಿ ಬಳಗ, ಬೆಂಗಳೂರು (೧೯೮೬)
- ೯. ವೆಂಕಟಪ್ಪ ಆರ್ಟ್ ಗ್ಯಾಲರಿ, ಬೆಂಗಳೂರು (೧೯೯೩)
- ೧೦. ಇಮೇಜ್ ಆರ್ಟ್ ಗ್ಯಾಲರಿ (೧೯೯೬, ೧೯೯೭)

೩. ಪಾಲ್ಗೊಂಡ ಶಿಬಿರಗಳು

೧. ನ್ಯಾಶನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ನವದೆಹಲಿ
೨. ಡೆಕೊ ಪ್ರದರ್ಶನ, ದಾವಣಗೆರೆ
೩. ಕೇಂದ್ರ ಹಾಗೂ ರಾಜ್ಯಲಲಿತ ಕಲಾ ಅಕಾಡೆಮಿ
೪. ಆರ್ಟ್ ಸೊಸೈಟಿ, ಮುಂಬೈ
೫. ಮುಂಬೈ ಆರ್ಟ್ ಸೊಸೈಟಿ
೬. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
೭. ಪೋಸ್ಟರ್ಸ್ ಕ್ಯಾಂಪ್, ಬೆಂಗಳೂರು
೮. ವ್ಯಕ್ತಿಚಿತ್ರ ಕ್ಯಾಂಪ್, ಯುವಜನ ಕೇಂದ್ರ, ಬೆಂಗಳೂರು
೯. ಆರ್ಟಿಸ್ಟ್ಸ್ ಕ್ಯಾಂಪ್, ಬೀದರ್
೧೦. ಡ್ರಾಯಿಂಗ್ ಕ್ಯಾಂಪ್, ಕಲಬುರ್ಗಿ
೧೧. ಬಂಧಮುಕ್ತ (ಬಾಂಗ್ಲಾ ಕವಿಗಳ ಗೋಷ್ಠಿ), ಹುಬ್ಬಳ್ಳಿ
೧೨. ವಿಶ್ವ ಕನ್ನಡ ಸಮ್ಮೇಳನ, ಮೈಸೂರು
೧೩. ದಕ್ಷಿಣ ವಲಯ ಶಿಬಿರ, ಮದರಾಸು (೧೯೮೭)
೧೪. ಆರ್ಟಿಸ್ಟ್ ಕ್ಯಾಂಪ್, ತುಮಕೂರು
೧೫. ಎಗ್ ಪ್ರೊಸೆಸ್ ಪೈಂಟಿಂಗ್ ಕ್ಯಾಂಪ್, ಅಲೈಯನ್ಸ್ ಫ್ರಾಂಚೈಸ್, ಬೆಂಗಳೂರು
೧೬. ಮ್ಯೂರಲ್ ಆರ್ಟಿಸ್ಟ್ ಕ್ಯಾಂಪ್, ಕೇರಳ (೧೯೯೧)
೧೭. ಪಾಂಡಿಚೆರಿ ಆರ್ಟಿಸ್ಟ್ ಕ್ಯಾಂಪ್, ಪಾಂಡಿಚೆರಿ (೧೯೯೨)
೧೮. ರಾಜ್ಯ ಲಲಿತ ಕಲಾ ಅಕಾಡೆಮಿ, ಮಡಿಕೇರಿ (೧೯೯೩)
೧೯. ಕ್ಯಾಂಪ್ ಡೈರೆಕ್ಟರ್, ಆರ್ಟ್ ಕ್ಯಾಂಪ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ (೧೯೯೫)
೨೦. ಕ್ಯಾಂಪ್ ಡೈರೆಕ್ಟರ್, ಆರ್ಟ್ ಕ್ಯಾಂಪ್, ಲಲಿತಕಲಾ ಅಕಾಡೆಮಿ, ಹಂಪಿ (೧೯೯೬)
೨೧. ಸೊನೆನ್‌ಗೆರಿ, ಮಂಗಳೂರು (೧೯೯೬)
೨೨. ಕಲಾಮೇಳ, ಸಪ್ತರಂಗ, ಬೆಳಗಾವಿ (೧೯೯೬)
೨೩. ಭಾರತೀಯ ವಿದ್ಯಾಭವನ, ಬೆಂಗಳೂರು (೧೯೯೭)

೪. ಪ್ರಾತ್ಯಕ್ಷಿತೆ - ಉಪನ್ಯಾಸಗಳು

೧. ಸ್ಕೂಲ್ ಆಫ್ ಆರ್ಟ್, ಧಾರವಾಡ
೨. ಸ್ಕೂಲ್ ಆಫ್ ಯೂತ್ ಫೋರಂ ಮತ್ತು ಆಕಾಶವಾಣಿ, ಕಲಬುರ್ಗಿ
೩. ಪ್ರಾಚ್ಯವಸ್ತು ಸಂಗ್ರಹಾಲಯ, ಕಿತ್ತೂರು
೪. ಕೆನ್ ಸ್ಕೂಲ್ ಆಫ್ ಆರ್ಟ್, ಬೆಂಗಳೂರು
೫. ರೈನ್‌ಬೋ ಆರ್ಟ್ ಕೌನ್ಸಿಲ್, ಧಾರವಾಡ
೬. ಸ್ಕೂಲ್ ಆಫ್ ಆರ್ಟ್, ದಾವಣಗೆರೆ
೭. ಚಾಳುಕ್ಯ ಕನ್ನಡ ಸಂಘ, ಕೆ.ಜಿ.ಎಫ್.

೭. ಚಾಳುಕ್ಯ ಕನ್ನಡ ಸಂಘ, ಕೆ.ಜಿ.ಎಫ್.

೮. ಚಿತ್ರಕಲಾ ಪರಿಷತ್, ಬೆಂಗಳೂರು

೯. ಕಲಾಯಾತ್ರ, ಶಿವಮೊಗ್ಗ ಮತ್ತು ಭದ್ರಾವತಿ

೧೦. ರಾಮನಗರ, ಬೆಂಗಳೂರು ಜಿಲ್ಲೆ

೫. ಚಿತ್ರಕಲೆಗಳ ಸಂಗ್ರಹ

೧. ಲಲಿತ ಕಲಾ ಅಕಾಡೆಮಿ, ಕರ್ನಾಟಕ ಸರ್ಕಾರ

೨. ಲಲಿತ ಕಲಾ ಅಕಾಡೆಮಿ, ಆಂಧ್ರಪ್ರದೇಶ

೩. ವೆಂಕಟಪ್ಪ ಆರ್ಟ್ ಗ್ಯಾಲರಿ, ಬೆಂಗಳೂರು

೪. ಮ್ಯಾಕ್ಸ್ ಮೆಲ್ಲರ್ ಭವನ್, ಬೆಂಗಳೂರು

೫. ಆದರ್ಶ್ ಡೆವೆಲಪರ್ಸ್, ಬೆಂಗಳೂರು

೬. ಕೇಂದ್ರ ಲಲಿತ ಕಲಾ ಅಕಾಡೆಮಿ, ನವದೆಹಲಿ

೭. ಇಮೇಜ್ ಆರ್ಟ್ ಗ್ಯಾಲರಿ, ಬೆಂಗಳೂರು

೮. ರೀಜನಲ್ ಆರ್ಟ್ ಸೆಂಟರ್, ಚೆನ್ನೈ

೯. ಹಿಂದೂಸ್ತಾನ್ ಲಿವರ್ ಕಂಪನಿ, ಬೆಂಗಳೂರು ಹಾಗೂ ಭಾರತ ಮತ್ತು ವಿದೇಶಗಳಲ್ಲಿನ ಖಾಸಗಿ ಸಂಗ್ರಹಗಳು.

ವಿಶೇಷ ಪರಿಣಿತಿ

ಭಾವ ಚಿತ್ರಗಳು, ಮ್ಯೂರಲ್‌ಗಳು, ಫಿಗರೇಟಿವ್ ಪೈಂಟಿಂಗ್

ಪ್ರಶಸ್ತಿಗಳು

ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ, ೧೯೮೬-೮೭



ಸಂಯೋಜನೆ, ತೈಲವರ್ಣ

Composition, Oil



ಸಂಯೋಜನೆ, ತೈಲವರ್ಣ

Composition, Oil



ಭಾವಚಿತ್ರ

Portrait



ಸಂಯೋಜನೆ Composition



ಸ್ತ್ರೀ -೨, ತೈಲವರ್ಣ ೨೪" x ೩೦" ***Women II,*** Oil 24" x 30"



ಸ್ತ್ರೀ -೧, ತೈಲವರ್ಣ ೨೪" x ೩೦" ***Women I,*** Oil 24" x 30"




ಸ್ತ್ರೀ -೩, ತೈಲವರ್ಣ ೨೪" x ೩೦" *Women III,* Oil 24" x 30"



-೪, ತೈಲವರ್ಣ ೨೪" x ೩೦" *Women IV,* Oil 24" x 30"




ಭಾವಚಿತ್ರ Portrait



ಭಾವಚಿತ್ರ Portrait




“ಪ್ಲೈವುಡ್ ಬರ್ನ್” "Plywood Burn"



ಎಂ.ಬಿ.ಪಾಟೀಲ ಜಾಕೀರಹುಸೇನರ ಭಾವ ಚಿತ್ರದೊಂದಿಗೆ
M.B.Patil with Zhakirhusain's Portrait



ನಿಸರ್ಗ, ತೈಲವರ್ಣ *Landscape*, Oil



ಸಂಯೋಜನೆ, ತೈಲವರ್ಣ *Composition*, Oil



ಸ್ವ ಚಿತ್ರ *Self Portrait*



ಪ್ಲೈವುಡ್‌ನಲ್ಲಿ "ಬರ್ನ್‌ತಾಂತ್ರಿಕತೆ"
"*Burn Technique*" on Plywood



ಸಂಯೋಜನೆ, ತೈಲವರ್ಣ *Compostion*, Oil




ಮೀನುಗಾರ್ತಿಯರು, ತೈಲವರ್ಣ *Fisherwomen*, Oil



ಕೋಲ್ಲಾಜ

Collage



"ಪ್ಲೈವುಡ್ ಬರ್ನಿಂಗ್"

"Plywood Burning"

President's Words

Karnataka Lalitha Kala Academy has been undertaking several schemes for the alround development of art and artists alike. The Academy has published books on many senior artists and contemporary artists. The books, not only describe the life and achievements of the concerned artists but also help to know the different stages of developments in the field of Art.

It is gratifying that in the series of contemporary artists, the book on Shri. M.B. Patil is being published during my tenure as the president of the Academy. I deem this event as my good fortune.

Even being in government service, Mr. Patil has been creative continuously and established himself as an important artist among the contemporary artists.

Smt. B.S. Venkatalakshmi after having a detailed discussions with the artist has written the book on the life and achievements of Mr. Patil. She also has rendered the same into English. I thank her on behalf of the Academy. Dr. H. Chandrashekhar a member of the Academy has corrected the proof and supervised the printing of the book. He also has provided a portrait photo (of Mr. Patil) which depicts the character of the artist. On behalf of the Academy thank Dr. Chandrashekhar for this purpose.

I hope that, as usual the lovers of Art will welcome this book.

Prof. V.G. Andani
President

M. B. PATIL - AN ARTIST BLOOMED IN THE BLACK SOIL OF BIJAPUR

M.B. Patil (Mallikarjuna Bimanna Gowda Patil) was born on 10-12-1939 at Tikota, a small town in Bijapur District in North Karnataka, known for its folklore and festivities. It is here the traditional festivals like the "Kar Hunnime" (held during June-July) and the "Ganesha Chaturthi" are celebrated with and grandeur since time immemorial providing an opportunity to the young and the old, rich and the poor to mingle with each other and share the joy and the thrill. Thanks to the creative and colourful atmosphere which surrounded his childhood, M.B. Patil has today earned a place among the leading painters of Karnataka.

M.B. Patil is one of those who came from a rural background, has grown up as a village boy. Patil inspite of his fame and status in the arena of art has been able to retain simplicity and straight forwardness even to this day and remain extremely unassuming artist who is to celebrate his 60th birthday shortly is one of those who have clear vision about their goals and priorities. Despite the hardship he has faced at various steps of his life and career, he has been able to create a niche for himself in the field of art, thanks to his faith in his ability.

Down the memory lane, M.B. Patil has several anecdotes to narrate regarding his childhood. The artist in him was even vigilant right from his formative years and even simple occasions provided him an opportunity to imbibe art, even without his own knowledge as a young boy. Patil had Lakshmana Kumbara, a young potter of his native place as his role model. While Lakshmana created clay ox and painted them with improvised colour powders obtained by pounding the locally available stone particles of

various colours and hues, Patil used to find explicit joy by merely looking at those cute pieces. When his friend Thammanna's father moulded Ganesha idols, Patil stood gazing at them with awe and wonder. Enthralled by their colour and beauty young Patil used to visit each and every house in the town where the clay idols were kept merely with the intention of studying their shapes and designs. At the end of the festivities it was Patil's turn to try his hand in the creation of similar idols. He used to sit alone amidst the trees after gathering clay from different places and spent several hours, mixing water to the mud and moulding the idols into various shapes. Those idols used to serve as his toys and provided consolation when he felt lonely and neglected.

M.B. Patil is the son of Bimana Gowda Patil and Bhagirathi. BimanaGowda and Bhagirathi had lost three daughters before Patil's birth. Patil grew up with his parents, two elder brothers, one younger brother and a sister. But at a later stage Patil lost his younger brother also. Burdened with the responsibility of looking after a big family, Bimana Gowda was looking after the accounts in a cloth merchant's shop to earn his livelihood before Patil's birth and later on he became the owner of that tiny shop. He is an honest man but very strict in nature. Patil who rarely put forth his demands to his father was free to talk to his eldest brother Shivanna Gowda though his relationship with his second brother remained sore almost till the end.

Bimana Gowda admitted Patil to a local school when he came of age with great reluctance. Since Patil's elder brothers were attending the school it was Bimana Gowda's contention that there was no need to give education to Patil. He discontinued Patil's education and put him in charge of looking after cows and buffaloes. Patil though was greatly disappointed by his father's attitude towards him could not agree with the father. Patil had to leave home early in the morning along with lunch box and graze cattle till the dusk. He used to sit in the midst of trees staring at the sky and the hillocks wondering at the nature's creations.

Bimana Gowda had some property at Dandargi, which was a few miles away from Tikota. There lived Patil's grand mother. When Patil was sent to Dandargi, though he was relieved of the duty of grazing cattle, he was made to go to forest, collect the fuel and bring it home. His grandmother too was very harsh and on days when Patil was unable to bring fuel home, he had to miss his food as a punishment for neglecting the duty! The villagers included Bimana Gowda's friends and on a particular day when they were all sitting on a village platform chanced to see Patil carrying fuel on his head. Immediately the elders summoned him and shouted "Have you been born to go to school or to bring fuel to your grandmother's home? Dear boy, you have to go to school and become an educated person. In case we see you again doing this work, you may have to face serious consequences." They also warned Patil's grandmother against using this young boy for hard work. When Bimana Gowda came to know of this episode he recalled Patil to Tikota and admitted him to the local school.

By the time Patil rejoined the school all his old classmates were in higher classes. The school master was harsh and his punishments were somewhat barbaric. Patil who all these years was busy grazing cattle and collecting fuel could not even write his name. It was then Patil, scared of punishment in the school, approached Basappa Badachi, his close friend and requested him to teach lessons right from the alphabet. So earnest was his effort, in the examination at the end of the year, Patil stood first in the class and earned a scholarship of 36 rupees. As per the school rules, the scholarship amount had to be given to Patil's father personally. When they sent the word to Bimana Gowda, who was not aware of his son's capability sarcastically remarked: "Perhaps my son's teacher must have bought some clothes from my shop on credit, to express his gratitude he must have given marks to my son".

It was only when Head Master himself lauded Patil, Bimana Gowda could believe that Patil had scored the highest marks. When Bimana Gowda, as a mark of appreciation gave a rupee to his son from the scholarship amount,

Patil took all his friends to one and the only hotel in Tikota, which he had seen all these days only from a distance! Later, when Patil started taking tutions from Poojar master and Bhimanna Madar in the evenings, he had to face lot of resistance from his father, as these teachers were cobblers by caste. Patil had high regard for all his teachers alike, though their caste played a great role in those days, but his special liking was for A.S. Buruda, the drawing teacher. This admiration was mutual as Buruda also recognised the artistic talent in Patil. At that time, Patil had not seen any painting except those which had been reproduced in calendars. The Ramayana scenes, Sri Rama's dress and the jewellery, his bow and the arrow used to thrill Patil. When the master was knitting the basket, Patil used to watch him with wonder. These were the things which attracted Patil towards creativity during his formative years and gradually he was exposing himself to the outside world. At that time Tikota belonged to Kurandawada province which was adjacent to Bombay province. Patil had seen Morarji Desai, B.D. Jatti and other political leaders addressing huge gatherings. Those were the days when freedom struggle was at its peak. The folk musicians and the horse riders who used to roam in the streets singing lyrics praising Subhash Chandra Bose, Mahatma Gandhi, Kittur Channamama greatly attracted Patil and Patil used to watch them entering toddy tree jungle *"Sindi Bana"* to carry out their political activities. Whenever they heard footsteps of police, they used to disperse seeking shelter in the houses. The *"Sindhi Bana"* was a mysterious place as far as young Patil was concerned.

Love for Theatre

It was during Patil's school days a drama troupe arrived at Bijapur. Patil curiously attended the dramas staged by it. At a later date in Tikota, when one of the local troops enacted dramas like "Matanga Kanya", "Badathanad Bhoota", written by Kandagal Hanumantarao, Patil got a chance to play a role in it. He was scared to inform this to his father and attended the rehearsals without obtaining his permission. The troupe had successfully put up two shows and on the third day, when local people had gathered in large

numbers to witness the play, Bimana Gowda who was at house could somehow recognise the voice of his son, unable to understand what was happening, he entered the theatre only to see his son performing on the stage! Patil studied in Tikota till 7th standard and joined Sri Siddeshwara High School (S.S. School) at Bijapur which was 13 miles away from Tikota. No private buses were plying to Bijapur from Tikota in those days, the only one government bus used to run in the entire day.Therefore Patil had to live in a rented room in Bijapur along with his friends. While his rich friends could spend money unhesitatingly, Patil had to make both ends meet with a meagre sum of Rs. 10 per month sent by his father. Patil's eldest brother Shivanagowda could understand the predicament of his brother in the company of rich friends and in order to save him of the embrassment he arranged a separate room with the help of his friend Tikotikar.

Entry into art

M.B. Patil's talent in art came to light for the first time when his brother Shivanna Gowda launched a group called "Geleyara Balaga" and launched a hand written monthly called "Vasantha". Patil who was too eager to give vent to his artistic abilities made best use of the cover pages of "Vasantha". The "Geleyara Balaga" used to invite Miriji Annaraya, B.T. Sasanur, Simpi Linganna as speakers for its functions. When T.T. Sharma and R.S. Mugali were making speeches as chief guests at the silver jubilee celebrations of P.D.G. High School, Patil surprised every one by drawing their portraits. He used to draw "Landscapes" with the help of "Rangoli" (colour powder) at the competitions. When Patil was about 15 years old, the drama troupe of Subbiah Naidu camped at Bijapur and staged plays like "Kurukshetra", "Banasiga Bheema", "Bhaktha Ambaresha". The scenery for the plays were done by experts like Kendhule and Dhotre. Patil who was highly impressed by the stage used to run as soon as the plays were over and drew big sketches of Duryodhana, Bheema and others on the walls with the help of charcoal. The drama sequences used to make deep impact on Patil's mind and as a result he drew Duryodhana as wicked and Bheema as a strong man.

Ashwathama's figure used to be sketched ghastly. Such compositions, with mythological and social background were gradually being formed in Patil's mind.

M.B. Patil passed S.S.C. examination in 1960 but his attention was engulfed with painting.

That was a time when the ambition of all art loving students was to study in Mumbai art schools. But in Patil's family no one had any appreciation for fine arts and even Shivana Gowda's knowledge was too limited in this regard. When Patil was too keen to leave for Mumbai to learn drawing and painting, his father sought the suggestion of his drawing master V.K. Patil and as per his advice wrote to one Sripathi Sonar about his son. This gentleman was a gold smith by profession but was employed in a Design centre in Mumbai. Patil's father could listen to V.K. Master because he was the student of Patil's grandfather and was a well wisher.

By the time a reply came from Sripathi Sonar, Patil was taken to J.J. School of Art in Mumbai, the admissions for that particular year were closed. Shivanna Gowda, who had accompanied Patil had no heart to bring back his brother to Tikota. He took him to Dandavathi Muth who was incharge of Nutana Kala Mandir and left Patil to his care.

Dandavathi Muth was an artist who had made a very big name then. He was from Bailahongal in Belgaum District. Though he started his career as a Sanitary Inspector, a few prominent persons of the firm who noticed his talent in art had sent him to Mumbai. When the first Principal of Nutana Kala Mandira, D.G. Badagera was appointed for Prestigious posts of Royal Academy, Dandavathi Muth had been chosen for the post of the principal. By the time Patil joined this Institution, it was celebrating its 25th anniversary. Besides Dandavathi Muth, Nutana Kala Mandir had talented persons like Dayananda Shetty, Hegde, Mayya as teachers.

Patil, as a student used to get 100 rupees for his expenses and by paying 75 rupees per month he was able to get an accommodation at Mumbai. Dur-

